ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 17 | ಸಂಚಿಕೆ 46-47 | ರೂ. 2.00 | 18 ನವಂಬರ್ 1995

ಡಿಸೆಂಬರ್‌ನಲ್ಲಿ ದೇಶಾದ್ಯಂತ ಸಾಮೂಹಿಕ ಆಂದೋಲನಗಳು

ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ಜನಗಳ ತುರ್ತು ಬೇಡಿಕೆಗಳ ಮೇಲೆ ಡಿಸೆಂಬರ್ ತಿಂಗಳ ಆರಂಭದಲ್ಲಿ ದೇಶಾದ್ಯಂತ ಸಾಮೂಹಿಕ ಆಂದೋಲನಗಳನ್ನು ನಡೆಸಬೇಕೆಂದು ಸಿಪಿಐ(ಎಂ) ಕೇಂದ್ರ ಸಮಿತಿ ಪಕ್ಷದ ಎಲ್ಲಾ ಘಟಕಗಳಿಗೆ ಕರೆ ನೀಡಿದೆ. ಈ ಸಮೂಹಿಕ ಹೋರಾಟಗಳಿಗೆ ಜನಗಳನ್ನು ಅಣಿನೆರೆಸಬೇಕು, ಇತರ ಎಡಪಕ್ಷಗಳನ್ನು ಈ ಹೋರಾಟಗಳಲ್ಲಿ ಜತೆಗೂಡುವಂತೆ ಸರ್ವಪ್ರಯತ್ನ ನಡೆಸಬೇಕು ಎಂದೂ ಕೇಂದ್ರ ಸಮಿತಿ ಕರೆ ನೀಡಿದೆ.

ಈ ನಿರ್ಣಯ ಹಾಗೂ ಎಲ್ಲಾ ಎಡ, ಜಾತ್ಯಾತೀತ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಒಟ್ಟುಗೂಡಿಸುವ ಪ್ರಯತ್ನದಲ್ಲಿ ಆಗಿರುವ ಪ್ರಗತಿ ಬಿಜೆಪಿ ಮತ್ತು ಕಾಂಗ್ರೆಸ್(ಐ) ಎರಡನ್ನೂ ಎದುರಿಸಿ ಒಂದು ಪರಿಣಾಮಕಾರಿ ಮೂರನೇ ಪರ್ಯಾಯ ಮೂಡಿ ಬರಲು ಹಾದಿ ಮಾಡಿಕೊಡುತ್ತದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಜನಗಳ ತುರ್ತು ಬೇಡಿಕೆಗಳು

ಕೇಂದ್ರ ಸಮಿತಿ ಈ ಕೆಳಗಿನ ಒಂಭತ್ತು ತುರ್ತು ಬೇಡಿಕೆಗಳನ್ನು ಕೈಗೆತ್ತಿಕೊಂಡು ಡಿಸೆಂಬರ್ ಆರಂಭದಲ್ಲಿ ಸಾಮೂಹಿಕ ಆಂದೋಲನಗಳನ್ನು ನಡೆಸಬೇಕೆಂದು ಕರೆ ನೀಡಿದೆ.

1. ಸಾರ್ವಜನಿಕ ವಿತರಣಾ(ರೇಶನ್) ವ್ಯವಸ್ಥೆಯನ್ನು ಬಲಪಡಿಸಿ 14 ಜೀವನಾವಶ್ಯಕ ಸಾಮಗ್ರಿಗಳನ್ನು ಪೂರೈಸಬೇಕು; ರೇಶನ್ ಅಂಗಡಿಗಳ ಮೂಲಕ ಒದಗಿಸುವ ಆಹಾರ ಧಾನ್ಯಗಳ ಬೆಲೆಗಳನ್ನು ಶೇ. 50ರಷ್ಟು ಇಳಿಸಬೇಕು.

2. ಆಹಾರ ದಾಸ್ತಾನನ್ನು ಗ್ರಾಮೀಣ ಪ್ರದೇಶಗಳಲ್ಲಿ 'ಕೆಲಸಕ್ಕಾಗಿ ಆಹಾರ' ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡಬೇಕು.

3. ಸಾರ್ವಜನಿಕ ವಲಯದ ಘಟಕಗಳ ಶೇರುಗಳ ಮಾರಾಟ ಹಾಗೂ ಘಟಕಗಳನ್ನು ಮುಚ್ಚುವುದನ್ನು ನಿಲ್ಲಿಸಬೇಕು.

4. ಭೂಮಿತಿ ಮೀರಿದ ಮಿಗುತೆ ಭೂಮಿಯನ್ನು ಹಾಗೂ ಸಾಗುವಳಿ-ಯೋಗ್ಯ ಬಂಜರು ಭೂಮಿಯನ್ನು ಭೂ ಹೀನರಲ್ಲಿ ಹಂಚಬೇಕು. ಕೃಷಿ ಕಾರ್ಮಿಕರಿಗೆ ಕೇಂದ್ರೀಯ ಶಾಸನವನ್ನು ಅಂಗೀಕರಿಸಬೇಕು. ಕೃಷಿ ಕಾರ್ಮಿಕರಿಗೆ ಕೂಲಿ ಹೆಚ್ಚಿಸಲು ಹೋರಾಟಗಳು

5. ಶಿಕ್ಷಣದ ಖಾಸಗೀಕರಣ, ವ್ಯಾಪಾರೀಕರಣ ನಿಲ್ಲಿಸಬೇಕು.

6. ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಹೆಚ್ಚು ಸಂಪನ್ಮೂಲಗಳನ್ನು ನೀಡಬೇಕು.

7. ಮಹಿಳೆಯರಿಗೆ ಸಮಾನ ವೇತನ ಹಾಗೂ ಮನೆಯಲ್ಲಿ ಕೆಲಸ ಮಾಡುವ ಕಾರ್ಮಿಕರ ರಕ್ಷಣೆಗೆ ಶಾಸನ

8. ಪ್ರವಾಹ ಪೀಡಿತ ರಾಜ್ಯಗಳಿಗೆ ಪೂರ್ಣ ಪರಿಹಾರ, ಪುನರ್ವಸತಿ ಒದಗಿಸಬೇಕು.

9. ಚಂದ್ರಸ್ವಾಮಿಯನ್ನು ಬಂಧಿಸಿ ಅವರ ವಿರುದ್ಧ ಕ್ರಮ ಜರುಗಿಸಬೇಕು, ಹವಾಲಾ ಹಗರಣದ ಎಲ್ಲಾ ಅಪರಾಧಿಗಳ ವಿರುದ್ಧ ಕ್ರಮ ಜರುಗಿಸಬೇಕು.

ಅಕ್ಟೋಬರ್ 14ರಿಂದ 20ರವರೆಗೆ ನಡೆದ ಕೇಂದ್ರ ಸಮಿತಿಯ ಮೂರು ದಿನಗಳ ಸಭೆಯ ನಂತರ ಪತ್ರಿಕಾ ಸಮ್ಮೇಳನವೊಂದನ್ನು ಉದ್ದೇಶಿಸಿ ಮಾತನಾಡುತ್ತಾ ಸುರ್ಜಿತ್ "ಎಡ ಜಾತ್ಯಾತೀತ ಹಾಗೂ ಪ್ರಜಾಪ್ರಭುತ್ವವಾದಿ ಪರ್ಯಾಯ ಮುಂಬರುವ ತಿಂಗಳುಗಳಲ್ಲಿ ಖಂಡಿತಾ ಅತ್ಯಂತ ದೊಡ್ಡ ಶಕ್ತಿಯಾಗುತ್ತದೆ" ಎಂದರು ಆಂಧ್ರಪ್ರದೇಶದಲ್ಲಿ ಹಿನ್ನಡೆಯಾಗಿದ್ದರೂ ಮೂರನೇ ಪರ್ಯಾಯವೊಂದನ್ನು ಕಟ್ಟುವಲ್ಲಿ ಉತ್ತಮ ಪ್ರಗತಿಯಾಗಿದೆ ಎಂದರು.

ಬಿಜೆಪಿಯ ಬೊಗಳೆ ಬಯಲು

ಗುಜರಾತಿನ ಹೊಲಸು ಬೆಳವಣಿಗೆಗಳು, ಅವುಗಳ ಬೆನ್ನ ಹಿಂದೆಯೇ ಉತ್ತರ ಪ್ರದೇಶದಲ್ಲಿ ಬಿಎಸ್ ಪಿ-ಬಿಜೆಪಿ ಸಮಯಸಾಧಕ ಮೈತ್ರಿ ಮುರಿದು ಬಿದ್ದದ್ದು ತಾನೊಂದು ಭಿನ್ನ ರೀತಿಯ ಪಕ್ಷ, ತಾನು ಮಾತ್ರ ಕಾಂಗ್ರೆಸ್(ಐ)ಗೆ ಒಂದು ನೀತಿ ಬದ್ಧ ಪರ್ಯಾಯ ನೀಡಲು ಸಮರ್ಥ ಎಂಬ ಬಿಜೆಪಿಯ ಬೊಗಳೆಯನ್ನು ಬಯಲಿಗೆಳೆದಿದೆ ಎಂದು ಸುರ್ಜಿತ್ ಹೇಳಿದರು. ಬಿಜೆಪಿಯ ಈ ತೀವ್ರ ಹಿನ್ನಡೆಯ ಲಾಭ ಕಾಂಗ್ರೆಸ್(ಐ)ಗೆ ನೆರವಾಗುವುದಿಲ್ಲ. ಏಕೆಂದರೆ ಅದು ತನ್ನ ವಿನಾಶಕಾರಿ ಆರ್ಥಿಕ ನೀತಿಗಳು ಹಾಗೂ ಲಂಗುಲಗಾಮಿಲ್ಲದ ಭ್ರಷ್ಟಾಚಾರದಿಂದಾಗಿ ಜನಗಳಿಂದ ಹೆಚ್ಚು ಹೆಚ್ಚು ದೂರವಾಗುತ್ತಿದೆ ಎಂದು ಅವರು ವಿವರಿಸಿದರು. ಚಂದ್ರಾಸ್ವಾಮಿ ಪ್ರಕರಣ ಈ ಭ್ರಷ್ಟಾಚಾರಕ್ಕೆ ಕಣ್ಣಿಗೆ ರಾಚುವಂತಹ ಉದಾಹರಣೆ. "ಅವರಷ್ಟೇ ಪ್ರಯತ್ನಿಸಲಿ, ಇನ್ನು ಯಾರೂ ಚಂದ್ರಸ್ವಾಮಿಯನ್ನು ರಕ್ಷಿಸಲು ಸಾಧ್ಯವಿಲ್ಲ" ಎಂದು ಸುರ್ಜಿತ್ ಹೇಳಿದರು. ಕರ್ನಾಟಕದಲ್ಲಿ ಎಸ್. ಬಂಗಾರಪ್ಪ ದೇವೇಗೌಡರೊಂದಿಗೆ ಕೈಜೋಡಿಸಲು ಪ್ರಯತ್ನಿಸುತ್ತಿರುವುದು ಕಾಂಗ್ರೆಸ್(ಐ) ಒಂದು ಗೆಲ್ಲುವ ಶಕ್ತಿ ಎಂಬ ವಿಶ್ವಾಸವೇ ಯಾರಿಗೂ ಉಳಿದಿಲ್ಲ ಎಂಬುದನ್ನು ತೋರಿಸುತ್ತದೆ ಎಂದು ಸುರ್ಜಿತ್ ಅಭಿಪ್ರಾಯಪಟ್ಟರು.

ಮೂರನೇ ಪರ್ಯಾಯ

ಬಿಜೆಪಿಯೇತರ, ಕಾಂಗ್ರೆಯೇತರ ಶಕ್ತಿಗಳ ನಡುವೆ ಏರ್ಪಡಬಹುದಾದ ಮೈತ್ರಿಗಳ ಬಗ್ಗೆ ಪತ್ರಕರ್ತರು ಕೇಳಿದ ಹಲವಾರು ಪ್ರಶ್ನೆಗಳಿಗೆ ಉತ್ತರಿಸುತ್ತ ಸುರ್ಜಿತ್ ತಮಿಳುನಾಡಿನಲ್ಲಿ ಎಐಎಡಿಎಂಕೆಯನ್ನು ಸಿಪಿಐ(ಎಂ) ದೃಢವಾಗಿ ವಿರೋಧಿಸುತ್ತದೆ ಹಾಗೂ ಆ ರಾಜ್ಯದಲ್ಲಿ ಅದರ ವಿರುದ್ಧ ಹೋರಾಟ ನಡೆಸುತ್ತದೆ ಎಂದು ಪುನರುಚ್ಚರಿಸಿದರು. ಎಐಎಡಿಎಂಕೆ ರಾಷ್ಟ್ರೀಯ ರಂಗ ಸೇರಿದರೆ ಸಿಪಿಐ(ಎಂ) ನಿಲುವೇನು ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಸಿಪಿಐ(ಎಂ) ತನ್ನ ವಿರೋಧವನ್ನು ಮುಂದುವರಿಸುತ್ತದೆ, ಆದರೂ ರಾಷ್ಟ್ರೀಯ ರಂಗ ಮೈತ್ರಿ ಮಾಡಿಕೊಳ್ಳುವುದಾದರೆ ಈ ಅಂಶದ ಮೇಲೆ ಸಿಪಿಐ(ಎಂ) ರಾಷ್ಟ್ರೀಯ ರಂಗದೊಡನೆ ಸಂಬಂಧ ಕಡಿದುಕೊಳ್ಳುವುದಿಲ್ಲ ಎಂದು ಸುರ್ಜಿತ್ ಸ್ಪಷ್ಟಪಡಿಸಿದರು. ಹಿಂದೆ 1989ರಲ್ಲಿ ಎಜಿಪಿಗೆ ಸಂಬಂಧಪಟ್ಟಂತೆ ಪಕ್ಷ ಇಂತಹುದೇ ನಿಲುವು ತಳೆದುದನ್ನು ನೆನಪಿಸುತ್ತಾ "ನಮ್ಮ ಸ್ವತಂತ್ರ ನಿಲುವನ್ನು ಉಳಿಸಿಕೊಳ್ಳುತ್ತಾ ಅದೇ ವೇಳೆಗೆ ಎಡ, ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯಾತೀತ ಶಕ್ತಿಗಳನ್ನು ಒಗ್ಗೂಡಿಸುವ ನಮ್ಮ ಪ್ರಯತ್ನಗಳಲ್ಲಿ ನಾವು ಪರಸ್ಪರ ಹೊಂದಿಕೊಳ್ಳಲು ಪ್ರಯತ್ನಿಸುತ್ತೇವೆ" ಎಂದರು.

ಎ.ಜಿ.ಪಿ. ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ಆ ಪಕ್ಷ ಅಲ್ಪಸಂಖ್ಯಾತರ ಬಗ್ಗೆ ತನ್ನ ನಿಲುವು ಬದಲಿಸಿದೆ, ಅವರು ಬಿಜೆಪಿಯೊಡನೆ ಸಂಬಂಧ ಏರ್ಪಡಿಸದಂತೆ ನೋಡಿಕೊಳ್ಳುತ್ತೇವೆ ಎನ್ನುತ್ತಾ ಎಜಿಪಿಯೊಡನೆ ಅಸ್ಸಾಂನಲ್ಲಿ ಸ್ಥಾನಗಳ ಹೊಂದಾಣಿಕೆ ಮಾಡಿಕೊಳ್ಳಬೇಕೆಂಬ ಅಸ್ಸಾಂ ಘಟಕದ ನಿರ್ಣಯಕ್ಕೆ ಕೇಂದ್ರ ಸಮಿತಿ ಅನುಮೋದನೆ ನೀಡಿದೆ ಎಂದು ತಿಳಿಸಿದರು.

ಬಹುಜನ ಸಮಾಜ ಪಕ್ಷ (ಬಿಎಸ್ ಪಿ)ಗೆ ಮೂರನೇ ಪರ್ಯಾಯದಲ್ಲಿ ನಿಮ್ಮ ಸ್ವಾಗತವಿದೆಯೇ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ "ನೋಡೋಣ, ಅವರೇನು ಪಾಠ ಕಲಿತಿದ್ದಾರೆಂದು. ಬಿಎಸ್ ಪಿ ಬಿಜೆಪಿಯಿಂದ ಕಾಂಗ್ರೆಸ್(ಐ) ಕಡೆಗೆ ಹೋಗುವಂತಿದೆ. ಈ ಬಗ್ಗೆ ಟಿಪ್ಪಣಿ ಮಾಡುವ ಮೊದಲು ಇನ್ನೂ ಸ್ವಲ್ಪ ಕಾಲ ಕಾಯೋಣ ಎಂದು ಸುರ್ಜಿತ್ ಹೇಳಿದರು. ಎನ್.ಡಿ ತಿವಾರಿಯವರ ಸಿಡಿದು ಹೋದ ಕಾಂಗ್ರೆಸ್ ಗುಂಪಿನ ಪ್ರಸ್ತಾಪ ಬಂದಿಲ್ಲ ಎಂದರು.

ಕಾಶ್ಮೀರಕ್ಕೆ ರಾಜಕೀಯ ಪರಿಹಾರ

ಕಾಶ್ಮೀರಕ್ಕೆ ಒಂದು ರಾಜಕೀಯ ಪ್ಯಾಕೇಜ್ ಮೂಲಕ ಭಾರತೀಯ ಸಂಘದೊಳಗೆ ಅದಕ್ಕೆ 'ಗರಿಷ್ಠ ಸ್ವಾಯತ್ತತೆ' ನೀಡಿ ಕಾಶ್ಮೀರಿ ಸ್ವಂತಿಕೆಯನ್ನು ರಕ್ಷಿಸುವ ಭರವಸೆ ನೀಡುವಂತಾಗಬೇಕು ಎಂಬ ಸಿಪಿಐ(ಎಂ)ನ ಬಹುಕಾಲದ ಬೇಡಿಕೆಯನ್ನು ಸುರ್ಜಿತ್ ಪುನರುಚ್ಚರಿಸಿದರು. 1953ರ ನಂತರ ಸಂವಿಧಾನದ 370ನೇ ಕಲಮನ್ನು ದುರ್ಬಲಗೊಳಿಸಿರುವುದನ್ನು ಸರಿಪಡಿಸಬೇಕು ಹಾಗೂ ಭಾರತೀಯ ಸಂಸತ್ತಿನಲ್ಲಿ ಕಾಶ್ಮೀರಿ ಸ್ವಂತಿಕೆಯ ಪೂರ್ಣ ರಕ್ಷಣೆಯ ಭರವಸೆ ನೀಡುವ ಒಂದು ನಿರ್ಣಯ ಅಂಗೀಕರಿಸಬೇಕು. ಇದು ರಾಜ್ಯದಲ್ಲಿ ಜನತೆಯ ಬೆಂಬಲ ಪಡಯಲು ಬಹಳಷ್ಟು ನೆರವು ನೀಡಬಲ್ಲುದು. ಇಂತಹ ಒಂದು ಅರ್ಥಪೂರ್ಣ ರಾಜಕೀಯ ಪರಿಹಾರವಿಲ್ಲದೆ ಯಾವ ಪಕ್ಷವೂ ಚುನಾವಣೆಗೆ ಒಪ್ಪದು ಎಂದು ಸುರ್ಜಿತ್ ಹೇಳಿದರು. ಕೇವಲ ನಾಲ್ಕೈದು ಶೇಕಡಾ ಮತದಾರರು ಮತಗಟ್ಟೆಗೆ ಬರುವಂತಹ ಚುನಾವಣೆ ನಡೆದರೆ ಕಾಶ್ಮೀರಿ ಪ್ರತ್ಯೇಕತಾವಾದಿ ಶಕ್ತಿಗಳಿಗೆ, ಹಾಗೂ ಅವರನ್ನು ಬೆಂಬಲಿಸುವ ವಿದೇಶೀ ಶಕ್ತಿಗಳಿಗೆ ಸಹಾಯ ಒದಗಿಸಿದಂತಾಗುತ್ತದಷ್ಟೇ ಎಂದು ಅವರು ಹೇಳಿದರು.

ಕೇಂದ್ರ ಕಾರ್ಯದರ್ಶಿ ಮಂಡಳಿ

ಕೇಂದ್ರ ಸಮಿತಿ ಏಳು ಸದಸ್ಯರಿರುವ ಒಂದು ಕಾರ್ಯದರ್ಶಿ ಮಂಡಳಿಯನ್ನು ಆರಿಸಿತು. ಎಸ್. ರಾಮಚಂದ್ರಪಿಳ್ಳೆ, ಪ್ರಕಾಶ್ ಕಾರಟ್, ಸುಕೋಮಲ್ ಸೇನ್, ಹನ್ನನ್ ಮೊಲ್ಲಾ, ಎಂ.ಎ. ಬೇಬಿ ಮತ್ತು ಹರಿಸಿಂಗ್ ಕಾಂಗ್ ಇವರ ಸದಸ್ಯರಾಗಿರುತ್ತಾರೆ. ಕೇಂದ್ರ ಕಾರ್ಯದರ್ಶಿ ಮಂಡಳಿಯೊಂದನ್ನು ಏಕೆ ರಚಿಸಬೇಕಾಗಿ ಬಂದಿದೆ ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಸಿಪಿಐ(ಎಂ)ನ ಈ ವ್ಯವಸ್ಥೆ ಸಿಪಿಐನಲ್ಲಿರುವ ಮೂರು ಹಂತದ ವ್ಯವಸ್ಥೆಯಂತಲ್ಲ ಎಂದು ಸ್ಪಷ್ಟ ಪಡಿಸಿದರು. "ದೈನಂದಿನ ಕೆಲಸಗಳನ್ನು -ಪತ್ರವ್ಯವಹಾರಗಳನ್ನು ಸಣ್ಣ ರಾಜ್ಯಗಳಿಗೆ ಭೇಟಿ ನೀಡುವುದು ಇತ್ಯಾದಿ- ನಿರ್ವಹಿಸುವಲ್ಲಿ ಪೊಲಿಟ್ ಬ್ಯೂರೋಗೆ ನೆರವಾಗಲಷ್ಟೇ ಈ ಕಾರ್ಯದರ್ಶಿ ಮಂಡಳಿ. ಇದರಿಂದ ಪೊಲಿಟ್ ಬ್ಯೂರೋ ರಾಜಕೀಯ ನಿರ್ದೇಶನ ನೀಡುವ ತನ್ನ ಕರ್ತವ್ಯ ಪೂರೈಸಲು ಹೆಚ್ಚು ಸಮಯ ಸಿಗುವಂತಾಗುತ್ತದೆ" ಎಂದು ಸುರ್ಜಿತ್ ಹೇಳಿದರು.

ಓದುಗರ, ಏಜೆನ್ಸಿದಾರರ ಗಮನಕ್ಕೆ

ವಿದ್ಯುತ್ತಿನ ಸತತ ಅಡಚಣೆ ಹಾಗೂ ಅದರಿಂದಾಗಿ ನಮ್ಮ ಡಿಟಿಪಿ ಘಟಕದ ಸಮಸ್ಯೆ ಮುಂದುವರೆದಿದ್ದು ಅದರಿಂದಾಗಿ ನಾವು ಮತ್ತೆ ಒಂದು ಸಂಚಿಕೆಯನ್ನು ಪ್ರಕಟಿಸಲಾಗಲಿಲ್ಲ. ಈ ಸಮಸ್ಯೆಯನ್ನು ಪರಿಹರಿಸಿಕೊಂಡು ಇನ್ನು ಮುಂದೆ ನಿಯಮಿತವಾಗಿ ಸಂಚಿಕೆ ತರುವ ಪ್ರಯತ್ನ ನಡೆಯುತ್ತಿದೆ. ಇದರಲ್ಲಿ ಏಜೆನ್ಸಿದಾರರು ತಮ್ಮ ಬಾಕಿಯನ್ನು ಆದಷ್ಟು ಬೇಗ ತೀರಿಸಿ ಹಾಗೂ ಓದುಗರ, ಪ್ರಸಾರ ಹೆಚ್ಚಿಸುವ ಮೂಲಕ 'ಐಕ್ಯರಂಗ'ದ ಹಣಕಾಸು ಸ್ಥಿತಿಯನ್ನು ಉತ್ತಮಗೊಳಿಸುವ ಮೂಲಕ ನೆರವಾಗಬೇಕೆಂದು ಕೋರುತ್ತೇವೆ.

-ಸಂಪಾದಕರು

ನ್ಯಾಯ, ಸಮಾನತೆಗಾಗಿ ಹೋರಾಡುತ್ತಿರುವವರಿಗೆ ಈಗಲೂ ದಾರಿ ಬೆಳಗುತ್ತಿದೆ ಅಕ್ಟೋಬರ್ ಕ್ರಾಂತಿ



ಈ ನವೆಂಬರ್ 7 ಮಹಾನ್ ಅಕ್ಟೋಬರ್ ಕ್ರಾಂತಿಯ 78ನೇ ವಾರ್ಷಿಕೋತ್ಸವ ದಿನ. ಈಗಲೂ ಇದು ಒಂದು ಸಮಾನತೆಯ ಹಾಗೂ ನ್ಯಾಯಯುತವಾದ ವ್ಯವಸ್ಥೆ ನಿರ್ಮಿಸಲು ಹೋರಾಡನಿರತರಾದ ಕ್ರಾಂತಿಕಾರಿಗಳ ದಾರಿಯನ್ನು ಬೆಳಗುತ್ತಿರುವ ಐತಿಹಾಸಿಕ ಘಟನೆ ಎಂದು ಕೇಂದ್ರ ಸಮಿತಿ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಪ್ರಕಟವಾದ ಒಂದು ವಿಶೇಷ ಲೇಖನದಲ್ಲಿ ಹೇಳಿದ್ದಾರೆ.

ಕಳೆದ ನಾಲ್ಕು ವರ್ಷಗಳಲ್ಲಿ ಸೋವಿಯೆತ್ ಒಕ್ಕೂಟದ ವಿಘಟನೆ, ಪೂರ್ವ ಯುರೋಪಿನ ದೇಶಗಳಲ್ಲಿ ಸಮಾಜವಾದಕ್ಕಾದ ಹಿನ್ನಡೆಯ ಹಿನ್ನೆಲೆಯಲ್ಲಿ ಸಮಾಜವಾದ ಕುಸಿದು ಬಿಟ್ಟಿದೆ, ಬಂಡವಾಳ ಶಾಹಿ ಶಾಶ್ವತ ಎಂದು ಸಾಮ್ರಾಜ್ಯಶಾಹಿ ಮಾಧ್ಯಮಗಳು ಮತ್ತೆ ಮತ್ತೆ ನಮಗೆ ಹೇಳುತ್ತಿವೆ. ಈ ಬೃಹತ್ ಅಪಪ್ರಚಾರದ ಸತತ ಹೊಡೆತ ಹಲವರನ್ನು ದಿಗ್ಭ್ರಮೆಗೊಳಿಸಿತು. ವಿಶ್ವ ಕಮ್ಯುನಿಸ್ಟ್ ಆಂದೋಲನದ ಕೆಲವು ವಿಭಾಗಗಳ ಮೇಲೂ ಇದರ ಪ್ರಭಾವ ಬಿತ್ತು. ಆದರೆ ಈ ಭ್ರಾಂತಿಯನ್ನು ಬಹಳ ದಿನ ಉಳಿಸಿಕೊಳ್ಳಲು ಸಾಮ್ರಾಜ್ಯಶಾಹಿ ಮಾಧ್ಯಮಗಳಿಗಾಗಲಿಲ್ಲ, ಸಮಾಜವಾದ ಸತ್ತಿದೆ, ಕಮ್ಯುನಿಸಂ ಸತ್ತಿದೆ ಎಂಬ ಅರಚಾಟ ಕ್ರಮೇಣ ತಣ್ಣಗಾಯಿತು. ಸಮಾಜವಾದಿ ದಾರಿಯನ್ನು ತ್ಯಜಿಸಿದ ದೇಶಗಳೊಳಗೂ, ಹೊರಗೂ ಸಮಾಜವಾದದ ಅವಧಿಯಲ್ಲಿ ಎಂತಹ ಸಮಸ್ಯೆಗಳನ್ನು ವಿಕೃತಿಗಳನ್ನು ಎದುರಿಸಬೇಕಾಗಿ ಬಂದಿದ್ದರೂ, ಅದಕ್ಕೆ ಬಂಡವಾಳಶಾಹಿಯಂತೂ ಉತ್ತರವಲ್ಲ ಎಂದು ಹೆಚ್ಚೆಚ್ಚು ಜನರಿಗೆ ಅರಿವಿಗೆ ಬರಲಾರಂಭಿಸಿತು. ಹೆಚ್ಚುತ್ತಿರುವ ಅಸಮಾನತೆ, ನಿರುದ್ಯೋಗ, ಅಭದ್ರತೆ ಹಾಗೂ ದಾರಿದ್ರ್ಯ ಅವರೆಲ್ಲಾ ಈ ತೀರ್ಮಾನಕ್ಕೆ ಬರುವಂತೆ ಮಾಡಿವೆ ಎಂದಿರುವ ಸುರ್ಜಿತ್‌ರವರು ಇತಿಹಾಸ ಮಾರ್ಕ್ಸ್‌ವಾದಿ-ಲೆನಿನ್ ವಾದಿ ಸಿದ್ಧಾಂತ ಸರಿಯೆಂಬುದನ್ನು ಸಾಬೀತು ಪಡಿಸುತ್ತದೆ. ಈ ಸಿದ್ಧಾಂತದ ಮಾನವ ಕುಲದ ಮುನ್ನಡೆಗೆ ಆಧಾರ ಒದಗಿಸುತ್ತದೆ.

ಮಾಧ್ಯಮದ ದಬ್ಬಾಳಿಕೆ ನಿಯಂತ್ರಣ ಅಗತ್ಯ



"ಮಾಧ್ಯಮಗಳ ಮೂಲಕಸಂಸ್ಕೃತಿಯ ಮೇಲಾಗುತ್ತಿರುವ ದಬ್ಬಾಳಿಕೆ ಅರ್ಥ ಮಾಡಿಕೊಂಡು ಅದರ ನಿಯಂತ್ರಣಕ್ಕೆ ಗಮನ ಹರಿಸುವ ಅಗತ್ಯ ಇದೆ" ಎಂದು ಖ್ಯಾತ ಚಲನಚಿತ್ರ ನಿರ್ದೇಶಕ ಎಂ.ಎಸ್. ಸತ್ಯು ಅವರು ಅಭಿಪ್ರಾಯ ಪಟ್ಟರು.

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ.)ನ ರಾಜ್ಯ ಸಮ್ಮೇಳನದ ಅಂಗವಾಗಿ ಮಂಗಳೂರಿನಲ್ಲಿ 'ಮಾಧ್ಯಮ ಮತ್ತು ಸಂಸ್ಕೃತಿ' ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು. ಈ ವಿಚಾರ ಸಂಕಿರಣದಲ್ಲಿ ಅವರು ಮಾತನಾಡುತ್ತಿದ್ದರು.

ಮಾಧ್ಯಮದ ಆಗಮನವನ್ನು ತಡೆಯಲು ಸಾಧ್ಯವಿಲ್ಲ. ನಾವು ಬೇಡವೆಂದರೂ ಆಕಾಶದಿಂದ ಬಂದಿಳಿಯುವ ಮಾಧ್ಯಮಗಳಿವೆ. ಮಾಧ್ಯಮಗಳು ಬೇಕು. ಆದರೆ ಅವುಗಳ ಹಿಂದಿರುವ ಮನಸ್ಸನ್ನು ವಿಮರ್ಶಿಸುವ ಕೆಲಸ ಆಗಬೇಕಾಗಿದೆ. ಸಂಸ್ಕೃತಿಯ ಮೂಲಕವೂ ದಬ್ಬಾಳಿಕೆ ನಡೆಸಲು ಸಾಧ್ಯ ಎಂಬುದನ್ನು ಅರ್ಥ ಮಾಡಿಕೊಂಡು ಅದರ ವಿರುದ್ಧ ಹೋರಾಡುವ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಮಾಧ್ಯಮಗಳ ದಬ್ಬಾಳಿಕೆಯ ಬಗ್ಗೆ ಒಂದಿಷ್ಟಾದರೂ ಅರಿವನ್ನು ಮೂಡಿಸುವ ಕೆಲಸವನ್ನು ಕೈಗೆತ್ತಿಕೊಳ್ಳಬೇಕು ಎಂದರು.

ಸ್ಯಾಟಲೈಟ್ ಟಿವಿ ಚಾನೆಲ್‌ಗಳು ನಮ್ಮ ಜನಗಳ ನಿಜವಾದ ಸಮಸ್ಯೆಯನ್ನು ಬಿಂಬಿಸುತ್ತಿಲ್ಲ. ದೂರದರ್ಶನದಲ್ಲಿ ಬರುತ್ತಿರುವ ಧಾರಾವಾಹಿಗಳು ಮೂಲಭೂತವಾದವನ್ನು ಪರೋಕ್ಷವಾಗಿ ಹೇರುತ್ತಿವೆ ಎಂದು ಉದಾಹರಣೆಗಳ ಮೂಲಕ ವಿವರಿಸಿದರು.

ಎಂ.ಎಸ್. ಸತ್ಯು

ಶತ್ರುಗಳು ಮಾಧ್ಯಮಗಳನ್ನು ಹಿಂದೆ ಮಹಾಯುದ್ಧದಲ್ಲಿ ಬಳಸುತ್ತಿದ್ದರು. ಆದರೆ ಇಂದು ಮಾಧ್ಯಮಗಳೇ ಶತ್ರುಗಳಾಗಿವೆ ಎಂದು ಅವರು ವಿಷಾದಿಸಿದರು.

ದೇಶದ ವಿವಿಧ ರಾಜ್ಯಗಳಲ್ಲಿ ವಿವಿಧ ಸರ್ಕಾರಗಳು ಆಡಳಿತ ನಡೆಸುತ್ತಿವೆ. ಆದರೆ ಮಾಧ್ಯಮ ಮಾತ್ರ ಕೇಂದ್ರದ ಹಿಡಿತದಲ್ಲಿದೆ. ಈ ವಿಪರ್ಯಾಸ ಏಕೆ? ರಾಜ್ಯಗಳ ಕೈಯಲ್ಲಿ ಮಾಧ್ಯಮಗಳು ಏಕೆ ಇಲ್ಲ? ಈ ಬಗ್ಗೆ ರಾಜ್ಯ ಸರ್ಕಾರಗಳು ಏಕೆ ಮೌನ ವಹಿಸಿವೆ? ಕೇಂದ್ರದ ಮೇಲೆ ಒತ್ತಡ ತರುವ ಕೆಲಸ ನಡೆಯಬೇಕು. ಆಯಾ ಪ್ರಾದೇಶಿಕ ಭಾಷೆಗಳಲ್ಲಿ ಪ್ರಸಾರ ನಡೆಯಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಪ್ರಗತಿಪರ ಚಿಂತಕ ಜಿ.ಕೆ. ಗೋವಿಂದರಾವ್ ಅವರು ಮಾತನಾಡಿ ಮಿಲಿಟರಿ ಬಗ್ಗೆ ಯೋಚನೆ ಮಾಡಿದಷ್ಟು ಕೂಡಾ ನಾವು ಶಿಕ್ಷಣದ ಬಗ್ಗೆ ಯೋಚನೆ ಮಾಡುತ್ತಿಲ್ಲ. ಪ್ರತಿಯೊಬ್ಬ ವ್ಯಕ್ತಿಗೂ ಘನತೆಯನ್ನು ನೀಡುವ ಶಿಕ್ಷಣವನ್ನು ನಾವು ಸ್ವಾತಂತ್ರ್ಯ ಬಂದಾಗಿನಿಂದಲೂ ಹಾಕಿಕೊಂಡಿಲ್ಲ, ಚರಿತ್ರೆಯನ್ನು ಸಾಮಾಜಿಕ ಚರಿತ್ರೆಯಾಗಿ ಅಭ್ಯಾಸ ಮಾಡಿಲ್ಲ ಎಂದರು.

ಆಶಾವಾದವನ್ನು ಹುಟ್ಟಿಸುವ ಶಿಕ್ಷಣವನ್ನು ನೀಡದ ಕಾರಣಕ್ಕಾಗಿಯೇ ಕೋಮುಗಲಭೆಗಳು ಕುಡಿಯೊಡೆಯುತ್ತಿವೆ. ಯಾವ ಧರ್ಮ ಭ್ರಷ್ಟಾಚಾರವನ್ನು ವಿರೋಧಿಸುವುದಿಲ್ಲವೋ ಅದು ಧರ್ಮ ಅಲ್ಲ ಎಂದರು.

ಒಂದು ಕೃತಿಯನ್ನು ವಿಮರ್ಶಿಸುವ ಸಹನೆಯೇ ಇಂದು ಕಳೆದು ಹೋಗುತ್ತಿದೆ. ಚಲನಚಿತ್ರವಾಗಿರಲಿ ಸಾಹಿತ್ಯ ಕೃತಿಯಾಗಿರಲಿ ಅದನ್ನು ನಾವು ವಿಮರ್ಶೆಗೆ ಒಡ್ಡುವ ಸಹನೆ ಕಳೆದುಕೊಂಡಿದ್ದೇವೆ. ಕೋಮುವಾದಿಗಳಿಂದಾಗಿ ಇಂದು ಸಮಾಜದಲ್ಲಿ ಅಸಹನೆಯ ವಾತಾವರಣ ಸೃಷ್ಟಿಯಾಗಿದೆ. ಗರಂ ಹವಾ, ಸಂಸ್ಕಾರದಂತಹ ಚಿತ್ರಗಳನ್ನು ಇಂದು ಪ್ರದರ್ಶಿಸಲು ಸಾಧ್ಯವೇ ಎಂದು ಅವರು ಮಣಿರತ್ನಂ ಅವರ 'ಬಾಂಬೆ' ಸಿನಿಮಾವನ್ನು ಪ್ರಸ್ತಾಪಿಸುತ್ತಾ ನುಡಿದರು.

ಪ್ರಸ್ತಾವನಾ ಭಾಷಣ ಮಾಡಿದ ಪತ್ರಕರ್ತ ಜಿ.ಎನ್. ಮೋಹನ್ ಅವರು ಕರ್ನಾಟಕ ಸರ್ಕಾರ ಸಹಾ ಅಮೇರಿಕಾ ಸಂಸ್ಕೃತಿಗೆ ಆಹ್ವಾನ ನೀಡಿದೆ. ಎಲ್ಲಾ ರೀತಿಯ ಮನರಂಜನೆ ಒಂದೇ ಕಡೆ ಸಿಗುವ ಹೆಸರಲ್ಲಿ ಮನರಂಜನೆಯನ್ನು ಅಮೇರಿಕಾದ ಕೈಗೊಪ್ಪಿಸುತ್ತಿದೆ. ವಾರ್ನರ್ ಬ್ರದರ್ಸ್ ರವರಿಂದ ಕರ್ನಾಟಕದಲ್ಲಿ ಆರಂಭವಾಗಲಿರುವ 'ಮಲ್ಟಿಪ್ಲೆಕ್ಸ್'ಗಳು ದೇಶದ ಸಂಸ್ಕೃತಿಯ ವ್ಯಾಖ್ಯಾನವನ್ನೇ ಬದಲಿಸಿವೆ ಎಂದರು.

ಜಾಗತೀಕರಣದ ಮೂಲಕ ಭಾರತದ ಬಹುರೂಪಿ ಸಂಸ್ಕೃತಿಯನ್ನು ಇಲ್ಲವಾಗಿಸಿ ಅಲ್ಲಿ ಏಕಮುಖಿ ಸಂಸ್ಕೃತಿಯನ್ನು ನೆಡುವ ಕೆಲಸ ನಡೆಯುತ್ತಿದೆ. ನಮ್ಮ ಸಂಸ್ಕೃತಿ ಸರಕು ಸಂಸ್ಕೃತಿಯಾಗಿ ಬದಲಾಗುತ್ತಿದೆ. ಸಾಹಿತ್ಯ, ಸಂಸ್ಕೃತಿ ಸಹಾ ಡಂಕೆಲ್ ಪ್ರಸ್ತಾವನೆಗಳಿಂದಾಗಿ ಬದಲಾಗಿದೆ. ಈ ಬಗ್ಗೆ ಎಚ್ಚರ ಬೇಕು ಎಂದರು.

ಮಾಧ್ಯಮಗಳಲ್ಲಿ ಪ್ರಕಟವಾಗುವುದೆಲ್ಲ ನಿಜ ಎಂಬುದನ್ನು ನಂಬುತ್ತಿದ್ದೇವೆ. ಮಾಧ್ಯಮಗಳು ದಾರಿ ತಪ್ಪಿದಾಗ ಅವುಗಳ ಕಿವಿ ಹಿಂಡುವ ಕೆಲಸವನ್ನು ಮಾಡದ ಕಾರಣಕ್ಕಾಗಿಯೇ ಕೋಮುವಾದ ತಲೆ ಎತ್ತಿದಾಗ ಪತ್ರಿಕೋದ್ಯಮ ಕಾವಿ ಪತ್ರಿಕೋದ್ಯಮವಾಗುತ್ತದೆ. ಮಾಧ್ಯಮಗಳನ್ನು ಸಹಾ ವಿಮರ್ಶಿಸುವ ಕೆಲಸ ಈಗಿನಿಂದಲಾದರೂ ಕೈಗೆತ್ತಿಕೊಳ್ಳಲು ಮೋಹನ್ ಆಗ್ರಹಿಸಿದರು.

ಪವರ್‌ಲೂಂ ಕಾರ್ಮಿಕರ ಹೋರಾಟಕ್ಕೆ ಮಹತ್ವದ ಜಯ

ಕಳೆದ 30 ವರ್ಷಗಳಿಂದ ಕಾರ್ಮಿಕರಿಗೆ ಯಾವುದೇ ಕಾನೂನು ರೀತ್ಯಾ ಸೌಲಭ್ಯಗಳನ್ನು ಕೊಡದೆ ತಮ್ಮಿಷ್ಟಕ್ಕೆ ಲಂಗುಲಗಾಮಿಲ್ಲದೆ ಕಾರ್ಖಾನೆಗಳನ್ನು ನಡೆಸಿ ರಾಜಕೀಯ ಶಕ್ತಿಯಾಗಿ ಬೆಳೆದಿರುವ ಮಾಲೀಕ ವರ್ಗದ ವಿರುದ್ಧ ನಡೆದ ಯುದ್ಧದಲ್ಲಿ ಪವರ್ ಲೂಂ ಕಾರ್ಮಿಕರು ಇದೇ ನವೆಂಬರ್ 6ರಂದು ಒಂದು ಮಹತ್ವಪೂರ್ಣ ಜಯಗಳಿಸಿದ್ದಾರೆ. ಬೃಹತ್ ಪ್ರಮಾಣದಲ್ಲಿ ಕಾರ್ಮಿಕರು ದುಡಿಯುವ, 30 ವರ್ಷಗಳಿಂದ ಯಾವುದೇ ಕಟ್ಟುಪಾಡು ಇಲ್ಲದೆ ಬೆಳೆದು ನಿಂತಿರುವ ಪವರ್‌ಲೂಂ ಕೈಗಾರಿಕೆಯನ್ನು ಒಂದು ಸಂಘಟಿತ ರೂಪಕ್ಕೆ ತರುವ ಅತಿ ಕಠಿಣ ಎಂಬ ಸಂಗತಿ. ಈ ಹಿನ್ನೆಲೆಯಲ್ಲಿ 6.11.1995ರಂದು ಆದ ಒಪ್ಪಂದ ಕಾರ್ಮಿಕರ ಚಳವಳಿಗೆ ದೊರೆತ ಯಶಸ್ಸು ಎಂದು ಹೇಳಲಾಗಿದೆ.

ಅಕ್ಟೋಬರ್ 27ರಿಂದ ಪವರ್‌ಲೂಂ ಕಾರ್ಮಿಕರು ನಡೆಸಿದ ಯಶಸ್ವಿ ಹೋರಾಟದ ಒತ್ತಡದಿಂದ, ಮುಖ್ಯಮಂತ್ರಿಗಳಾದ ಶ್ರೀಯುತ ದೇವೇಗೌಡ ಅವರ ಅಧ್ಯಕ್ಷತೆಯಲ್ಲಿ ಕಂದಾಯ ಸಚಿವರಾದ ಶ್ರೀ ಜಾಲಪ್ಪ, ಗೃಹಮಂತ್ರಿಗಳಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಮತ್ತು ಕಾರ್ಮಿಕರ ಮಂತ್ರಿಗಳಾದ ಶ್ರೀ ಗುರುನಾಥ್ ಅವರ ಉಪಸ್ಥಿತಿಯಲ್ಲಿ ಕಾರ್ಮಿಕರ ಮತ್ತು ಮಾಲೀಕರ ಸಂಘಗಳ ನಡುವೆ 6.11.1995 ರಂದ ಮಾತುಕತೆ ನಡೆದು ಒಂದು ಒಪ್ಪಂದಕ್ಕೆ ಬರಲಾಯಿತು.

ಬೆಳೆಯುತ್ತಿರುವ ಈ ಕೈಗಾರಿಕೆ ಉಳಿಯಬೇಕಾದರೆ, ಸಾಮರಸ್ಯ ಮುಂದುವರಿಯಬೇಕಾದರೆ ಈ ಕೈಗಾರಿಕೆ ಒಂದು ನಿಯಂತ್ರಣ ಅತ್ಯವಶ್ಯಕವಾಗಿರುತ್ತದೆ. ಅದಕ್ಕಾಗಿ ಕೈಗಾರಿಕೆಯ ಕುರಿತು ಸಂಪೂರ್ಣ ಅಧ್ಯಯನ ನಡೆಸಿ ಕಾನೂನಿನ ರೀತಿಯಾದ ಸೌಲಭ್ಯಗಳನ್ನು ಕಾರ್ಮಿಕರಿಗೆ ಒದಗಿಸುವುದು ಅತಿ ಮುಖ್ಯವಾದ್ದರಿಂದ ಈ ಒಪ್ಪಂದಕ್ಕೆ ಸಹಿ ಹಾಕಿರುವುದಾಗಿ ಸಿಐಟಿಯು ನೇತೃತ್ವದ ಪವರ್‌ಲೂಂ ಕಾರ್ಮಿಕರ ಸಂಘ ಹೇಳಿದೆ. ಪವರ್‌ಲೂಂ ಉದ್ದಿಮೆಗೆ ಕಾರ್ಖಾನೆ ಕಾಯ್ದೆ, ಶಾಪ್ ಆಕ್ಟ್ ಮುಂತಾದ ವಿಚಾರಗಳನ್ನು ಪರಿಶೀಲಿಸಲು ಕಾರ್ಮಿಕ ಆಯುಕ್ತರ ಅಧ್ಯಕ್ಷತೆಯಲ್ಲಿ 3 ಜನ ಅಧಿಕಾರಿಗಳು, ಕಾರ್ಮಿಕ ಮತ್ತು ಮಾಲೀಕರ ಸಂಘದ ಪತಿಯಿಂದ ಇಬ್ಬಿಬ್ಬರು ಪ್ರತಿನಿಧಿಗಳಿರುವ ಸಮಿತಿ ಒಂದನ್ನು ರಚಿಸಲಾಗಿದೆ. ಒಂದು ತಿಂಗಳ ಒಳಗಾಗಿ ಈ ಸಮಿತಿಯು ಸರಕಾರಕ್ಕೆ ವರದಿಯೊಂದನ್ನು ಕೊಡತಕ್ಕದ್ದು. ಈ ಸಮಿತಿಯ ಕೊಟ್ಟಂತ ತೀರ್ಮಾನವನ್ನು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಮತ್ತೊಂದು ಸಭೆ ಸೇರಿ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು. ಈ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರಬೇಕು ಹಾಗೂ ಮುಷ್ಕರವನ್ನು ದಿನಾಂಕ ನವೆಂಬರ್ 7ರಿಂದ ವಾಪಸ್ ತೆಗೆದುಕೊಂಡು, ಕಾರ್ಮಿಕರು ಮತ್ತು ಮಾಲೀಕರ ಮಧ್ಯೆ ಸೌಹಾರ್ದಯುತವಾದ ವಾತಾವರಣವನ್ನು ಉಂಟು ಮಾಡಲು ಎಲ್ಲರು ಒಪ್ಪುವುದು. ಯಾವುದೇ ರೀತಿಯಾದ ಹಿಂಸಾಚಾರ ಅಥವಾ ಕಾರ್ಮಿಕ ಸಂಘಟನೆ ಒಗ್ಗಟ್ಟನ್ನು ಮುರಿಯುವ ಯತ್ನಕ್ಕೆ ಯಾರೂ ಪ್ರಯತ್ನಿಸಬಾರದೆಂದು ತೀರ್ಮಾನಿಸಲಾಯಿತು.

ಕಳೆದ ಕೆಲವಾರು ತಿಂಗಳಿಂದ ಕಾನೂನು ನೀಡಿರುವ ಕನಿಷ್ಠ ಸೌಲಭ್ಯಗಳನ್ನು ಪಡೆಯಲು ಹೋರಾಟದ ಕಣಕ್ಕಿಳಿದ ಪವರ್‌ಲೂಂ ಕಾರ್ಮಿಕರ ವಿವಿಧ ಹಂತಗಳ ಹೋರಾಟದ ಬಗ್ಗೆ 'ಐಕ್ಯರಂಗ'ದಲ್ಲಿ ನೀವು ಈಗಾಗಲೇ ಓದಿರುವಿರಿ. ಈ ಅವಿರತ ಹೋರಾಟದ ಇತ್ತೀಚಿನ ಹಂತವಾಗಿ ಅಕ್ಟೋಬರ್ 27ರಿಂದ ಅನಿರ್ದಿಷ್ಟ ಮುಷ್ಕರ ಆರಂಭವಾಗಿತ್ತು. ಇದಕ್ಕೆ ನಗರದ ಹಲವಾರು ಕಾರ್ಮಿಕ ಸಂಘಗಳ ಸೌಹಾರ್ದ, ಬೆಂಬಲ ಕೂಡಾ ದೊರೆಯಿತು. ನವೆಂಬರ್ 6ರಂದು ನಡೆದ ಸೌಹಾರ್ದ ಸಭೆಯಲ್ಲಿ ಸುಮಾರು ಹತ್ತು ಸಾವಿರ ಕಾರ್ಮಿಕರು ಭಾಗವಹಿಸಿದ್ದರೆಂಬುದು ಈ ಹೋರಾಟದ ತೀವ್ರತೆಯನ್ನು ಮನಗಾಣಿಸಿತು.

ದೌರ್ಜನ್ಯಕ್ಕೆ ಜಗ್ಗದ ವಿದ್ಯಾರ್ಥಿ ಚಳುವಳಿ

ಕೇರಳದ ಕಣ್ಣೂರಿನಲ್ಲಿ ಖಾಸಗಿ ವೈದ್ಯಕೀಯ ಕಾಲೇಜನ್ನು ಆರಂಭಿಸಲು ಅಲ್ಲಿನ ರಾಜ್ಯ ಸರಕಾರ ಪ್ರಯತ್ನಿಸುತ್ತಿರುವುದರ ವಿರುದ್ಧ ವಿದ್ಯಾರ್ಥಿಗಳು ಪೋಲೀಸ್ ದೌರ್ಜನ್ಯವನ್ನು ಲೆಕ್ಕಿಸದೆ ತೀಕ್ಷ್ಣ ಹೋರಾಟ ನಡೆಸಿದ್ದಾರೆ. ಎಡಪಂಥೀಯ ನೇತೃತ್ವದಲ್ಲಿ ವಿದ್ಯಾರ್ಥಿಗಳು ಈ ಹಿಂದೆಯೂ ರಾಜ್ಯದಲ್ಲಿ ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ವಿದ್ಯಾರ್ಥಿ ಸಮುದಾಯ ಸಿಡಿದೆದ್ದಿತು. ಖಾಸಗಿ ಮೆಡಿಕಲ್ ಕಾಲೇಜ್ ವಿರುದ್ಧ ಎರಡು ತಿಂಗಳಿಂದ ನಡೆಯುತ್ತಿರುವ ಆಂದೋಲನ ಈ ಪರಂಪರೆಗೆ ಅನುಗುಣವಾಗಿದೆ.

ಖಾಸಗೀ ವೈದ್ಯ ಕಾಲೇಜ್ ಸ್ಥಾಪನೆ ವಿರುದ್ಧ ಕಲ್ಲಿಕೋಟೆಯಲ್ಲಿ ಅನಿರ್ದಿಷ್ಟ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ವಿದ್ಯಾರ್ಥಿ ತಂಡವೊಂದಕ್ಕೆ ಬೆಂಬಲವಾಗಿ ಅಕ್ಟೋಬರ್ 11 ರಂದು ಕೇರಳ ವೈದ್ಯಕೀಯ ವಿದ್ಯಾರ್ಥಿಗಳ ಸಂಘ (ಮೆಡಿಕೋಸ್ ಅಸೋಸಿಯೇಷನ್ಸ್) ಮೆರವಣಿಗೆಯನ್ನು ವ್ಯವಸ್ಥೆಗೊಳಿಸಿತ್ತು. ಈ ಮೆರವಣಿಗೆ ಮೇಲೆ ಪೋಲೀಸರು ಕ್ರೂರ ಲಾಠಿ ಪ್ರಹಾರ ನಡೆಸಿದರು. ಏಳು ಮೆಡಿಕೋಗಳು ಗಂಭೀರವಾಗಿ ಗಾಯಗೊಂಡರು. 16 ಹುಡುಗಿಯರ ಸಹಿತ 76 ವಿದ್ಯಾರ್ಥಿಗಳನ್ನು ಜೈಲಿಗೆ ಹಾಕಲಾಯಿತು. ಬಹುತೇಕ ಹುಡುಗಿಯರ ಮೇಲೆ ಪೋಲೀಸರು ಹಲ್ಲೆ ನಡೆಸಿದರು.

ಲಾಠಿ ಪ್ರಹಾರದಿಂದ ಗಾಯಗೊಂಡು ಆಸ್ಪತ್ರೆ ಸೇರಿದವರಲ್ಲಿ ಕೆಎಂಎ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಹಾಗೂ ಎಸ್.ಎಫ್.ಐ. ನಾಯಕ ಬಿಜು ಪೊಟ್ಟೆ ಕ್ಯಾಟ್, ವೈದ್ಯ ವಿದ್ಯಾರ್ಥಿ ಕ್ರಿಯಾ ಮಂಡಳಿ ಅಧ್ಯಕ್ಷ ಎ. ಹರೀಶ್, ಕಾರ್ಯಕಾರಿ ಸಮಿತಿ ಸದಸ್ಯರಾದ ಜಯಕೃಷ್ಣನ್, ನಟೇಶ್ ಮತ್ತು ಸುನಿಲ್ ಸೇರಿದ್ದಾರೆ. ಇನ್ನೂ ಕೆಲವು ವಿದ್ಯಾರ್ಥಿಗಳು ಗಾಯಗೊಂಡರೂ ಅವರನ್ನು ಆಸ್ಪತ್ರೆ ಸೇರಿಸಲು ಪೋಲೀಸರು ನಿರಾಕರಿಸಿದರು.

ಎಸ್.ಎಫ್.ಐ. ನೇತೃತ್ವದಲ್ಲಿ ನಡೆಯುತ್ತಿರುವ ಚಳುವಳಿಗೆ ಭಾರೀ ಬೆಂಬಲ ವ್ಯಕ್ತವಾಗಿದೆ. ಯಾಕೆಂದರೆ ಖಾಸಗೀಕರಣವನ್ನು ಪ್ರತಿರೋಧಿಸದಿದ್ದರೆ ವೈದ್ಯಕೀಯ ಶಿಕ್ಷಣ ದುಬಾರಿಯಾಗಲಿದ್ದು ಬಡ ವಿದ್ಯಾರ್ಥಿಗಳ ಕೈಗೆ ಎಟಕುವುದು ಅಸಾಧ್ಯ.

ದುಬಾರಿ ಕ್ಯಾಪಿಟೇಶನ್: ಕೇರಳ ಸರ್ಕಾರದ ಖಾಸಗೀಕರಣದ ಯೋಜನೆಯನ್ವಯ ಖಾಸಗಿ ಟ್ರಸ್ಟುಗಳು ದುಬಾರಿ ಕ್ಯಾಪಿಟೇಶನ್ ಶುಲ್ಕವನ್ನು ವಸೂಲಿ ಮಾಡಲು ಅನುಕೂಲವಾಗುವಂತೆ ವೈದ್ಯಕೀಯ ಕಾಲೇಜುಗಳನ್ನು ತೆರೆಯಲು ಅನುಮತಿ ನೀಡಲಾಗುತ್ತದೆ.

ಅನಿವಾಸಿ ಭಾರತೀಯ(ಎನ್‌ಆರ್‌ಐ) ವಿದ್ಯಾರ್ಥಿಗಳಿಂದ ಒಂದು ಕೋರ್ಸಿಗೆ 23 ಲಕ್ಷ ರೂ.ಗಳನ್ನು ವಸೂಲಿ ಮಾಡಬಹುದಾಗಿದೆ. ಎನ್‌ಆರ್‌ಐಗಳಿಗೆ 15 ಸೀಟುಗಳನ್ನು ಕಾದಿರಸಲಾಗುತ್ತದೆ. ಇದಲ್ಲದೆ 'ಪೇಮೆಂಟ್ ಸೀಟು' ಕೋಟಾ ಶೇ. 35 ಈ ಕೋಟಾದಲ್ಲಿ ಪ್ರತಿ ಸೀಟಿಗೆ 3.75ಲಕ್ಷ ರೂ. ಕ್ಯಾಪಿಟೇಶನ್ ಶುಲ್ಕ ಕೊಡಬೇಕು.

ಉಳಿದ ಶೇ. 50 ತಥಾಕಥಿತ 'ಉಚಿತ ಸೀಟು' ಆಗಿದ್ದು ಅದರಲ್ಲಿ ತಲಾ ಸೀಟಿಗೆ ಒಂದು ಲಕ್ಷ ರೂ. ಕ್ಯಾಪಿಟೇಶನ್. ಈಗ ಸರಕಾರೀ ಕಾಲೇಜುಗಳಲ್ಲಿ ಉಚಿತ ಸೀಟಿಗೆ 8000 ರೂ. ಶುಲ್ಕವನ್ನು ವಸೂಲಿ ಮಾಡಲಾಗುತ್ತಿದೆ. ಅದೇ ಪ್ರಸ್ತಾವಿತ ಖಾಸಗಿ ಯೋಜನೆ ಪ್ರಕಾರ ಈಗಿನ ದರಕ್ಕಿಂತ ಹತ್ತು ಪಟ್ಟಿಗೂ ಹೆಚ್ಚಾಗುತ್ತದೆ.

ಕೇರಳ ಬಂದ್

ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ಹೋರಾಡುತ್ತಿರುವ ವಿದ್ಯಾರ್ಥಿಗಳ ಮೇಲೆ ಕೇರಳದ ಯು.ಡಿ.ಎಫ್. ದಮನಚಕ್ರ ಹರಿಯಬಿಟ್ಟಿರುವುದನ್ನು ವಿರೋಧಿಸಿ ನವಂಬರ್ 8ರಂದು ಕೇರಳ ಸಂಪೂರ್ಣ ಬಂದ್ ಆಚರಿಸಿದ ಸುದ್ದಿ ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಬಂದಿದೆ.

ಲಖನೌದಲ್ಲಿ ಮಹತ್ವದ ರ್‍ಯಾಲಿ

ಲಖನೌದಲ್ಲಿ ಅಕ್ಟೋಬರ್ 16ರಂದು ಬೃಹತ್ ರ್‍ಯಾಲಿಯೊಂದು ನಡೆಯಿತು. ಸಿಪಿಐ(ಎಂ) ಉತ್ತರ ಪ್ರದೇಶ ಘಟಕ ಇದನ್ನು ವ್ಯವಸ್ಥೆಗೊಳಿಸಿತ್ತು. ರಾಜ್ಯದ ಅನೇಕ ಜಿಲ್ಲೆಗಳಿಂದ ಹತ್ತು ಸಾವಿರಕ್ಕೂ ಹೆಚ್ಚು ಜನರು ಇದರಲ್ಲಿ ಪಾಲ್ಗೊಂಡಿದ್ದರು.

ಬಿಜೆಪಿ ಮತ್ತು ಕಾಂಗ್ರೆಸ್(ಐ)ಗಳನ್ನು ಸೋಲಿಸುವ ಉದ್ದೇಶದಿಂದ ಎಡ-ಜಾತ್ಯಾತೀತ ಶಕ್ತಿಗಳೊಂದಿಗೆ ಕೈ ಜೋಡಿಸಲು ಮುಲಾಯಂ ಸಿಂಗ್ ಯಾದವ್ ಮುಂದೆ ಬಂದಿರುವುದರಿಂದ ಮೂರನೇ ಪರ್ಯಾಯ ರಂಗ ರಚನೆಯಲ್ಲಿ ಗಮನಾರ್ಹ ಪ್ರಗತಿ ಸಾಧ್ಯವಾಗಿದೆ. ಹೀಗೆಂದವರು ರ್‍ಯಾಲಿಯ ಪ್ರಮುಖ ಭಾಷಣಕಾರ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್. ಅಕ್ಬರ್‌ಪುರದ ಮಾಜಿ ಸಿಪಿಐ(ಎಂ) ಶಾಸಕ ಅಕ್ಬರ್ ಹುಸೇನ್ ಬಾಬರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ರಾಮ ಸುಮೇರ್ ಯಾದವ್ ಅಲ್ಲದೆ ನಾನಾ ಸಾಮೂಹಿಕ ಸಂಘಟನೆಗಳ ರಾಜ್ಯ ಕಾರ್ಯದರ್ಶಿಗಳು ರ್‍ಯಾಲಿಯಲ್ಲಿ ಮಾತನಾಡಿದರು. ಅಖಿಲ ಭಾರತ ಕಿಸಾನ್ ಸಭಾದ ಕೇಂದ್ರ ಸಮಿತಿ ಜಂಟಿ ಕಾರ್ಯದರ್ಶಿ ಪಿ.ಕೆ. ಟಂಡನ್ ಕೂಡಾ ಭಾಷಣ ಮಾಡಿದರು.

ಭೂ ಸುಧಾರಣೆ ತಿದ್ದುಪಡಿ ಮಸೂದೆ, 1995 ಮತ್ತು ರೈತ ವಿರೋಧಿ ಕೃಷಿ ನೀತಿಗೆ ವಿರೋಧ

'ಮಣ್ಣಿನ ಮಗ'ನ ಮಣ್ಣು ಮಾರುವ ಮಸೂದೆಗೆ ಬೆಂಕಿ!

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಮತ್ತು ಕರ್ನಾಟಕ ಪ್ರಾಂತ ರೈತ ಸಂಘದ ಕರೆಯ ಮೇರೆಗೆ ದೇವೇಗೌಡರ ರಾಜ್ಯ ಸರಕಾರವು ತಂದಿರುವ ಭೂ ಸುಧಾರಣಾ ತಿದ್ದುಪಡಿ ಮಸೂದೆ, 1995ರ ಕರಡನ್ನು ವಿರೋಧಿಸಿ ಬೆಂಗಳೂರು ಜಿಲ್ಲೆಯ ನೂರಾರು ರೈತರು ಮತ್ತು ಕಾರ್ಮಿಕರು 12.10.1995ರಂದು ಪ್ರತಿಭಟನೆ ನಡೆಸಿ, ಬೆಂಗಳೂರು ಮತ್ತು ದಕ್ಷಿಣ ತಾಲೂಕು ಕಛೇರಿಯ ಎದುರು ಮಸೂದೆಗೆ ಬೆಂಕಿ ಹಚ್ಚಿ ಸುಟ್ಟರು.

ಪ್ರದರ್ಶನಕಾರರನ್ನುದ್ದೇಶಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ.ಪಿ.ಜಗನ್ನಾಥ್ ಮತ್ತು ಅಧ್ಯಕ್ಷರಾದ ಕಾಂ.ಜಿ.ಎನ್. ನಾಗರಾಜ್ ರವರು ಈ ಕರಾಳ ಮಸೂದೆಯ ಹಾನಿಗಳನ್ನು ವಿವರಿಸಿ ಈ ಹೋರಾಟವನ್ನು ಮುಂದುವರೆಸಬೇಕಾದ ಅಗತ್ಯತೆಯನ್ನು ಒತ್ತಿ ಹೇಳಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಮತ್ತು ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾಂ.ಎಸ್.ಸೂರ್ಯನಾರಾಯಣರಾವ್ ರವರು ಕಾಂಗ್ರೆಸ್(ಐ) ಸರಕಾರದ ಉದಾರೀಕರಣದ ನೀತಿಯನ್ನು ಚಾಚೂ ತಪ್ಪದೇ ಅನುಸರಿಸುತ್ತಿರುವ ದೇವೇಗೌಡರ ಸರಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಪಕ್ಷದ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಾಂ.ಆರ್.ಶ್ರೀನಿವಾಸ್ ರವರು ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡುತ್ತಾ ಸಾಕಷ್ಟು ಸಂಖ್ಯೆಯಲ್ಲಿ ಸೇರಿ ಈ ಕಾರ್ಯಕ್ರಮವನ್ನು ಯಶಸ್ವಿ ಮಾಡಿದ್ದಕ್ಕೆ ಧನ್ಯವಾದವನ್ನು ಅರ್ಪಿಸುತ್ತಾ ರೈತ ಕೂಲಿಕಾರರ ಐಕ್ಯ ಹೋರಾಟವೊಂದೇ ನಮ್ಮ ಮುಂದಿರುವ ದಾರಿ ಎಂಬುದನ್ನು ಹೇಳಿದರು.

ಗಂಗಾವತಿ:

ಸಿಪಿಐ(ಎಂ) ಗಂಗಾವತಿ ತಾಲೂಕು ಸಮಿತಿ ನೇತೃತ್ವದಲ್ಲಿ ಭೂಸುಧಾರಣಾ ತಿದ್ದುಪಡಿ ಮಸೂದೆಗೆ ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆ ಪಕ್ಷಗಳು ಪರೋಕ್ಷವಾಗಿ ಬೆಂಬಲ ಸೂಚಿಸಿ ಇಡೀ ರೈತ ಮತ್ತು ಕೂಲಿಕಾರರ ವರ್ಗಕ್ಕೆ ದ್ರೋಹ ಮಾಡಿವೆ ಎಂದು ಆರೋಪಿಸಿ ಪ್ರತಿಭಟನಾ ಮೆರವಣಿಗೆಯನ್ನು ಏರ್ಪಡಿಸಿತ್ತು. ಪಕ್ಷದ ಕಾರ್ಯಕರ್ತರು ಕೃಷಿ ಕೂಲಿಕಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದ ಈ ಪ್ರತಿಭಟನಾ ಸಭೆಯಲ್ಲಿ ಈ ಜನವಿರೋಧಿ ನೀತಿಯನ್ನು ವಿವರವಾಗಿ ಕಾಂ.ಜಿ.ಎನ್.ನಾಗರಾಜ್ ವಿವರಿಸಿದರು. ಮೆರವಣಿಗೆಯ ನೇತೃತ್ವವನ್ನು ಕಾಂ.ಬಾಳಪ್ಪ, ಕಾಂ.ಚಂದ್ರಪ್ಪ ಹೊಸ್ಕೇರಾ, ಕಾಂ.ಗಂಗಾಧರಯ್ಯ, ಕಾಂ.ಎ.ಹುಲುಗಪ್ಪ ವಹಿಸಿದ್ದರು. ಕೃಷಿ ನೀತಿ ಹಾಗೂ ಭೂ ಸುಧಾರಣೆಗೆ ಸಂಬಂಧಪಟ್ಟ ವಿವರವನ್ನು ಕಾಂ.ಸತ್ಯಪ್ಪ ನಾಗಮ್ಮ ವಿವರಿಸಿದರು.

ಮೆರವಣಿಗೆಯು ತಹಸೀಲ್ದಾರರ ಕಾರ್ಯಾಲಯಕ್ಕೆ ತಲುಪಿ ಮನವಿ ಸಲ್ಲಿಸಿ ನಂತರ ಕೃಷಿ ನೀತಿ ವಿಧೇಯಕ ಪುಸ್ತಕವನ್ನು ದಹನ ಮಾಡಲಾಯಿತು.

ಹಾನಗಲ್:

ಭೂ ಸುಧಾರಣಾ ತಿದ್ದುಪಡಿಗೆ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಆಶ್ರಯದಲ್ಲಿ ದಿನಾಂಕ 9.10.95ರಂದು ಪ್ರತಿಭಟನಾ ಸಭೆಯನ್ನು ಏರ್ಪಡಿಸಿ ನಂತರ ಬೆಂಕಿ ಹಚ್ಚಿ ಸುಟ್ಟು ಹಾಕಲಾಯಿತು. ಶ್ರೀ ವೀರಯ್ಯ ಹಿರೇಮಠ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ನಿತ್ಯಾನಂದಸ್ವಾಮಿ, ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಫಕೀರಪ್ಪ ಹೋತನಹಳ್ಳಿ, ಎಂ.ಜಿನ್ನಾ, ಹಕ್ಕಲಗೌಡ ಪಾಟೀಲ್ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಬಳ್ಳಾರಿ:

ತಾಲೂಕಿನ ಕುರುಗೋಡು ಗ್ರಾಮದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಭೂ ಸುಧಾರಣಾ ತಿದ್ದುಪಡಿಯನ್ನು ವಿರೋಧಿಸಿ ಇತ್ತೀಚೆಗೆ ನಾಡ ಕಛೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು. ಸತ್ಯಾಗ್ರಹದ ನೇತೃತ್ವವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷರಾದ ವಿ.ಎಸ್. ಶಿವಶಂಕರ್ ಹಾಗೂ ಜಿಲ್ಲಾ ಮುಖಂಡರಾದ ಕೆ. ಗಾದಿ ಲಿಂಗಪ್ಪನವರು ವಹಿಸಿದ್ದರು.

ರಾಜ್ಯ ಸರಕಾರದ ಭೂ ಮಿತಿ ಕಾನೂನಿನ ಬಿಲ್ಲನ್ನು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಮುಖಂಡರಾದ ಕೆ. ಗಾದಿಲಿಂಗಪ್ಪನವರು ನಾಡ ಕಛೇರಿಯ ಮುಂದೆ ಸುಟ್ಟು ಹಾಕಿದರು. ಧರಣಿಯಲ್ಲಿ ರೈತ ಸಂಘದ ಮುಖಂಡರಾದ ಡಿ.ನಾಗೇಶ್ವರರಾವ್, ಎನ್.ಹನುಮಂತಪ್ಪ, ಎಸ್.ಬಸಪ್ಪ ಹಾಗೂ ಡಿವೈಎಫ್ಐ ಮುಖಂಡರಾದ ಎಸ್.ಎಂ. ಮಹಮ್ಮದ್, ಟಿ.ರಾಮಕೃಷ್ಣ, ಟಿ. ಇಮಾಮ್‌ವತಿ ಸಾಹೇಬ್, ಕೆ.ಪರಶುರಾಮ ಭಾಗವಹಿಸಿದ್ದರು.

ಚಿಂತಾಮಣಿ:

ಭೂ ಸುಧಾರಣಾ ತಿದ್ದುಪಡಿಯನ್ನು ವಿರೋಧಿಸಿ ಮತ್ತು ಜನಪರ ನೀತಿಗಳಿಗಾಗಿ ಆಗ್ರಹಿಸಿ ಚಿಂತಾಮಣಿ ತಾಲೂಕು ಕಛೇರಿ ಎದುರು ಬೃಹತ್ ಪ್ರದರ್ಶನ, ಬಹಿರಂಗ ಸಭೆ ನಡೆದು ಭೂ ಸುಧಾರಣಾ ತಿದ್ದುಪಡಿ ಮತ್ತು ಹೊಸ ಕೃಷಿ ನೀತಿಯ ಪ್ರತಿಗಳನ್ನು ಸುಡಲಾಯಿತು.

ಸಿಪಿಐ(ಎಂ) ರಾಜ್ಯ ಸಮಿತಿಯ ಕರೆ ಮೇರೆಗೆ ನಡೆದ ಈ ಕಾಯಕ್ರಮದಲ್ಲಿ ತಾಲ್ಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ನೂರಾರು ಜನ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ಪಕ್ಷದ ಪ್ರದರ್ಶನಕಾರರನ್ನುದ್ದೇಶಿಸಿ ಮುಖಂಡರಾದ ಜಿ.ಸಿ.ಬಯ್ಯಾರೆಡ್ಡಿ, ಸಿ. ಗೋಪಿನಾಥ್, ವಿ. ಮುನಿವೆಂಕಟರೆಡ್ಡಿ ಮಾತನಾಡಿದರು.

ಕುಂದಾಪುರ:

ಭೂ ಮಾಲಿಕರಿಗೂ ಬಂಡವಾಳ ಶಾಹಿಗಳಿಗೂ ಕೃಷಿಯೇತರ ಉದ್ದೇಶಗಳಿಗೆ 200 ಎಕ್ರೆಗಳವರೆಗೆ ಕೃಷಿ ಭೂಮಿಯನ್ನು ಖರೀದಿ ಮಾಡಲು ಅನುಕೂಲವಾಗುವಂತೆ ಭೂ ಪರಿಮಿತಿಯನ್ನು ತಿದ್ದುಪಡಿ ಮಾಡಲಾಗಿದೆ. ಇದನ್ನು ಪ್ರತಿಭಟಿಸಿ ಅಕ್ಟೋಬರ್ 9ರಂದು ಕುಂದಾಪುರ ತಾಲೂಕು ಕಛೇರಿಯ ಎದುರು ರೈತ-ಕಾರ್ಮಿಕರು ಮೆರವಣಿಗೆಯಲ್ಲಿ ಬಂದು ಭೂ ಸುಧಾರಣಾ ಕಾಯಿದೆಗೆ ತಂದ ತಿದ್ದುಪಡಿ ಪ್ರತಿಯನ್ನು ಸುಟ್ಟು ಹಾಕಲಾಯಿತು.

ಅನಂತರ ಕುಂದಾಪುರ ಗಾಂಧಿ ಮೈದಾನದಲ್ಲಿ ನಡೆದ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಸಿಪಿಐ(ಎಂ)ನ ದ.ಕ. ಜಿಲ್ಲಾ ಸಮಿತಿ ಸದಸ್ಯರಾದ ನಾರಾಯಣರವರು ವಹಿಸಿದ್ದರು. ಆರಂಭದಲ್ಲಿ ರೈತ ಮುಖಂಡರಾದ ಯು. ದಾಸಭಂಡಾರಿಯವರು ಸ್ವಾಗತಿಸಿ ಭೂ ಸುಧಾರಣಾ ತಿದ್ದುಪಡಿ ಜನವಿರೋಧಿ ಕ್ರಮವೆಂದು ತಿಳಿಸಿ ಪ್ರತಿಭಟನೆಗೆ ಕರೆ ನೀಡಿದರು. ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಅಬ್ರಹಾಂ ಕರ್ಕಡ ಮತ್ತು ಕೆ. ಶಂಕರ್ ರವರು ಮಾತನಾಡಿ ಭೂ ಸುಧಾರಣೆ ಕಾಯಿದೆಗೆ ತಂದಿರುವ ಈ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುವಂತೆ ಸರಕಾರವನ್ನು ಆಗ್ರಹಿಸಿದರು. ಸಿಪಿಐ(ಎಂ) ಪಕ್ಷದ ದ.ಕ. ಜಿಲ್ಲಾ ಸಮಿತಿಯ ಸದಸ್ಯರಾದ ಮಹಾಬಲ ಒಡೇರಹೋಬಳಿಯವರು ಕೊನೆಗೆ ವಂದನೆ ಸಲ್ಲಿಸಿದರು.

ಮೈಸೂರು:

ಭೂ ಸುಧಾರಣಾ ಕಾಯಿದೆ ತಿದ್ದುಪಡಿಯನ್ನು ಕೂಡಲೇ ರದ್ದು ಮಾಡಬೇಕೆಂದು ಒತ್ತಾಯಿಸಿ 9.10.1995ರಂದು ಮೈಸೂರು ತಾಲ್ಲೂಕು ಕಛೇರಿಯ ಮುಂಭಾಗದಲ್ಲಿ ಯಶಸ್ವಿ ಧರಣಿ ಸತ್ಯಾಗ್ರಹವನ್ನು ಬೆಳಿಗ್ಗೆ ೧೧ ಗಂಟೆಯಿಂದ ಸಂಜೆ ೪ ಗಂಟೆಯವರೆಗೆ ನಡೆಸಲಾಯಿತು. ಈ ಧರಣಿ ಸತ್ಯಾಗ್ರಹದಲ್ಲಿ ಸಾಮೂಹಿಕ ಸಂಘಟನೆಗಳ, ಪಕ್ಷದ ಕಾರ್ಯಕರ್ತರು ಭಾಗವಹಿಸಿದ್ದರು. ಧರಣಿ ಸತ್ಯಾಗ್ರಹದ ನಂತರ ಪಕ್ಷದ ಸದಸ್ಯರಾದ ಕಾಂ.ಜಯರಾಂ, ಕಾಂ. ಸುಬ್ರಮಣಿ, ಕಾಂ.ಪುಟ್ಟಸ್ವಾಮಿ ಮತ್ತು ಮೈಸೂರು ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ.ಎಂ.ಎನ್. ಉಗ್ರಪ್ಪನವರು ತಹಸೀಲ್ದಾರರ ಮುಖಾಂತರ ರಾಜ್ಯದ ಮುಖ್ಯಮಂತ್ರಿಗಳಿಗೆ ಮನವಿ ಪತ್ರವೊಂದನ್ನು ಸಲ್ಲಿಸಿದರು.

ಭಟ್ಕಳ:

ಸಿಪಿಐ(ಎಂ) ತಾಲೂಕು ಘಟಕದ ಆಶ್ರಯದಲ್ಲಿ 850ಕ್ಕೂ ಮಿಕ್ಕಿ ಕಾರ್ಮಿಕರು, ಪಕ್ಷದ ಕಾರ್ಯಕರ್ತರು ಸಹಾಯಕ ಕಮೀಷನರ್ ಕಛೇರಿ ಎದುರು ಕರಡು ಪ್ರತಿ ಸುಟ್ಟು ಹಾಕಿ ಬಹಿರಂಗ ಸಭೆ ನಡೆಸಿದರು. ಬಹಿರಂಗ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಕಾಂ.ಕೆ.ಸಂಕರ್, ಭಟ್ಕಳ ಪಕ್ಷದ ಮುಖಂಡರಾದ ಸುಭಾಷ್ ಕೊಪ್ಪಿಕರ ಮಾತನಾಡಿದರು.

ದಾಂಡೇಲಿ:

ಭೂ ಸುಧಾರಣ ಕಾಯಿದೆಗೆ ತಿದ್ದುಪಡಿಯನ್ನು ರದ್ದು ಮಾಡಲು ಒತ್ತಾಯಿಸಿ ಸಿಪಿಐ(ಎಂ)ನ ನೂರಾರು ಕಾರ್ಯಕರ್ತರು ಮೌನ ಮೆರವಣಿಗೆಯನ್ನು ನಡೆಸಿದರು. ತಹಸೀಲ್ದಾರರ ಕಛೇರಿಗೆ ತೆರಳಿ ಬಹಿರಂಗ ಸಭೆಯನ್ನು ನಡೆಸಿದರು. ಸಭೆಯನ್ನುದ್ದೇಶಿಸಿ ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಕಾಂ.ಮಾಧವರವರು ಮಾತನಾಡಿ ಸರಕಾರದ ಜನವಿರೋಧಿ ನೀತಿಗಳನ್ನು ಕಟುವಾಗಿ ಟೀಕಿಸಿದರು. ಭೂ ಸುಧಾರಣಾ ತಿದ್ದುಪಡಿ ಕರಡಿಗೆ ಕಾಂ. ಎಂ.ಬಿ. ನಾಯ್ಕರವರು ಅಗ್ನಿ ಸ್ಪರ್ಶ ಮಾಡುತ್ತಾ ಮುಂದಿನ ದಿನಗಳಲ್ಲಿ ಹೋರಾಟವನ್ನು ತೀವ್ರಗೊಳಿಸಬೇಕಾಗಬಹುದೆಂದು ಎಚ್ಚರಿಕೆ ನೀಡಿದರು.

ಉಡುಪಿ:

ಭೂ ಸುಧಾರಣಾ ಕಾಯಿದೆ ತಿದ್ದುಪಡಿಯನ್ನು ಸಿಪಿಐ(ಎಂ) ತಾಲೂಕು ಸಮಿತಿಯ ನೇತೃತ್ವದಲ್ಲಿ ತಾಲೂಕು ಕಛೇರಿಯ ಮುಂದೆ ಇತ್ತೀಚೆಗೆ ಮತಪ್ರದರ್ಶನ ನಡೆಸಿ ತಿದ್ದುಪಡಿ ಕಾಯಿದೆಯ ಪ್ರತಿಯನ್ನು ಸುಟ್ಟು ಹಾಕಿದರು.

ಸಿಪಿಐ(ಎಂ) ನಾಯಕರಾದ ಕಾಂ.ಡೆವಿಡ್ ಕರ್ಕಡರವರು ಪ್ರದರ್ಶನಕಾರರನ್ನು ಉದ್ದೇಶಿಸಿ ಮಾತನಾಡಿ ರಾಜ್ಯ ಸರಕಾರವು ಕೃಷಿ ಚಟುವಟಿಕೆಗಳನ್ನೇ ಸ್ಥಗಿತಗೊಳಿಸುವಂತಹ ಕಾನೂನು ತಿದ್ದುಪಡಿ ಮಾಡಿದೆ ಎಂದರು. ಸಿಪಿಐ(ಎಂ)ನ ಉಡುಪಿ ತಾಲೂಕು ಸಮಿತಿ ಕಾರ್ಯದರ್ಶಿ ಕಾಂ.ಪಿ.ವಿಶ್ವನಾಥ್ ರೈಯವರು ಮಾತನಾಡುತ್ತಾ ಈಗ ನಡೆದಿರುವುದು ಕೇವಲ ಸಾಂಕೇತಿಕ ಪ್ರತಿಭಟನೆ ಆದ್ದರಿಂದ ಸರಕಾರ ಈ ತಿದ್ದುಪಡಿ ಕಾಯಿದೆಯನ್ನು ಹಿಂತೆಗೆದುಕೊಳ್ಳದಿದ್ದರೆ ತೀವ್ರವಾದ ಹೋರಾಟಗಳು ಮೂಡಿ ಬರಲಿವೆ ಎಂದು ಎಚ್ಚರಿಸಿದರು.

ಬಳ್ಳಾರಿ:

ಅಕ್ಟೋಬರ್ 9 ರಂದು ಬಳ್ಳಾರಿ ನಗರದಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಎದುರು ಸಿಪಿಐ(ಎಂ) ಕಾರ್ಯಕರ್ತರು ಇತ್ತೀಚೆಗೆ ರಾಜ್ಯದ ಜನತಾದಳದ ಸರಕಾರ ತಂದಿರುವ ಭೂ ಸುಧಾರಣಾ ಕಾಯಿದೆಯ ತಿದ್ದುಪಡಿಯನ್ನು ರದ್ದುಗೊಳಿಸಬೇಕೆಂದು ಒತ್ತಾಯಿಸಿ ಪ್ರತಿಭಟನಾ ಸತ್ಯಾಗ್ರಹವನ್ನು ನಡೆಸಿದರು. ಧರಣಿ ಸತ್ಯಾಗ್ರಹದಲ್ಲಿ ಸಿಪಿಐ(ಎಂ) ಬಳ್ಳಾರಿ ಜಿಲ್ಲಾ ಸಮಿತಿ ಕಾರ್ಯದರ್ಶಿಗಳಾದ ಕಾಂ.ಪ್ರಸನ್ನಕುಮಾರ್ ಹಾಗೂ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಯು.ಬಸವರಾಜ್, ಜಿಲ್ಲಾ ಸಮಿತಿ ಸದಸ್ಯರಾದ ಕಾಂ.ಕೆ.ಎನ್. ರಾಮಾಂಜನೇಯ ಅಲ್ಲದೇ ಕಾಂ. ಬಸವನಗೌಡ, ಕಾಂ.ಪಿ.ಆರ್. ವೆಂಕಟೇಶ್, ಕಾಂ. ಲೋಕೇಶ್, ಕಾಂ. ಮಲ್ಲಿಕಾರ್ಜುನ, ಕಾಂ. ರಾಮಚಂದ್ರ ಮುಂತಾದವರು ಭಾಗವಹಿಸಿದ್ದರು.

ದೇವದುರ್ಗ:

ಭೂ ಸುಧಾರಣಾ ತಿದ್ದುಪಡಿಯ ರದ್ದತಿಗೆ ಒತ್ತಾಯಿಸಿ ಅಕ್ಟೋಬರ್ 9ರಂದು ದೇವದುರ್ಗದಲ್ಲಿ ಸಿಪಿಐ(ಎಂ)ನ ಕಾರ್ಯಕರ್ತರು ಮೆರವಣಿಗೆಯಲ್ಲಿ ತಹಸೀಲ್ದಾರರ ಕಛೇರಿಗೆ ತೆರಳಿ ನೂತನ ಭೂ ಸುಧಾರಣಾ ವಿಧೇಯಕದ ಪ್ರತಿಯನ್ನು ಸುಟ್ಟು ಪ್ರತಿಭಟಿಸಿದರು. ಪ್ರತಿಭಟನಾಕಾರರನ್ನುದ್ದೇಶಿಸಿ ಕಾಂ.ಗಿರಿಯಪ್ಪ ಜಾಲಹಳ್ಳಿ, ಕಾಂ. ಜೆ.ಬಿ. ನಾಯಕ್ ಮಾತನಾಡಿದರು.

ಭು ಸುಧಾರಣಾ ತಿದ್ದುಪಡಿ ವಿಧೇಯಕ ವಾಪಸಿಗೆ ಆಗ್ರಹ

ರಾಜ್ಯ ಸರಕಾರದ ಹೊಸ ಕೃಷಿ ನೀತಿಯನ್ನು ಹಾಗೂ ಭೂ ಸುಧಾರಣಾ ತಿದ್ದುಪಡಿ ವಿಧೇಯಕವನ್ನು ಸಮರ್ಥಿಸಿಕೊಳ್ಳುವ ನೆಪದಲ್ಲಿ ಪ್ರೊ. ನಂಜುಂಡಸ್ವಾಮಿಯವರನ್ನು ಅಪಹಾಸ್ಯ ಮಾಡಿದ ಕೃಷಿ ಸಚಿವ ಬೈರೇಗೌಡರ ಕ್ರಮವನ್ನು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸುತ್ತದೆಂದು ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಬಾಳೆಯವರು ತಿಳಿಸಿದ್ದಾರೆ.

ರಾಜ್ಯದಲ್ಲಿ ಬಹುಸಂಖ್ಯಾತ ಗ್ರಾಮೀಣ ದುಡಿಯುವ ಜನ ಭೂಮಿಯಿಲ್ಲದವರಾಗಿದ್ದು ಇಂದಲ್ಲ ನಾಳೆ ಪ್ರಗತಿಪರ ಭೂ ಸುಧಾರಣೆ ಬಂದು ಭೂಮಿ ಸಿಕ್ಕೀತು, ೫೦ ಲಕ್ಷಕ್ಕೂ ಹೆಚ್ಚಾಗಿರುವ ಸರಕಾರೀ ಭೂಮಿ ತನಗೆ ಸಿಕ್ಕೀತೆಂದು ಚಾತಕ ಪಕ್ಷಿಯಂತೆ ಕಾಯ್ದ ಜನತೆಗೆ ಜನತಾದಳ ರಾಜ್ಯ ಸರಕಾರ ದ್ರೋಹ ಬಗೆದು ಭೂ ಮಾಲಿಕರನ್ನು ಬೆಂಬಲಿಸಿ, ನಿರ್ಯಾತ ಆಧಾರಿತ ಕೃಷಿ ನೀತಿಯು ಬಂಡವಾಳಶಾಹೀ ಭೂ ಮಾಲಕರನ್ನು ಬೆಳೆಸುವ ದಾರಿ ಹಿಡಿದಿದ್ದು ದುರದೃಷ್ಟಕರವಾಗಿದ್ದು ಕೂಡಲೇ ಇದನ್ನು ಹಿಂತೆಗೆದುಕೊಳ್ಳಲು ಕರ್ನಾಟಕ ಪ್ರಾಂತ ರೈತ ಸಂಘ ಒತ್ತಾಯಿಸಿದೆ.


ಡಿವೈಎಫ್ಐ ಹೊಸ ರಾಜ್ಯ ಸಮಿತಿ

ಮಂಗಳೂರಿನಲ್ಲಿ ಡಿವೈಎಫ್ಐನ ಐದನೇ ರಾಜ್ಯ ಸಮ್ಮೇಳನ ಆರಿಸಿದ ಹೊಸ ರಾಜ್ಯ ಸಮಿತಿ ಹಾಗೂ ಪದಾಧಿಕಾರಿಗಳ ಹೆಸರುಗಳು ಹೀಗಿವೆ.

ಅಧ್ಯಕ್ಷರು	ಎಸ್.ವೈ. ಗುರುಶಾಂತ್
ಉಪಾಧ್ಯಕ್ಷರು	ಗೋಪಾಲಕೃಷ್ಣ
	ವಸಂತ ಆಚಾರಿ
	ಶರಬಣ್ಣ ನಾಗಲಾಪುರ
ಕಾರ್ಯದರ್ಶಿ	ಪೀಟರ್ ಲೋಬೋ
ಸಹಕಾರ್ಯದರ್ಶಿ	ಎಂ.ವಿ.ನಾರಾಯಣ ಸ್ವಾಮಿ
	ಕೃಷ್ಣಪ್ಪ ಕೊಂಚಾಡಿ
ಖಜಾಂಚಿ	ಅಶೋಕನ್

ಸದಸ್ಯರು

ಬಾಲಕೃಷ್ಣಶೆಟ್ಟಿ, ಈ ಬಸವರಾಜು, ಮಹಾಂತೇಶ್ ಕೆ.(ರಾಜ್ಯ ಕೇಂದ್ರ), ಹೇಮಂತರಾಜು(ಬೆಂಗಳೂರು), ರಹಮತುಲ್ಲಾ(ಕೋಲಾರ), ಯಾದವ ಶೆಟ್ಟಿ(ದ.ಕ.), ವಿಠಲ ಭಂಡಾರಿ(ಉ.ಕ.), ಕೆ.ಎನ್. ರಾಮಾಂಜನೇಯ, ಗಣೇಶ್(ಬಳ್ಳಾರಿ), ಶರೀಫುದ್ದೀನ್(ರಾಯಚೂರು), ನಿಂಗಣ್ಣಾ ಸಗರ(ಗುಲ್ಬರ್ಗಾ), ಕಾವೇರಿ. ಕಿಶೋರ ಕುಟ್ಟಪ್ಪ(ಕೊಡಗು), ಮಾರುತಿ(ಮೈಸೂರು), ಶಿವಕಾಳಯ್ಯ, ಪುಟ್ಟಮಾದು(ಮಂಡ್ಯ). ಖಾಯಂ ಆಹ್ವಾನಿತರಾಗಿ ಎಸ್ಎಫ್ಐನ ರಾಜ್ಯ ಅಧ್ಯಕ್ಷರು ಮತ್ತು ಕಾರ್ಯದರ್ಶಿ.



ಪೀಟರ್ ಲೋಬೋ
ಹೊಸ ರಾಜ್ಯ ಕಾರ್ಯದರ್ಶಿ

ಶುಭ ಹಾರೈಕೆ

ಡಿವೈಎಫ್ಐ ಮಳವಳ್ಳಿ ತಾಲೂಕು ಕಾರ್ಯದರ್ಶಿಯಾದ ಕಾಂ.ಎನ್.ಎಲ್. ಭರತ್ ರಾಜ್ ಅವರ ವಿವಾಹವು ನವಂಬರ್ 5ರಂದು ಹಾಗೇಪುರದಲ್ಲಿ ದೇವಿ ಎಂಬುವರೊಂದಿಗೆ ಜರುಗಿತು. ಈ ನವದಂಪತಿಗಳಿಗೆ ವಿಶ್ವರಂಗ ಬಳಗ ಶುಭ ಹಾರೈಸುತ್ತದೆ. ಈ ಶುಭ ಸಂದರ್ಭದಲ್ಲಿ ಕಾಂ. ಭರತ್ ರಾಜ್ ವಿಶ್ವರಂಗಕ್ಕೆ 100 ರೂಗಳ ಕಾಣಿಕೆ ನೀಡಿದ್ದಾರೆ. ಅವರ ಅಭಿಮಾನಕ್ಕೆ ನಾವು ಆಭಾರಿಗಳಾಗಿದ್ದೇವೆ.

* * * * * * * * * * * * *

ಇದೇ ಸೆಪ್ಟೆಂಬರ್ 27 ರಂದು 'ವಿಶ್ವರಂಗ'ದ ಹಾಗೂ ಸಿಪಿಐ(ಎಂ)ನ ಹಿತೈಷಿಗಳಾದ ರೋಹಿಣಿ ಹಾಗೂ ರವೀಂದ್ರ ಅವರು ಸರಳ ರೀತಿಯಲ್ಲಿ ವಿವಾಹವಾಗಿದ್ದು ಈ ದಿನದ ನೆನಪಿಗಾಗಿ 'ವಿಶ್ವರಂಗ'ಕ್ಕೆ 100 ರೂಗಳ ಕಾಣಿಕೆ ನೀಡಿದ್ದಾರೆ. ನವದಂಪತಿಗಳಿಗೆ ಕೃತಜ್ಞತೆಯೊಂದಿಗೆ 'ವಿಶ್ವರಂಗ' ಬಳಗ ಹಾರ್ದಿಕ ಶುಭಾಶಯಗಳನ್ನು ಸಲ್ಲಿಸುತ್ತದೆ.

ಭಾರತ ಕಮ್ಯುನಿಸ್ಟ್ ಪಕ್ಷಕ್ಕೆ 75 ವರ್ಷ

-ಸುರ್ಜಿತ್



ಈ ಅಕ್ಟೋಬರ್ 17 ಭಾರತ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯ 75ನೇ ವಾರ್ಷಿಕೋತ್ಸವದ ದಿನ. 1920ರ ಅಕ್ಟೋಬರ್ 17ರಂದು ಸ್ಥಾಪನೆಗೊಂಡ ಪಕ್ಷ ಕಾರ್ಮಿಕ ವರ್ಗದ ಮತ್ತು ರೈತಾಪಿ ವರ್ಗಗಳ ಆಂದೋಲನವನ್ನು ಕಟ್ಟಿ ಬೆಳೆಸುವಲ್ಲಿ ದೇಶದ ವಿವಿಧ ಕ್ರಾಂತಿಕಾರಿ ಪ್ರವೃತ್ತಿಗಳನ್ನು ಮಾರ್ಕ್ಸ್‌ವಾದ-ಲೆನಿನ್‌ವಾದದತ್ತ ಸೆಳೆದು ರಾಷ್ಟ್ರೀಯ ವಿಮೋಚನಾ ಹೋರಾಟಕ್ಕೆ ನವೋತ್ಸಾಹ ತುಂಬಿತು. ಆರಂಭದಲ್ಲೇ ಪಕ್ಷ ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಂದ ತೀವ್ರ ದಮನವನ್ನು ಎದುರಿಸಬೇಕಾಗಿ ಬಂತು. ದೇಶದಲ್ಲಿ ಕಮ್ಯುನಿಸ್ಟ್ ಚಟುವಟಿಕೆಗಳನ್ನು ಹತ್ತಿಕ್ಕಲು ದೃಢ ಸಂಕಲ್ಪ ಮಾಡಿದ್ದರು ಅವರು.

ಮೂರು ಮೊಕದ್ದಮೆಗಳು

ಮೊದಲ ಹತ್ತು ವರ್ಷಗಳಲ್ಲೇ ಕಮ್ಯುನಿಸ್ಟ್ ಪಕ್ಷದ ವಿರುದ್ಧ ಬ್ರಿಟಿಷರು ಮೂರು 'ಪಿತೂರಿ' ಮೊಕದ್ದಮೆಗಳನ್ನು ಹಾಕಿದರು. ಮೊದಲನೆಯದ್ದು 1922-23ರ ಪೇಶಾವರ್ ಪಿತೂರಿ ಮೊಕದ್ದಮೆ. ಮಾಸ್ಕೋದ "ಪೂರ್ವದ ಶ್ರಮಜೀವಿಗಳ ವಿಶ್ವವಿದ್ಯಾಲಯ"ದಲ್ಲಿ ಅಧ್ಯಯನ ಮಾಡಿ ದೇಶದಲ್ಲಿ ಕಾರ್ಮಿಕ ವರ್ಗ ಹಾಗೂ ಇತರ ಶ್ರಮಜೀವಿಗಳನ್ನು ಸಂಘಟಿಸಿ ಕ್ರಾಂತಿಕಾರಿ ಆಂದೋಲನ ಬೆಳೆಸಲೆಂದು ಹಾಗೂ ರಾಷ್ಟ್ರೀಯ ವಿಮೋಚನೆಯನ್ನು ಸಮಾಜವಾದಿ ಕ್ರಾಂತಿಯೊಂದಿಗೆ ಬೆಸೆವ ಏಕೈಕ ಹಾದಿ ಮಾರ್ಕ್ಸ್‌ವಾದ ಎಂದು ಅದರ ಪ್ರಚಾರಕ್ಕೆಂದು ಭಾರತಕ್ಕೆ ಮರಳಿದ ಹಲವು ಮೊಹಾಜಿರ್ ಗಳ ಮೇಲೆ ಈ ಮೊಕದ್ದಮೆಯನ್ನು ಹಾಕಲಾಯಿತು. ಅವರಿಗೆ ಭಾರತಕ್ಕೆ ಮರಳಲು ಪಾಸ್ ಪೋರ್ಟ್ ಪಡೆಯಲು ಸಾಧ್ಯವಾಗಲಿಲ್ಲ. ಆದ್ದರಿಂದ ಉನ್ನತ ಪರ್ವತ ಶ್ರೇಣಿಗಳನ್ನು ದಾಟಿಕೊಂಡು ಅವರು ಬರಬೇಕಾಯಿತು. ಹಾಗೆ ಬರುವಾಗ ಅವರನ್ನು ಪೇಶಾವರದಲ್ಲಿ ಹಿಡಿದು ವಿಚಾರಣೆಗೊಳಪಡಿಸಲಾಯಿತು. ಅವರಲ್ಲಿ ಅಕ್ಬರ್ ಖಾನ್, ಫಿರೋಜುದ್ದೀನ್ ಮನ್ಸೂರ್, ಅಬ್ದುಲ್ ಮಜೀದ್ ಮುಂತಾದ ಮಹತ್ವಪೂರ್ಣ ಮುಖಂಡರಿದ್ದರು. ಮುಂದೆ ಇವರೆಲ್ಲಾ ನಮ್ಮ ದೇಶದಲ್ಲಿ ಕಮ್ಯುನಿಸ್ಟ್ ಪಕ್ಷದ ಸ್ಥಾಪಕರು ಹಾಗೂ ಪ್ರಮುಖ ಮುಖಂಡರಾದರು. ನನಗೆ ಇಂತಹ ಹೆಚ್ಚಿನ ಮುಖಂಡರೊಂದಿಗೆ ಕೆಲಸ ಮಾಡುವ ಅವಕಾಶ ದೊರೆತಿತ್ತು. ಅವರ ಧೈರ್ಯ, ಅರ್ಪಣಾಭಾವ ಹಾಗೂ ಏಕಾಗ್ರ ಹೋರಾಟದ ನೇರ ಅನುಭವ ನನಗೆ ದೊರೆತಿದೆ.

1925ರಲ್ಲಿ ಕಾನ್ಪುರದಲ್ಲಿ ಕಮ್ಯುನಿಸ್ಟ್ ಶಕ್ತಿಗಳ ಮರುಸಂಘಟನೆ ಮಾಡುವ ಎರಡನೇ ಪ್ರಯತ್ನವಾಗಿ ಒಂದು ಸಮ್ಮೇಳನ ನಡೆಸಲು ಪ್ರಯತ್ನಿಸಿದಾಗ ಬ್ರಿಟಿಷರು ತೀವ್ರ ಕ್ರಮ ಕೈಗೊಂಡು ಹಲವು ಕಮ್ಯುನಿಸ್ಟರನ್ನು ಜೈಲಿಗಟ್ಟಿದರು. ಇವರಲ್ಲಿ ಮುಝಫ್ಫರ್ ಅಹ್ಮದ್, ಡಾಂಗೆ, ಶೌಕತ್ ಉಸ್ಮಾನಿ ಕೂಡಾ ಇದ್ದರು. ಇವರ ವಿರುದ್ಧ 'ಕಾನ್ಪುರ ಪಿತೂರಿ ಮೊಕದ್ದಮೆ' ಹಾಕಲಾಯಿತು.

ನಂತರ ಮತ್ತೆ 1928ರಲ್ಲಿ ವಿವಿಧ ರಾಜ್ಯಗಳಲ್ಲಿ ರೈತ-ಕಾರ್ಮಿಕ ಪಕ್ಷಗಳು ರಚನೆಗೊಂಡು ಅವೆಲ್ಲಾ ಬಹಿರಂಗ ವೇದಿಕೆಯಾಗಿ 1929ರಲ್ಲಿ ಮೊದಲ ರಾಷ್ಟ್ರೀಯ ಸಮ್ಮೇಳನ ನಡೆಸಿದಾಗ ಅದರಲ್ಲಿ ಭಾಗವಹಿಸಿದ್ದ ಮುಖಂಡರನ್ನು ಬಂಧಿಸಿ ಜೈಲಿನಲ್ಲಿ ಅವರ ವಿರುದ್ಧ 'ಮೀರತ್ ಪಿತೂರಿ ಮೊಕದ್ದಮೆ' ನಡೆಸಲಾಯಿತು. ಇದು ನಾಲ್ಕು ವರ್ಷಗಳ ಕಾಲ ನಡೆಯಿತು. ಆದರೆ ಇದರಿಂದ ಕಮ್ಯುನಿಸ್ಟರನ್ನು ದಮನಿಸುವ ಉದ್ದೇಶ ಈಡೇರಲಿಲ್ಲ, ಬದಲಿಗೆ ಈ ಮೊಕದ್ದಮೆ ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಭಾರತೀಯ ಜನಸಮೂಹಗಳ ನಡುವೆ ಜನಪ್ರಿಯಗೊಳಿಸುವಲ್ಲಿ ಒಂದು ಪ್ರಮುಖ ಪಾತ್ರ ವಹಿಸಿತು.

ಇದು ಭಾರತದ ಇತಿಹಾಸದ ಒಂದು ನಿರ್ಣಾಯಕ ಅವಧಿ. ಆಳಗೊಳ್ಳುತ್ತಿದ್ದ ಆರ್ಥಿಕ ಬಿಕ್ಕಟ್ಟಿನಿಂದಾಗಿ ದೇಶದಲ್ಲಿ ಅಸಂತೃಪ್ತಿ ಹೆಚ್ಚುತ್ತಿತ್ತು. ರೈತರು ಭಾರೀ ಹೊರೆಯಿಂದ ನರಳುತ್ತಿದ್ದರು. ಆಗ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ನೇತೃತ್ವದ ರಾಷ್ಟ್ರೀಯ ವಿಮೋಚನಾ ಹೋರಾಟ ವ್ಯಾಪಕ ಬೆಂಬಲ ಗಳಿಸಿತ್ತು. ಕಾಂಗ್ರೆಸ್ಸಿನ ಲಾಹೋರ್ ಅಧಿವೇಶನ 1930ರಲ್ಲಿ ಸಂಪೂರ್ಣ ಸ್ವಾತಂತ್ರ್ಯದ ನಿರ್ಣಯ ಅಂಗೀಕರಿಸಿತ್ತು. ನಂತರ ಅಸಹಕಾರ ಆಂದೋಲನವನ್ನು ಆರಂಭಿಸಲಾಯಿತು. ಆದರೆ ಇದನ್ನು ಹಿಂತೆಗೆದುಕೊಂಡದ್ದು ಯುವಜನರಲ್ಲಿ, ಕಾರ್ಮಿಕ ವರ್ಗ ಹಾಗೂ ರಾಷ್ಟ್ರೀಯ ಕಾಂಗ್ರೆಸ್ಸಿನೊಳಗೆ ಕೆಲಸ ಮಾಡುತ್ತಿದ್ದ ಇತರ ತೀವ್ರಗಾಮಿಗಳಲ್ಲಿ ಭ್ರಮನಿರಸನವುಂಟುಮಾಡಿತು. ಇಂತಹ ನಿರ್ಣಾಯಕ ಘಟ್ಟದಲ್ಲಿ 1933ರ ಅಂತ್ಯದ ವೇಳೆಗೆ ಮೀರತ್ ಬಂಧಿಗಳನ್ನು ಬಿಡುಗಡೆ ಮಾಡಲಾಯಿತು. ಅವರು ಜೈಲುಗಳಿಂದ ಹೊರಬಂದ ಮೇಲೆ ಮೊದಲ ಪಕ್ಷದ ಕೇಂದ್ರ ಸಮಿತಿ ರಚಿಸಿದರು. ಒಂದು ನಿಜವಾದ ಅರ್ಥದಲ್ಲಿ ಕೇಂದ್ರ ಮುಖಂಡತ್ವವಿದ್ದ ಪಕ್ಷದ ಕೇಂದ್ರವೊಂದು ರಚನೆಗೊಂಡಿತ್ತು.

ಅತ್ಯುತ್ತಮ ಕ್ರಾಂತಿಕಾರಿ ಪರಂಪರೆ

ಈ ವೇಳೆಗಾಗಲೇ ಹಲವಾರು ತೀವ್ರಗಾಮಿ ಗುಂಪುಗಳು ದೇಶದಲ್ಲಿ ಕೆಲಸ ಮಾಡುತ್ತಿದ್ದವು. ಭಾರತೀಯ ಕ್ರಾಂತಿಯ ಗುರಿಸಾಧನೆಗಾಗಿ ಶಸ್ತ್ರಗಳನ್ನು ಕೈಗೆತ್ತಿಕೊಂಡಿದ್ದವು. ಆದರೆ ಜನಸಮೂಹಗಳನ್ನು ಮುಖ್ಯವಾಗಿ ಕಾರ್ಮಿಕ ವರ್ಗ ಹಾಗೂ ರೈತಾಪಿಗಳನ್ನು ಅಣಿನೆರೆಸದೆ ಸ್ವಾತಂತ್ರ್ಯದ ಗುರಿಸಾಧನೆ ಸಾಧ್ಯವಿಲ್ಲ ಎಂಬುದು ಅವರ ಅರಿವಿಗೆ ಬಂತು. ಅವರಲ್ಲಿ ಬಹಳ ಮಂದಿ ಪಂಜಾಬಿನಲ್ಲಿ ಗದ್ದರ್ ಪಾರ್ಟಿಯಲ್ಲಿದ್ದವರು, ಭಗತ್ ಸಿಂಗ್ ರ ಹಿಂದೂಸ್ತಾನ್ ಸೋಶಲಿಸ್ಟ್ ರಿಪಬ್ಲಿಕನ್ ಆರ್ಮಿಯಲ್ಲಿದ್ದವರು, ಉತ್ತರ ಪ್ರದೇಶ, ಮದ್ರಾಸ್, ಮುಂಬೈ ಮತ್ತಿತರ ಕಡೆ ವಿವಿಧ ಗುಂಪುಗಳಲ್ಲಿದ್ದವರು ಮಾರ್ಕ್ಸ್ ವಾದದತ್ತ ಆಕರ್ಷಿತರಾದರು. ಅವರಲ್ಲಿ ಬಹಳ ಮಂದಿ ಕಮ್ಯುನಿಸ್ಟ್ ಪಕ್ಷ ಸೇರಿದರು. ಆದ್ದರಿಂದಲೇ ಕಮ್ಯುನಿಸ್ಟ್ ಪಕ್ಷ ತಾನು ದೇಶದಲ್ಲಿ ರಾಷ್ಟ್ರೀಯ ವಿಮೋಚನೆ ಹಾಗೂ ಸಮಾಜವಾದಿ ಕ್ರಾಂತಿಗಾಗಿ ನಡೆಸಿದ ಹೋರಾಟದ ಅತ್ಯುತ್ತಮ ಕ್ರಾಂತಿಕಾರಿ ಪರಂಪರೆಗಳನ್ನು ಮುಂದೊಯ್ಯುತ್ತಿರುವುದಾಗಿ ಹೆಮ್ಮೆಯಿಂದ ಹೇಳಿಕೊಳ್ಳಲು ಸಾಧ್ಯವಾಯಿತು. ಈ ಪಕ್ಷದ ಸದಸ್ಯರು ಕಾರ್ಮಿಕ ವರ್ಗ ಹಾಗೂ ರೈತಾಪಿಗಳಿಗಾಗಿ ಮತ್ತು ರಾಷ್ಟ್ರೀಯ ವಿಮೋಚನೆಗಾಗಿ ಮಾಡಿದ ತ್ಯಾಗ-ಬಲಿದಾನಗಳಿಗೆ ಸರಿಗಟ್ಟುವಂತದ್ದು ದೇಶದ ಬೇರಾವ ರಾಜಕೀಯ ಶಕ್ತಿಯಲ್ಲೂ ಕಾಣಸಿಗದು.

ನಂತರ, ನಮ್ಮಂತಹ ವಸಾಹತು ದೇಶದಲ್ಲಿ ಕಾರ್ಮಿಕ ವರ್ಗ ಬೇರೆಲ್ಲಾ ಶಕ್ತಿಗಳಿಗಿಂತಲೂ ಹೆಚ್ಚು ಸಮರಧೀರ ಶಕ್ತಿಯಾಗಿದ್ದರೂ ಸಂಖ್ಯೆಯಲ್ಲಿ ಬಹಳ ಶಕ್ತಿಶಾಲಿಯಾಗಿಲ್ಲವಾದ್ದರಿಂದ ರೈತಾಪಿ ವರ್ಗಗಳ ಬೆಂಬಲವಿಲ್ಲದೆ ಸ್ವಾತಂತ್ರ್ಯ ಸಾಧನೆಯ ಗುರಿ ಸಾಧಿಸುವುದಾಗಲೀ, ಸಮಾಜವಾದಕ್ಕಾಗಿ ಹೋರಾಟ ಬೆಳೆಯುವುದಾಗಲೀ ಸಾಧ್ಯವಿಲ್ಲ ಎಂದು ಪಕ್ಷ ಅರಿತುಕೊಂಡಿತು. ಆಗ ಪಕ್ಷ ಕಾಂಗ್ರೆಸ್ ಸಮಾಜವಾದಿ ಪಕ್ಷದ ತೀವ್ರಗಾಮಿಗಳು ಮತ್ತು ಎಡ ಕಾಂಗ್ರೆಸ್ಸಿಗರೊಡಗೂಡಿ ರೈತರ ಅಖಿಲ ಭಾರತ ಸಾಮೂಹಿಕ ಸಂಘಟನೆಯೊಂದನ್ನು ರಚಿಸುವ ಒಂದು ದೊಡ್ಡ ಹೆಜ್ಜೆ ಇಟ್ಟಿತು; 1935ರಲ್ಲಿ ಕೆಲಸ ಆರಂಭಿಸಿತು. 1936ರಲ್ಲಿ ವಿಧ್ಯುಕ್ತವಾಗಿ ಅಖಿಲ ಭಾರತ ಕಿಸಾನ್ ಸಭಾವನ್ನು ಸಂಘಟಿಸಿತು. ವಿದ್ಯಾರ್ಥಿಗಳತ್ತವೂ ಗಮನ ನೀಡಲಾಯಿತು. ಎ.ಐ.ಎಸ್.ಎಫ್. ಅಸ್ತಿತ್ವಕ್ಕೆ ಬಂತು - ಸಹಜವಾಗಿಯೇ ಹೊಸ ವಿಚಾರಗಳೊಂದಿಗೆ ಇದು ಅಸ್ತಿತ್ವಕ್ಕೆ ಬಂತು. ಪ್ರಗತಿಪರ ಲೇಖಕರ ಸಂಘ ಮಹಿಳಾ ಸಂಘಟನೆ ಇತ್ಯಾದಿ ಇತರ ಹಲವಾರು ಸಂಘಟನೆಗಳು ಅಸ್ತಿತ್ವಕ್ಕೆ ಬಂದವು.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಭಾರತ ಬಂಡವಾಳಶಾಹಿ ದೃಷ್ಟಿಯಿಂದ ಮೊದಲ ಮಹಾಯುದ್ಧದ ಮೊದಲೇ ಬೇರೆ ಯಾವುದೇ ಇತರ ವಸಾಹತುಗಳಿಗಿಂತ ಹೆಚ್ಚು ಅಭಿವೃದ್ಧಿಯಾಗಿತ್ತು. ಇದಕ್ಕೆ ಪರಿಸ್ಥಿತಿಗಳ ಒತ್ತಡ ಕಾರಣ. ಬ್ರಿಟಿಷ್ ಸಾಮ್ರಾಜ್ಯಶಾಹಿ ಈ ದೇಶದಲ್ಲಿ ಕೈಗಾರಿಕಾ ಉತ್ಪಾದನೆಯ ಬೆಳವಣಿಗೆಯನ್ನು ಅವಲಂಬಿಸಬೇಕಾಗಿತ್ತು. ಮೊದಲೇ ಬಟ್ಟೆ ಉದ್ದಿಮೆ ಅಸ್ತಿತ್ವಕ್ಕೆ ಬಂದಿತ್ತು. ಇದರಿಂದಾಗಿ ತಕ್ಕ ಮಟ್ಟಿಗೆ ಕಾರ್ಮಿಕ ವರ್ಗ ಬೆಳೆದಿತ್ತು. ಬಾಲಗಂಗಾಧರ ತಿಲಕರನ್ನು ಬಂಧಿಸಿದಾಗ ಮುಷ್ಕರ ಮಾಡಿ ಈ ವರ್ಗ ತಾನು ವಹಿಸಬೇಕೆಂದಿರುವ ಪಾತ್ರದ ಒಂದು ಸಂಕೇತವನ್ನು ನೀಡಿತ್ತು. ಈ ಘಟನೆಯ ಬಗ್ಗೆ ಕೇಳಿ ಲೆನಿನ್ ರಂತಹವರೂ ಭಾರತದಲ್ಲಿ ಕಾರ್ಮಿಕ ವರ್ಗ ಅಸ್ತಿತ್ವಕ್ಕೆ ಬಂದಿದೆ, ನಾಯಕತ್ವ ನೀಡುವ ಸಾಮರ್ಥ್ಯ ಅದಕ್ಕಿದೆ ಎಂದರು. 1921-22ರ ವೇಳೆಗಾಗಲೇ ಸಂಘಟಿತ ಕಾರ್ಮಿಕ ಆಂದೋಲನ .ಅಖಿಲ-ಭಾರತ ಮಟ್ಟದಲ್ಲಿ ಅಸ್ತಿತ್ವಕ್ಕೆ ಬಂದಿತ್ತು. ಅದರಲ್ಲೂ ಕಮ್ಯುನಿಸ್ಟರು ಮಹತ್ವದ ಪಾತ್ರ ವಹಿಸಲಾರಂಭಿಸಿದರು.

ಕಮ್ಯುನಿಸ್ಟರಲ್ಲದೆ ಬೇರೆಯವರಲ್ಲೂ ಸಮಾಜವಾದಿ ಪ್ರವೃತ್ತಿಗಳು ಬೆಳೆದು ಬರಲಾರಂಭಿಸಿದವು. ವಿಶೇಷವಾಗಿ 1930-32ರ ನಾಗರಿಕ ಅಸಹಕಾರ ಆಂದೋಲನವನ್ನು ಹಿಂದೆಗೆದುಕೊಂಡ ಮೇಲೆ ಕಾಂಗ್ರೆಸ್ ಸಮಾಜವಾದಿ ಪಕ್ಷ ರಚನೆಗೊಂಡಿತು. 1930ರ ದಶಕದ ಅಂತ್ಯದ ವೇಳೆಗೆ ಅದರ ಬಹುಪಾಲು ಮಂದಿ ಆಗ ಕಾನೂನುಬಾಹಿರವಾಗಿದ್ದ ಕಮ್ಯುನಿಸ್ಟ್ ಪಕ್ಷವನ್ನು ಸೇರಿದರು. ಇದರಿಂದ ಪಕ್ಷ ವೈಜ್ಞಾನಿಕ ಸಮಾಜವಾದವನ್ನು ಪ್ರತಿನಿಧಿಸುವ ಪ್ರಧಾನ ಪಕ್ಷವಾಯಿತು.

ಹಿನ್ನೆಲೆ -ಲೆನಿನ್ ರ ಪ್ರಭಾವ

ಮಾರ್ಕ್ಸ್ ಮತ್ತು ಎಂಗೆಲ್ಸ್ ನಂತರ ಲೆನಿನ್ ಸಾಮ್ರಾಜ್ಯಶಾಹಿಯ ಬಗ್ಗೆ ಮಾಡಿದ ವಿಶ್ಲೇಷಣೆ ಸಾಮ್ರಾಜ್ಯಶಾಹಿಯ ತೀವ್ರ ಶೋಷಣೆಗೆ ಗುರಿಯಾಗಿದ್ದ ವಸಾಹತು ದೇಶಗಳತ್ತ ಎಲ್ಲರ ಗಮನಸೆಳೆಯಿತು. ಅವರ ನೇತೃತ್ವದಲ್ಲಿ ರಶ್ಯಾದಲ್ಲಿ ಬೋಲ್ಶೆವಿಕ್ ಪಕ್ಷ ಬೂರ್ಜ್ವಾ ಪ್ರಜಾಪ್ರಭುತ್ವ ಕ್ರಾಂತಿಯನ್ನು ನವೆಂಬರ್ 1917ರಲ್ಲಿ ಒಂದು ಸಮಾಜವಾದಿ ಕ್ರಾಂತಿಯಾಗಿ ಪರಿವರ್ತಿಸುವಲ್ಲಿ ಯಶಸ್ವಿಯಾಯಿತು. ಲೆನಿನ್ ರ ಚಟುವಟಿಕೆಗಳು ರಶ್ಯಾಕ್ಕಷ್ಟೇ ಸೀಮಿತವಾಗಿರಲಿಲ್ಲ, ಕಾರ್ಮಿಕ ವರ್ಗದ ಮೂರನೇ ಅಂತರ್‍ರಾಷ್ಟ್ರೀಯ ಸಂಘಟನೆ ಅಥವಾ 'ಕಮ್ಯುನಿಸ್ಟ್ ಅಂತರ್‍ರಾಷ್ಟ್ರೀಯ'ವನ್ನು ರಚಿಸಿ ಅವರು ವಿಶ್ವ ಕ್ರಾಂತಿಯ ಹಾಗೂ ವಿಶ್ವಾದ್ಯಂತ ರಾಷ್ಟ್ರೀಯ ವಿಮೋಚನಾ ಹೋರಾಟಗಳಿಗೆ ದೃಢ ಬೆಂಬಲದ ಸ್ಪಷ್ಟ ದೃಷ್ಟಿಕೋಣವನ್ನು ಪ್ರತಿಪಾದಿಸಿದರು. ಇದು ಎಲ್ಲಾ ವಸಾಹತು ದೇಶಗಳ ಕೋಟ್ಯಾಂತರ ಶ್ರಮಜೀವಿಗಳ ವಿಮೋಚನಾ ಹೋರಾಟಗಳ ಮೇಲೆ ಅಕ್ಟೋಬರ್ ಕ್ರಾಂತಿ ದೊಡ್ಡ ಪ್ರಭಾವ ಬೀರಿತು.

ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷ ಮೂಡಿಬಂದದ್ದು ಈ ಹಿನ್ನೆಲೆಯಲ್ಲಿ, ಹಲವಾರು ಭಾರತೀಯ ಕ್ರಾಂತಿಕಾರಿಗಳನ್ನು ಅವರ ಕ್ರಾಂತಿಕಾರಿ ಚಟುವಟಿಕೆಗಳಿಗಾಗಿ ಗಡೀಪಾರು ಮಾಡಿದ್ದ ಸಮಯವದು. ಅವರು ಯುರೋಪಿನ ವಿವಿಧ ದೇಶಗಳಲ್ಲಿ ಮುಖ್ಯವಾಗಿ ಜರ್ಮನಿಯಲ್ಲಿ ಹಾಗೂ ಅಫಘಾನಿಸ್ತಾನದಲ್ಲಿ ಅಲ್ಲಲ್ಲಿ ಚದುರಿದ್ದರು. ಅವರೆಲ್ಲಾ ಸೋವಿಯೆತ್ ಒಕ್ಕೂಟ ತಮ್ಮ ನೆಚ್ಚಿನ ಗೆಳೆಯ ಎಂದು ಅತ್ತ ಕಣ್ಣು ಹೊರಳಿಸಲಾರಂಭಿಸಿದರು. ಇದೇ ಅವಧಿಯಲ್ಲಿ ಖಿಲಾಫತ್ ಆಂದೋಲನದ ಪ್ರಭಾವದಿಂದ ಹಲವಾರು ಮೊಹಾಜಿರ್‌ಗಳು ದೇಶ ಬಿಟ್ಟು ತುರ್ಕಿಸ್ತಾನಕ್ಕೆ ಹೊರಟವರು ಹೋದರು. ತುರ್ಕಿಸ್ತಾನಕ್ಕೆ ಹೋಗಲಾಗದೆ ತಾಷ್ಕೆಂಟ್ ತಲುಪಿದರು. ಅಲ್ಲಿ ಕಮ್ಯುನಿಸ್ಟರ ಸ... ಬಂದರು. ನಂತರ ಮಾಸ್ಕೋದಲ್ಲಿದ್ದ "ಪೂರ್ವ... ಕರ ವಿಶ್ವವಿದ್ಯಾಲಯ"ದಲ್ಲಿ ಮಾರ್ಕ್ಸ್‌ವಾದ-ಲೆ... ವನ್ನು ಅಧ್ಯಯನ ಮಾಡಿ ಭಾರತೀಯ ಕ್ರಾಂತಿ ಸಾ... ಗುರಿ ಹೊತ್ತು ಸ್ವದೇಶಕ್ಕೆ ಮರಳಿದರು.

ಕಮ್ಯುನಿಸ್ಟ್ ಪಕ್ಷದ ಸ್ಥಾಪ...

ಅಮೇರಿಕದಲ್ಲಿ ಘದ್ದರ್ ಪಾರ್ಟಿ ಸ್ಥಾಪಿ... ಭಾರತೀಯ ಕ್ರಾಂತಿಕಾರಿಗಳು ಜೈಲುಗಳಲ್ಲಿ ... ಕಮ್ಯುನಿಸ್ಟರ ಸಂಪರ್ಕಕ್ಕೆ ಬಂದು ಈ ಹೊಸ... ಳಿಂದ ಪ್ರಭಾವಿತರಾದರು. ಹಲವು ಅಡ... ಎದುರಿಸಿ ಅವರು ಮಾಸ್ಕೋ ತಲುಪಿ ಕಾಮ್ರೇ...ರೊಡನೆ ಸಂಪರ್ಕ ಪಡೆದರು.

ಈ ಭಾರತೀಯ ಕ್ರಾಂತಿಕಾರಿಗಳಲ್ಲೇ ... ತಾಷ್ಕೆಂಟ್‌ನಲ್ಲಿ ಅಕ್ಟೋಬರ್ 17, 192... ಭಾರತ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸಿದರು. ... ಹತ್ತು ಮಂದಿಯಿದ್ದರು ಮಹಮ್ಮದ್ ಶಫೀ... ದರ್ಶಿಯಾದರು. ಎಂ.ಎನ್. ರಾಯ್ ಇದ... ಪ್ರಮುಖ ವ್ಯಕ್ತಿ. ರಾಯ್ ಅಲ್ಲಿಗೆ ಹೋಗುವ... ಮಹಮ್ಮದ್ ಶಫೀಕ್ ತಾಷ್ಕೆಂಟ್ ನಿಂದ ... (ರೈತ) ಎಂಬ ಉರ್ದು ಪತ್ರಿಕೆ ಹೊರ... ಅದನ್ನು ಅಲ್ಲಿಂದ ಭಾರತಕ್ಕೆ ಕಳಿಸಲಾಗುತ್ತಿತ್ತು... ವಹಿಸಿದ ಮಹತ್ವಪೂರ್ಣ ಚಾರಿತ್ರಿಕ ಪಾತ್ರ... ಕ್ಷಿಸುವಂತಿಲ್ಲ. ಈ ಹತ್ತು ಮಂದಿಯ ಸಮಿ... 1922 ಹಾಗೂ 1923ರ ಕಾಂಗ್ರೆಸ್ ಅಧಿ... ಕಮ್ಯುನಿಸ್ಟ್ ಪಕ್ಷದ ಹೆಸರಲ್ಲಿ ತನ್ನ ಪ್ರ... ಕಳುಹಿಸಿತು. ಇವುಗಳಲ್ಲಿ ಸಂಪೂರ್ಣ ... ಘೋಷಣೆ ಎತ್ತಿ ಈ ಗುರಿಸಾಧನೆಗೆ ರೈತರ... ಕರನ್ನು ಅಣಿನೆರೆಸುವ ಅಗತ್ಯವನ್ನು ಒತ್ತಿ ಹ... ಇಂತಹ ಒಂದು ಪ್ರಣಾಳಿಕೆಯ ಪ್ರಭಾ... 1921ರಲ್ಲಿ ಹಸ್ರತ್ ಮೊಹಾನಿ ಕಾಂಗ್ರೆಸ್ ... ದಲ್ಲಿ 'ಸಂಪೂರ್ಣ ಸ್ವಾತಂತ್ರ್ಯ'ದ ನಿರ್ಣಯ... ಸಿದರು. ಅದಕ್ಕೆ ಸಾಕಷ್ಟು ಮತಗಳು ದೊರೆ... ಕಾಂಗ್ರೆಸ್ ಕೊನೆಗೂ ಸಂಪೂರ್ಣ ಸ್ವಾತಂತ್ರ್ಯ... ಅಂಗೀಕರಿಸಿದ್ದು 1930ರಲ್ಲಿ)


ನಂತರ ದೇಶಗಳೊಳಗೆ ಕೆಲಸ ಮಾಡ... ವಾರು ಗುಂಪುಗಳು ಸೇರಿ 1925 ರಲ್ಲಿ ... ಕಮ್ಯುನಿಸ್ಟ್ ಪಕ್ಷದ ರಚನೆಯಾಗಿದೆ ಎಂದು... ನಂತರ ನಡೆದ ಮೀರತ್ ಪಿತೂರಿ ... ಕಮ್ಯುನಿಸಂ ವಿಚಾರಗಳನ್ನು ಜನಪ್ರಿಯಗೊ...

ಈ ಸಂದರ್ಭದಲ್ಲಿ ಗ್ರೇಟ್ ಬ್ರಿಟನ್ ಕ... ನಮ್ಮ ಪಕ್ಷಕ್ಕೆ ನೀಡಿದ ಅಮೂಲ್ಯ ನೆರವನ್ನು... ಳ್ಳುವುದು ಅಗತ್ಯ. ಅವರು ಇಲ್ಲಿ ಕಾರ್ಮಿಕ... ನವನ್ನು ಸಂಘಟಿಸಲು ತಮ್ಮ ಕಾರ್ಯಕರ್ತ... ರಷ್ಟೇ ಅಲ್ಲ, (ಮೀರತ್ ಪಿತೂರಿ ಮೊ... ಆಪಾದನೆಗೊಳಗಾಗಿ ಶಿಕ್ಷೆ ಪಡೆದವರಲ್ಲಿ... ಗ್ರೇಟ್ ಬ್ರಿಟನ್ ಕಮ್ಯುನಿಸ್ಟ್ ಪಕ್ಷದ ಸದಸ್...

> **ನಾವು ನಮ್ಮನ್ನು ಮಾರ್ಕ್ಸ್‌ವಾದ ಲೆನಿನ್‌ವಾದದ ಸಿದ್ಧಾಂತದಿಂದ ಸಜ್ಜುಗೊಳಿಸಿದವರನ್ನು ಮೂರ್ತ ಸನ್ನಿವೇಶಕ್ಕೆ ಅದನ್ನು ಮೂರ್ತ ರೀತಿಯಲ್ಲಿ ಅನ್ವಯಿಸುವಂತೆ ಮಾಡಿದವರನ್ನೆಲ್ಲಾ ನೆನಪಿಸಿಕೊಳ್ಳಬೇಕು. ನಮ್ಮನ್ನು ಸೈದ್ಧಾಂತಿಕವಾಗಿ ಸಜ್ಜುಗೊಳಿಸಿಕೊಂಡು, ಯಾವುದೇ ಕುರುಡು ನಂಬಿಕೆಯ ನಿಲುವು ತಳೆಯದಿದ್ದರೆ ಮಾತ್ರ ಕೋಟ್ಯಾಂತರ ಜನ ಈ ಹೋರಾಟವನ್ನು ಸೇರಿಸಿಕೊಳ್ಳುವಂತೆ ಅವರ ಮನದಲ್ಲಿ ವಿಶ್ವಾಸ ಮೂಡಿಸಬಹುದು. ಕೇವಲ ಮಾರ್ಕ್ಸ್‌ವಾದಿ-ಲೆನಿನ್‌ವಾದೀ ದೃಷ್ಟಿಕೋಣ ಹೊಂದಿದರಷ್ಟೇ ಸಾಲದು, ಅದನ್ನು ಕಾರ್ಯರೂಪಕ್ಕೂ ತರಬೇಕು, ಬೇರೆಯವರಿಗೆ ಉದಾಹರಣೆ ಹಾಕಿಕೊಡಬೇಕು, ಕಮ್ಯುನಿಸ್ಟರು ಬೇರೆಯ ರೀತಿಯ ಜನ, ಅವರ ಪ್ರಪ್ರಥಮ ಕೆಲಸ ಕಾರ್ಮಿಕ ವರ್ಗ, ಇತರ ಶ್ರಮಜೀವಿ ವಿಭಾಗಗಳು ಹಾಗೂ ದೇಶದ ಸೇವೆ ಮಾಡುವುದು ಎಂಬುದನ್ನು ತೋರಿಸಿಕೊಡಬೇಕು.**

ಬ್ರಿಟನ್ನಿಗೆ ಓದಲು ಹೋದ ಹಲವಾರು ಭಾರತೀಯ ವಿದ್ಯಾರ್ಥಿಗಳನ್ನು ಕಮ್ಯುನಿಸ್ಟ್ ಆಂದೋಲನದತ್ತ ಸೆಳೆಯುವಲ್ಲೂ ಬಹಳ ಕೆಲಸ ಮಾಡಿದರು.

ತಾಷ್ಕೆಂಟ್ ಸಭೆಯಾಗಲೀ, ಕಾನ್ಪುರ ಸಮ್ಮೇಳನವಾಗಲೀ ಯಾವುದೇ ಕಾರ್ಯಕ್ರಮ ಸಂಬಂಧವಾದ ದಸ್ತಾವೇಜು ಅಂಗೀಕರಿಸಿದ ಬಗ್ಗೆ ದಾಖಲೆಗಳಿಲ್ಲ. ಆದರೂ ಅತ್ಯಂತ ಕಷ್ಟಕರ ಸಮಯದಲ್ಲಿ ನಡೆಸಿದ ಈ ಪ್ರಯತ್ನಗಳ ಮಹತ್ವ ಕಮ್ಮಿಯೇನಲ್ಲ. ಕಮ್ಯುನಿಸ್ಟರ ಬೇಟೆ ನಡೆಯುತ್ತಿದ್ದ ಸಮಯದಲ್ಲಿ ಕೆಲವು ವಿಭಾಗಗಳ ನಡುವೆ ತಮ್ಮ ವಿಚಾರಗಳನ್ನು ಪ್ರಸಾರ ಮಾಡಲು ಅವರಿಗೆ ಸಾಧ್ಯವಾಯಿತು. ತಾಷ್ಕೆಂಟಿನಲ್ಲಿ ಪಕ್ಷದ ಸ್ಥಾಪನೆಯ ಘಟನೆ ಒಂದು



ಮಹತ್ವದ ಹೆಜ್ಜೆ. ಅದನ್ನು ಇತಿಹಾಸದಿಂದ ಅಳಿಸಿ ಹಾಕಲು ಸಾಧ್ಯವಿಲ್ಲ. ತಾಷ್ಕೆಂಟ್ ನಂತರ 'ವ್ಯಾನ್ ಗಾರ್ಡ್' ಎಂಬ ಪತ್ರಿಕೆಯ ಮೂಲಕ ಭಾರತೀಯ ಜನತೆಗೆ ಹಲವಾರು ಮನವಿಗಳನ್ನು ಪ್ರಕಟಿಸಲಾಯಿತು. ಇವೆಲ್ಲಾ 'ರಾಷ್ಟ್ರೀಯ ಪತ್ರಾಗಾರ'ದಲ್ಲಿ ಸಿಗುತ್ತವೆ.

ವಿಶ್ವ ಆಂದೋಲನದ ಮಹತ್ವಪೂರ್ಣ ತುಕಡಿ

ಕಮ್ಯುನಿಸ್ಟ್ ಪಕ್ಷ ವೈಜ್ಞಾನಿಕ ಸಮಾಜವಾದದ ವಿಚಾರಗಳನ್ನು ಜನಪ್ರಿಯಗೊಳಿಸಿ ಸಿದ್ಧಾಂತವನ್ನು ಆಚರಣೆಯೊಂದಿಗೆ ಬೆಸೆಯಲು ಪ್ರಯತ್ನಿಸಿದೆ. ಕ್ರಾಂತಿಗೆ ತಮ್ಮನ್ನು ಸಂಪೂರ್ಣ ಸಮರ್ಪಿಸಿಕೊಂಡ ಸಾವಿರಾರು ಕಾರ್ಯಕರ್ತರನ್ನು ಅದು ಸೃಷ್ಟಿಸಿದೆ. ಈ ಕಾರ್ಯಕರ್ತರು ಕೊನೆಯುಸಿರಿನವರೆಗೂ ತಮ್ಮ ಪ್ರತಿಜ್ಞೆಯನ್ನು ಉಳಿಸಿಕೊಂಡರು. ಪಕ್ಷ ಕಾರ್ಮಿಕ ವರ್ಗದ ರೈತಾಪಿ, ವಿದ್ಯಾರ್ಥಿಗಳ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದು ಅವರ ಬೇಡಿಕೆಗಳ ಈಡೇರಿಕೆಗೆ ಅಪಾರ ಶ್ರಮಪಟ್ಟಿದೆ. ತೆಲಂಗಾಣಾ, ತೆಭಾಗ, ಪುನ್ನಪ್ಪ-ವಯಲಾರ್, ಅಸ್ಸಾಂ ಮತ್ತು ಸುರ್ಮಾ ಕಣಿವೆ ಹೋರಾಟಗಳು, ಪಂಜಾಬ್, ತ್ರಿಪುರಾ ಮತ್ತು ಮಹಾರಾಷ್ಟ್ರದ ಆದಿವಾಸಿ ಬಂಡಾಯ ಇತ್ಯಾದಿ ಹಲವಾರು ಹೋರಾಟಗಳು ದಂತಕಥೆಗಳೇ ಆಗಿಬಿಟ್ಟಿದೆ. ಇವುಗಳಲ್ಲಿ ಜನ ತಮ್ಮ ದಮನಕಾರರ ವಿರುದ್ಧ ಕೈಯಲ್ಲಿ ಶಸ್ತ್ರ ಹಿಡಿದು ಹೋರಾಡಿದರು. ಕರ್ಷಕ ಕ್ರಾಂತಿ ರಾಷ್ಟ್ರೀಯ ಸ್ವಾತಂತ್ರ್ಯದ ಮುಖ್ಯ ಹೂರಣ ಎಂಬ ಪರಿಕಲ್ಪನೆಯನ್ನು ಮುಂದಿಟ್ಟು ರಾಷ್ಟ್ರೀಯ ವಿಮೋಚನೆ ಸಾಧಿಸುವಲ್ಲಿ ಮತ್ತು ನಂತರ ಸಮಾಜವಾದದ ಗುರಿಯತ್ತ ಸಾಗುವಲ್ಲಿ ರೈತಾಪಿ ವರ್ಗ ಕಾರ್ಮಿಕ ವರ್ಗದ ಮಿತ್ರ ಎಂಬ ಅಂಶವನ್ನು ಎತ್ತಿ ತೋರುವುದು ಪಕ್ಷಕ್ಕೆ ಸಾಧ್ಯವಾಗಿದೆ. ಈ ತ್ಯಾಗ ಬಲಿದಾನಗಳು ಹಾಗೂ ಸಮರ್ಪಣೆಯಿಂದಲೇ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಈಗ ವಿಶ್ವ ಕಮ್ಯುನಿಸ್ಟ್ ಆಂದೋಲನದ ಒಂದು ಮಹತ್ವಪೂರ್ಣ ತುಕಡಿಯಾಗಿರುವುದು.

ಅಂದರೆ ಪಕ್ಷ ಏಳು-ಬೀಳುಗಳನ್ನು ಕಾಣಲಿಲ್ಲವೆಂದಲ್ಲ, ಮಾರ್ಗಚ್ಯುತಿ ಅದರ ವಿರುದ್ಧ ಹೋರಾಟಗಳು ಇರಲಿಲ್ಲವೆಂದಲ್ಲ. ವಾಸ್ತವವಾಗಿ ಪುಟ್ಟ ಬಂಡವಾಳಶಾಹಿಯೇ ಹೆಚ್ಚಿರುವ ರೈತಾಪಿಗಳೇ ಜನ ಸಂಖ್ಯೆಯ ಬಹುಭಾಗವಾಗಿರುವ ನಮ್ಮಂತಹ ಸಮಾಜದಲ್ಲಿ ಇಂತಹ ಮಾರ್ಗಚ್ಯುತಿಗಳು ಬೆಳೆದು ಬರುವುದು ಸಹಜ. ಅವುಗಳ ವಿರುದ್ಧ ನಿರಂತರ ಹೋರಾಟ ಅಗತ್ಯ. ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನದಂತೆ ನಾವೂ ಕೂಡಾ ಬಲಯಿತು. ಇವು ದೇಶದ ಕಮ್ಯುನಿಸ್ಟ್ ಆಂದೋಲನಕ್ಕೆ ಸಾಕಷ್ಟು ನಷ್ಟ ಉಂಟುಮಾಡಿವೆ. ಸ್ವಾತಂತ್ರ್ಯದ ಮೊದಲು ನಾವು ಪರಿಷ್ಕರಣವಾದದ ಪ್ರಭಾವಕ್ಕೆ ಬಿದ್ದೆವು. ಸ್ವಾತಂತ್ರ್ಯ ದೊರೆತ ಕೂಡಲೇ ಕಾರ್ಮಿಕ ವರ್ಗದಲ್ಲಿ ಸಾಮೂಹಿಕ ಉತ್ಕ್ರಾಂತಿ ಕಾಣಬರುತ್ತಿದ್ದಾಗ ಹಾಗೂ ಬಂಡವಾಳಶಾಹೀ ವರ್ಗ ಸಾಮ್ರಾಜ್ಯಶಾಹಿಯೊಡನೆ ರಾಜಿ ಮಾಡಿಕೊಳ್ಳುತ್ತಿದ್ದ ಸಂದರ್ಭದಲ್ಲಿ ನಾವು ಸಂಕುಚಿತ ಪಂಥವಾದಕ್ಕೆ ಬಲಿಬಿದ್ದೆವು. 1950ರ ದಶಕದ ಮಧ್ಯಭಾಗದಲ್ಲಿ ಪರಿಷ್ಕರಣವಾದದ ವಿರುದ್ಧ ಹಾಗೂ ಮಾರ್ಕ್ಸ್‌ವಾದ ರಕ್ಷಣೆಗೆ ಪಕ್ಷದೊಳಗೆ ದೊಡ್ಡ ಹೋರಾಟ ಮುಂದುವರೆಯಿತು. ಅಂತಿಮವಾಗಿ ದೇಶದಲ್ಲಿ ಕಮ್ಯುನಿಸ್ಟ್ ಆಂದೋಲನವನ್ನು ಉಳಿಸಲು ಸಿಪಿಐ(ಎಂ) ರಚನೆಗೊಳ್ಳುವಂತಾಯಿತು.

ಕ್ರಾಂತಿಕಾರಿ ವಿಚಾರಣೆಗಳಿಗೆ ಬದ್ಧವಾಗುಳಿದಿದೆ.

ಅವು ನಮಗೆ ಬಹಳ ಕಷ್ಟದ ದಿನಗಳು. ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷ ಹಾಗೂ ಚೀಣಾ ಕಮ್ಯುನಿಸ್ಟ್ ಪಕ್ಷ ಎರಡರಿಂದಲೂ ನಾವು ಆಕ್ರಮಣಕ್ಕೊಳಗಾದೆವು. ಆದರೆ ನಮ್ಮ ದೃಢ ನಂಬಿಕೆಗಳು ಹಾಗೂ ಅನುಭವಗಳಿಂದ ಅವನ್ನೆಲ್ಲಾ ಎದುರಿಸಿ ನಿಂತು ದೇಶದಲ್ಲಿ ಕ್ರಾಂತಿಕಾರಿ ಶಕ್ತಿಗಳನ್ನು ಕ್ರೋಢೀಕರಿಸುವುದು ಸಾಧ್ಯವಾಯಿತು. ನಿಜ, ಬಲ ಮತ್ತು ಎಡ ಪಂಥದಿಂದ ಉಂಟಾದ ಒಡಕುಗಳು ಕಮ್ಯುನಿಸ್ಟ್ ಆಂದೋಲನಕ್ಕೆ ಹಾನಿಯುಂಟು ಮಾಡಿದ್ದರೂ ಆಂದೋಲನದ ಕ್ರಾಂತಿಕಾರಿ ನೆಲೆಯನ್ನು ರಕ್ಷಿಸಿಕೊಳ್ಳುವುದು ಸಾಧ್ಯವಾಯಿತು. ಅದರ ಆಧಾರದ ಮೇಲೆಯೇ ಸಿಪಿಐ(ಎಂ) ಒಂದು ಪ್ರಧಾನ ಶಕ್ತಿಯಾಗಿ ಮೂಡಿ ಬರಲು ಹಾಗೂ ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನ ಅತ್ಯಂತ ದೊಡ್ಡ ತುಕಡಿಗಳಲ್ಲಿ ಒಂದು ತುಕಡಿಯಾಗಿ ಮೂಡಿಬರಲು ಸಾಧ್ಯವಾಯಿತು. ತಪ್ಪುಗಳಿಂದ ಪಾಠಕಲಿತು ಸರಕಾರದ ದಮನಕ್ರಮಗಳನ್ನು ಎದುರಿಸಿಯೂ ಕ್ರಾಂತಿಕಾರಿ ವಿಚಾರಗಳಿಗೆ ಬದ್ಧವಾಗುಳಿಯಿತು.

ಇಂದು ವಿಶ್ವದಲ್ಲಿ ದೊಡ್ಡ ಬದಲಾವಣೆಗಳಾಗಿದ್ದರೂ ಸಿಪಿಐ(ಎಂ) ಬಂಡವಾಳಶಾಹಿಯ ಧಾಳಿಗಳನ್ನೆಲ್ಲಾ ಎದುರಿಸಿದೆಯಷ್ಟೇ ಅಲ್ಲ, ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳುತ್ತಿದೆ ಎಂಬುದು ನಮಗೆ ಹೆಮ್ಮೆಯ ಸಂಗತಿ. ದೇಶದ ಈಗಿನ ಕ್ಲಿಷ್ಟ ಪರಿಸ್ಥಿತಿಯಲ್ಲಿ ಪಕ್ಷ ಒಂದು ಮಹತ್ವದ ಪಾತ್ರ ವಹಿಸುತ್ತಿದೆ. ಹಲವಾರು ಕಾರಣಗಳಿಂದಾಗಿ ದೇಶದ ಮುಂದೆ ನಿಜವಾದ ಪರ್ಯಾಯವನ್ನು ಮಂಡಿಸುವಲ್ಲಿ ನಾವು ಯಶಸ್ವಿಯಾಗದಿದ್ದರೂ ಖಂಡಿತಾ ನಾವು ಘಟನೆಗಳ ಮೇಲೆ ಪ್ರಭಾವ ಬೀರಬಲ್ಲ ಸ್ಥಿತಿಯಲ್ಲಿದ್ದೇವೆ. ಈಗಿನ ಮೂರ್ತ ಪರಿಸ್ಥಿತಿಯನ್ನು ಎದುರಿಸಲು ಕೂಡಾ ನಾವು ಕಾಂಗ್ರೆಸ್ ಹಾಗೂ ಬಿಜೆಪಿಯನ್ನು ಸೋಲಿಸಬಲ್ಲ, ದೇಶಪ್ರೇಮಿ ಭಾರತೀಯ ಜನತೆಯ ಜೀವಾಳದಂತಿರುವ ಮತ್ತು ರಾಷ್ಟ್ರೀಯ ಐಕ್ಯತೆಯನ್ನು ಉಳಿಸಬಲ್ಲ ಶಕ್ತಿಗಳನ್ನು ಒಂದುಗೂಡಿಸಲು ಪ್ರಯತ್ನಿಸುತ್ತಿದ್ದೇವೆ.

30 ವರ್ಷಗಳು ಚಾರಿತ್ರಿಕವಾಗಿ ನೋಡಿದಾಗ ಒಂದು ದೊಡ್ಡ ಅವಧಿಯೇನಲ್ಲ, ಆದರೂ ಈ ಅವಧಿಯಲ್ಲಿ ಸಿಪಿಐ(ಎಂ) ಗಮನಾರ್ಹ ಪ್ರಗತಿ ಸಾಧಿಸಿದೆ. ರಾಷ್ಟ್ರೀಯ ವಿಮೋಚನಾ ಹೋರಾಟದ ನೇತೃತ್ವ ವಹಿಸಲು ನಮಗಾಗದಿದ್ದರೂ ಈಗ ಬೂರ್ಜ್ವಾ ಪ್ರಜಾಪ್ರಭುತ್ವ ಕ್ರಾಂತಿಯನ್ನು ಪೂರ್ಣಗೊಳಿಸುವ ಹೋರಾಟದ ಹಾಗೂ ವರ್ಗ ಬಲಾಬಲವನ್ನು ಬದಲಿಸಿ ಕಾರ್ಮಿಕ ವರ್ಗ ಮತ್ತು ರೈತಾಪಿ ವರ್ಗ ಹಾಗೂ ಇತರ ಪುಟ್ಟ ಬಂಡವಾಳಶಾಹಿ ಜನಸಮೂಹಗಳು ತಂತಮ್ಮ ಪಾತ್ರವಹಿಸುವ ಒಂದು ಜನತಾ ಪ್ರಜಾಪ್ರಭುತ್ವ ಸ್ಥಾಪಿಸುವಂತೆ ವರ್ಗ ಬಲಾಬಲವನ್ನು ಬದಲಿಸುವ ಹೋರಾಟದ ಮುಂಚೂಣಿಯಲ್ಲಿದ್ದೇವೆ.

ಈ ಸಂದರ್ಭದಲ್ಲಿ ಕಾರ್ಮಿಕ ವರ್ಗ, ರೈತಾಪಿ ವರ್ಗ ಹಾಗೂ ಕಮ್ಯುನಿಸ್ಟ್ ಗುರಿ ಸಾಧನೆಗಾಗಿ ತಮ್ಮ ಪ್ರಾಣ ಬಲಿದಾನ ನೀಡಿದ ಅಸಂಖ್ಯಾತ ಹುತಾತ್ಮರನ್ನು ನೆನಪಿಸಿಕೊಳ್ಳಬೇಕು. ಇಡೀ ತಮ್ಮ ಜೀವನವನ್ನು ಅವರು ಆಂದೋಲನಕ್ಕಾಗಿ ಮುಡಿಪಿಟ್ಟರು. ಜೀವನ ಅಮೂಲ್ಯ ಅದರ ಯಾವ ಕ್ಷಣವನ್ನು ವ್ಯರ್ಥಗೊಳಿಸಬಾರದು ಎಂದು ಅವರು ತೋರಿಸಿದರು.

ಭಾರತ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯ ಈ ವಾರ್ಷಿಕೋತ್ಸವದಂದು ನಾವು ನಮ್ಮನ್ನು ಮಾರ್ಕ್ಸ್‌ವಾದ ಲೆನಿನ್‌ವಾದದ ಸಿದ್ಧಾಂತದಿಂದ ಸಜ್ಜುಗೊಳಿಸಿದವರನ್ನು ಮೂರ್ತ ಸನ್ನಿವೇಶಕ್ಕೆ ಅದನ್ನು ಮೂರ್ತ ರೀತಿಯಲ್ಲಿ ಅನ್ವಯಿಸುವಂತೆ ಮಾಡಿದವರನ್ನೆಲ್ಲಾ ನೆನಪಿಸಿಕೊಳ್ಳಬೇಕು. ಇದೊಂದು ಬೆಳೆಯುತ್ತಿರುವ ವಿಜ್ಞಾನವಾದ್ದರಿಂದ ಅದನ್ನು ಹಾಗೆಯೇ ಅರ್ಥಮಾಡಿಕೊಳ್ಳಬೇಕು. ನಮ್ಮನ್ನು ಸೈದ್ಧಾಂತಿಕವಾಗಿ ಸಜ್ಜುಗೊಳಿಸಿಕೊಂಡು, ಯಾವುದೇ ಕುರುಡು ನಂಬಿಕೆಯ ನಿಲುವು ತಳೆಯದಿದ್ದರೆ ಮಾತ್ರ ಕೋಟ್ಯಾಂತರ ಜನ ಈ ಹೋರಾಟವನ್ನು ಸೇರಿಸಿಕೊಳ್ಳುವಂತೆ ಅವರ ಮನದಲ್ಲಿ ವಿಶ್ವಾಸ ಮೂಡಿಸಬಹುದು. ಕೇವಲ ಮಾರ್ಕ್ಸ್‌ವಾದಿ-ಲೆನಿನ್‌ವಾದೀ ದೃಷ್ಟಿಕೋಣ ಹೊಂದಿದರಷ್ಟೇ ಸಾಲದು, ಅದನ್ನು ಕಾರ್ಯರೂಪಕ್ಕೂ ತರಬೇಕು, ಬೇರೆಯವರಿಗೆ ಉದಾಹರಣೆ ಹಾಕಿಕೊಡಬೇಕು, ಕಮ್ಯುನಿಸ್ಟರು ಬೇರೆಯ ರೀತಿಯ ಜನ, ಅವರ ಪ್ರಪ್ರಥಮ ಕೆಲಸ ಕಾರ್ಮಿಕ ವರ್ಗ, ಇತರ ಶ್ರಮಜೀವಿ ವಿಭಾಗಗಳು ಹಾಗೂ ದೇಶದ ಸೇವೆ ಮಾಡುವುದು ಎಂಬುದ...

ರೂಪಾಯಿಯ ಪಾತಾಳ ಗರಡಿ

ಕಳೆದ ಕೆಲವು ದಿನಗಳಿಂದ ಕುಸಿಯುತ್ತಿರುವ ರೂಪಾಯಿಯ ಬೆಲೆ ಕೇಂದ್ರ ಸರ್ಕಾರಕ್ಕೆ ಸಾಕಷ್ಟು ಪೇಚು ತಂದಿದೆ. ಪಾತಾಳಕ್ಕೆ ಇಳಿಯುತ್ತಿರುವ ರೂಪಾಯಿಯ ಬೆಲೆಯನ್ನು ಮೇಲಕ್ಕೆ ತರಲು ಭಾರತೀಯ ರಿಸರ್ವ್ ಬ್ಯಾಂಕ್ ಎಲ್ಲ ತರಹದ ಕಸರತ್ತುಗಳನ್ನು ಮಾಡುತ್ತಲೇ ಇದೆ. ಅಮೇರಿಕನ್ ಡಾಲರಿಗೆ 31.50 ರೂಪಾಯಿಗಳಷ್ಟಿದ್ದದು ಈಗ 35.80 ರೂಪಾಯಿಗಳವರೆಗೂ ಏರಿದೆ. ಅಮೇರಿಕನ್ ಡಾಲರ್‌ನ ಬೆಲೆ ಸ್ವಲ್ಪ ಏರಿದ ಕೂಡಲೇ ಭಾರತೀಯ ರಿಸರ್ವ್ ಬ್ಯಾಂಕ್ ಮಧ್ಯಪ್ರವೇಶಿಸಿ ರೂಪಾಯಿಯ ಬೆಲೆ ಸ್ಥಿರಗೊಳಿಸಲು ಪ್ರಯತ್ನಿಸಿತು.

ಈ ಬೆಲೆ ಏರಿಕೆ/ಇಳಿಕೆ ಆಗುವುದು ಹೀಗೆ: ಮಾರುಕಟ್ಟೆಯಲ್ಲಿ ಡಾಲರ್ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿದ್ದರೆ ಅದರ ಬೆಲೆ ಒಂದೇ ಸಮನಾಗಿರುತ್ತದೆ. ಅದೇ ಡಾಲರ್‌ನ ಅಭಾವ ಕಂಡು ಬಂದ ಕೂಡಲೇ ಬೆಲೆಯ ಏರಿಕೆ ಶುರುವಾಗುತ್ತದೆ. ಆಗ ಸಾಕಷ್ಟು ಡಾಲರ್‌ಗಳ ಶಿಲ್ಕು ಇರಿಸಿ ಕೊಂಡಿರುವ ಭಾರತೀಯ ರಿಸರ್ವ್ ಬ್ಯಾಂಕ್ ಮಾರುಕಟ್ಟೆ ಪ್ರವೇಶಿಸಿ ಡಾಲರುಗಳನ್ನು ಕಡಮೆ ಬೆಲೆಗೇ ಮಾರತೊಡಗುತ್ತದೆ. ಇದರಿಂದ ಡಾಲರಿನ ಬೆಲೆ ಇಳಿಯುತ್ತದೆ/ಒಂದೇ ಮಟ್ಟದಲ್ಲಿ ಇರುತ್ತದೆ. ಉದಾರೀಕರಣದ ನಂತರ ರೂಪಾಯಿಯ ಪೂರ್ಣ ಪರಿವರ್ತನೆ ಬಂದ ನಂತರ ಭಾರತೀಯ ರಿಸರ್ವ್ ಬ್ಯಾಂಕ್ ಇಂತಹ ಕಾರ್ಯಾಚರಣೆಯಿಂದಲೇ ರೂಪಾಯಿಯ ಬೆಲೆಯನ್ನು ಸರಿಸುಮಾರಾಗಿ ಒಂದೇ ರೀತಿಯ ಮಟ್ಟದಲ್ಲಿ ಕಾಯ್ದುಕೊಂಡು ಬಂದದ್ದು. ಇದು ಸಾಧ್ಯವಾದದ್ದು ಸಾಕಷ್ಟು ಡಾಲರುಗಳ ಶಿಲ್ಕು ಇದ್ದುದರಿಂದ.

ಆದರೆ ಮಾರುಕಟ್ಟೆಯಲ್ಲಿ ಬೆಲೆಗಳು ಇನ್ನೂ ಹಲವಾರು ಕಾರಣಗಳಿಂದ ನಿರ್ಧಾರಿತವಾಗುತ್ತವೆ. ಸಟ್ಟಾ ವ್ಯವಹಾರದಿಂದಲೂ ಈ ಬೆಲೆಗಳಲ್ಲಿ ಏರಿಳಿತವುಂಟಾಗಬಹುದು. ಹಾಗೆ ಈ ಸಾರಿ ಡಾಲರಿನ ಬೆಲೆ ಏರುತ್ತ ರೂಪಾಯಿಯ ಬೆಲೆ ಕುಸಿಯತೊಡಗಿದಾಗ ಭಾರತೀಯ ರಿಸರ್ವ ಬ್ಯಾಂಕಿನ ಮಧ್ಯಪ್ರವೇಶದಿಂದಲೂ ಈ ಕುಸಿತವನ್ನು ತಡೆಯಲು ಸಾಧ್ಯವಾಗಲಿಲ್ಲ. ಮಿತಿಮೀರಿ ಪ್ರಯತ್ನ ಮಾಡಬೇಕಾಯಿತು. ಭಾರತೀಯ ರಿಸರ್ವ್ ಬ್ಯಾಂಕ್ ಇಷ್ಟೆಲ್ಲಾ ಆದ ಮೇಲೂ ರೂಪಾಯಿಯ ಬೆಲೆ ಏರಿಸಲು ಸಾಧ್ಯವಾಗಲಿಲ್ಲ, ಮತ್ತೂ ಕುಸಿಯದಂತೆ ತಡೆದಿದೆ ಅಷ್ಟೇ.

ಈಗ ಭಾರತೀಯ ರಿಸರ್ವ್ ಬ್ಯಾಂಕ್ ಉದಾರೀಕರಣಕ್ಕೆ ವಿರುದ್ಧ ಎನ್ನಬಹುದಾದ ಹಲವು ಕ್ರಮಗಳನ್ನು ಘೋಷಿಸಿದೆ. ಅಂದರೆ ವಿದೇಶೀ ವ್ಯಾಪಾರದಲ್ಲಿ ತೆಗೆದುಹಾಕಲಾಗಿದ್ದ ಹಲವು ಕ್ರಮಗಳನ್ನು ಅದೇ ಮತ್ತೆ ಜಾರಿಗೆ ತಂದಿದೆ.

ಈಗ ಸರ್ಕಾರಿ ಪಂಡಿತರು ರೂಪಾಯಿಯ ಬೆಲೆಯ ಕುಸಿತಕ್ಕೆ ಹಲವು ಅರ್ಥಶಾಸ್ತ್ರೀಯ ವಿವರಣೆ ನೀಡುತ್ತ ಈ ಕುಸಿತದಿಂದ ತಾವೇನೂ ವಿಚಲಿತರಾಗಿಲ್ಲ ಎಂಬಂತಹ ಪೋಸು ಕೊಡುತ್ತಿದ್ದಾರೆ. ಆದರೆ ರೂಪಾಯಿಯ ಬೆಲೆ ಕುಸಿದಂತೆಲ್ಲ ಈ ಪಂಡಿತರು ಕಂಗಾಲಾಗಿ ಕೂತಿದ್ದಾರೆಂಬುದು ನಿಜ.

ಅವರು ನೀಡುವ ಒಂದು ವಿವರಣೆ ಇದು. ಉಳಿದ ಹಲವು ದೇಶಗಳಿಗೆ ಹೋಲಿಸಿದರೆ ನಮ್ಮ ದೇಶದಲ್ಲಿನ ಹಣ ದುಬ್ಬರ ಪ್ರಮಾಣ ತೀರ ಹೆಚ್ಚಿಗೆ ಇದೆ. ಆದ್ದರಿಂದ ಸಹಜವಾಗಿಯೇ ರೂಪಾಯಿಯ ಬೆಲೆ ಕುಸಿದಿದೆ. ನಿಜದಲ್ಲೂ ರೂಪಾಯಿಯ ಕೊಳ್ಳುವ ಶಕ್ತಿ ಕುಂದಿದೆ. ಹಾಗಾದರೆ ಇದೇ ಸರ್ಕಾರ ಹಣದುಬ್ಬರದ ಪ್ರಮಾಣವನ್ನೇ ಹಿಡಿತದಲ್ಲಿರಿಸಬಹುದಾಗಿತ್ತಲ್ಲ, ಹಾಗೇಕೆ ಮಾಡಲಿಲ್ಲ?

ಈ ವಿವರಣೆಯ ಹಿಂದೆಯೇ ಇನ್ನೊಂದು ಸೂಚನೆ ಇದೆ. ಅದೆಂದರೆ ಮತ್ತೆ ರೂಪಾಯಿಯ ಅಪಮೌಲ್ಯೀಕರಣ ಮಾಡುವುದು.

ಈ ಮೇಲಿನ ವಿವರಣೆಗಳನ್ನೆಲ್ಲ ಓದಿದ ಮೇಲೆ ಇವರಿಂದೆಲ್ಲ ನಿಮಗೆ (ಅಂದರೆ ಜನ ಸಾಮಾನ್ಯರಿಗೆ) ಏನು ಎಂಬ ಪ್ರಶ್ನೆಯನ್ನು ಕೇಳಬಹುದು. ಇದರಿಂದೆಲ್ಲ ತೊಂದರೆ ಆಗುವುದೇ ಜನ ಸಾಮಾನ್ಯರಿಗೆ. ರೂಪಾಯಿಯ ಬೆಲೆ ಕುಸಿಯಿತೆಂದರೆ ನಮ್ಮ ಆಮದಿನ ಬೆಲೆಗಳು ಏರತೊಡಗುತ್ತವೆ. ಪೆಟ್ರೋಲಿಯಂ, ಔಷಧಗಳಂತಹ ಅತ್ಯಾವಶ್ಯಕ ಸಾಮಗ್ರಿಗಳಿಗೆಲ್ಲ ನಮ್ಮ ದೇಶ ಹೆಚ್ಚಿನ ಬೆಲೆ ತೆರಬೇಕಾಗುತ್ತದೆ. ಅಲ್ಲಿ ಹೆಚ್ಚಿನ ಬೆಲೆ ತೆತ್ತ ಮೇಲೆ ನಮ್ಮಲ್ಲಿನ ಸಾಗಾಣಿಕೆ ಇತ್ಯಾದಿ ಬೆಲೆಗಳೆಲ್ಲವೂ ಏರಿ ಅದರಿಂದ ಬೆಲೆಗಳು ಗಗನಕ್ಕೆ ಏರತೊಡಗುತ್ತವೆ. ಈಗಾಗಲೇ ಹಲವು ಪಟ್ಟು ಏರಿರುವ ಬೆಲೆಗಳ ಹೊರೆಯ ಜೊತೆಗೆ ಇದೂ ಸೇರಿ ಜನಸಾಮಾನ್ಯರ ಬೆನ್ನು ಮುರಿಯ ತೊಡಗುತ್ತದೆ. ಈ ಬೆಲೆ ಏರಿಕೆ (ಅಂದರೆ ಹಣದುಬ್ಬರ)ಯಿಂದ ಮತ್ತೆ ರೂಪಾಯಿ ಬೆಲೆ ಕುಸಿಯುತ್ತದೆ. ಮತ್ತೆ ಇದರಿಂದಾಗಿ ಬೆಲೆ ಏರಿಕೆ ಆಗುತ್ತದೆ. ಈ ಚಕ್ರ ಹೀಗೆ ಮುಂದುವರಿದರೆ ಆಗುವ ಪರಿಣಾಮವನ್ನು ನೀವೇ ಊಹಿಸಿ.

ಉದಾರೀಕರಣ: ಸಂಪನ್ಮೂಲಗಳ ಕೇಂದ್ರೀಕರಣ

ಕೇಂದ್ರದಲ್ಲಿನ ಕಾಂಗ್ರೆಸ್ ಸರ್ಕಾರ ಈಗ ಚುನಾವಣೆಗಳು ಹತ್ತಿರ ಬಂದಿರುವುದರ ಹಿನ್ನೆಲೆಯಲ್ಲಿ ಮತ್ತೆ ಪಂಚಾಯತ್ ರಾಜ್ಯ ಪದ್ಧತಿ ವಿಕೇಂದ್ರೀಕರಣ ಇತ್ಯಾದಿಗಳ ಬಗ್ಗೆ ಗಾಡಿಗಟ್ಟಲೆ ಮಾತನಾಡುತ್ತಿದ್ದಾರೆ. ಆದರೆ ವಾಸ್ತವದಲ್ಲಿ ಆಗುತ್ತಿರುವುದೇನು?

ಭಾರತ ಹಳ್ಳಿಗಳ ದೇಶ. ಐದು ಲಕ್ಷ ಎಪ್ಪತ್ತು ಸಾವಿರ (5,70,000) ಹಳ್ಳಿಗಳಲ್ಲಿರುವ ನಮ್ಮ ದೇಶದಲ್ಲಿ ಅಧಿಕಾರ ವಿಕೇಂದ್ರೀಕರಣ ಅಂದರೆ ಹಳ್ಳಿಗಳಿಗೆ ಅಧಿಕಾರ ಬರಬೇಕು. ಈ ಅಧಿಕಾರ ಬರೀ ಬಾಯಿ ಮಾತಿನಿಂದ ಬರುವುದಿಲ್ಲ. ಹಳ್ಳಿಗಳ ಆಡಳಿತ ಸಂಸ್ಥೆಗಳು ಸ್ಥಾಪನೆಯಾಗಿ ಅವುಗಳಿಗೆ ಎಲ್ಲ ರೀತಿಯ ಸ್ವಾಯತ್ತತೆ ಬರುವಂತಾದರೆ ಅದರಲ್ಲೂ ಮುಖ್ಯವಾಗಿ ಹಣಕಾಸಿನ ಅಧಿಕಾರ ದೊರೆತರೆ ಆಗ ವಿಕೇಂದ್ರೀಕರಣ ಎಂಬುದು ಅರ್ಥಪೂರ್ಣವಾಗುತ್ತದೆ.

ಉದಾರೀಕರಣ ತಂದ ಸರ್ಕಾರ ರಾಜ್ಯಗಳ ಹಣಕಾಸು ಸಂಪನ್ಮೂಲಗಳಿಗೆಲ್ಲ ಕತ್ತರಿ ಹಾಕತೊಡಗಿದೆ. ಕೇಂದ್ರ ಸರ್ಕಾರದ ಸಂಪನ್ಮೂಲಗಳಿಗೆ ಅಲ್ಪಸ್ವಲ್ಪ ಹೊಡೆತ ಬಿದ್ದರೆ ರಾಜ್ಯಗಳ ಸಂಪನ್ಮೂಲಗಳಿಗೆ ದೊಡ್ಡ ಹೊಡೆತಗಳನ್ನು ಅದು ನೀಡುತ್ತಿದೆ. ದೊಡ್ಡ ಪ್ರಮಾಣದಲ್ಲಿ ವಸೂಲಾಗುವ ಅಬಕಾರಿ ತೆರಿಗೆ, ಕಸ್ಟಮ್ಸ್ ತೆರಿಗೆ, ವರಮಾನ ತೆರಿಗೆ, ಇವೆಲ್ಲ ಕೇಂದ್ರಕ್ಕೆ ಹೋಗುತ್ತವೆ. ಮಾರಾಟ ತೆರಿಗೆ ಮೋಟಾರು ವಾಹನ ತೆರಿಗೆ, ಇತ್ಯಾದಿ ಸಣ್ಣಪುಟ್ಟವುಗಳೆಲ್ಲ ರಾಜ್ಯ ಸರ್ಕಾರಗಳಿಗೆ ಬರುತ್ತವೆ.

ಕೇಂದ್ರ ಸರ್ಕಾರ ಘೋಷಿಸಿರುವ ಯೋಜನೆಗೂ ಇದೇ ತಂತ್ರ ಅನುಸರಿಸುತ್ತವೆ. ಕೇಂದ್ರದ ವೃದ್ಧರಿಗಾಗಿನ ಪೆನ್ಷನ್, ಗ್ರಾಮೀಣ ವಿಮಾ ಯೋಜನೆ ಇತ್ಯಾದಿ ಇವುಗಳಿಗೆಲ್ಲ ರಾಜ್ಯ ಸರ್ಕಾರಗಳು ಹಣ ಭರಿಸಬೇಕು. ಕೇಂದ್ರ ಸರ್ಕಾರ ದಿನೇ ದಿನೇ ರಾಜ್ಯ ಸರ್ಕಾರಗಳ ಸಂಪನ್ಮೂಲಗಳನ್ನು ಕತ್ತರಿಸಿ ಅವುಗಳ ವೆಚ್ಚದ ಜವಾಬ್ದಾರಿಯನ್ನು ಹೆಚ್ಚಿಸುತ್ತಿದೆ.

ರಾಜ್ಯ ಸರ್ಕಾರಗಳ ಪರಿಸ್ಥಿತಿ ಹೀಗಿರುವಾಗ ಇನ್ನು ಜಿಲ್ಲಾ ಪಂಚಾಯತ್ ಮತ್ತು ಪಂಚಾಯತುಗಳಿಗೆ ಎಲ್ಲಿನ ಸಂಪನ್ಮೂಲಗಳು ಬರಬೇಕು?

ಉದಾರೀಕರಣ ಮತ್ತು ವಿಕೇಂದ್ರೀಕರಣಗಳು ಸಂಬಂಧ ಈ ರೀತಿಯದ್ದು.

ಹಿಂದೆ ಬಿದ್ದ ಯೋಜನೆಗಳು

ಕೇಂದ್ರ ಸರ್ಕಾರದ 883 ಅಭಿವೃದ್ಧಿ ಯೋಜನೆಗಳಲ್ಲಿ 213 ಯೋಜನೆಗಳು ಯೋಜಿತ ಸಮಯಕ್ಕಿಂತ ಹಿಂದೆ ಬಿದ್ದಿವೆಯಂತೆ. ಹಾಗೆ ನಮ್ಮಲ್ಲಿ ಬಹುತೇಕ ಯೋಜನೆಗಳು ಹಿಂದೆ ಬೀಳುತ್ತಿರುವುದು ಹೊಸತೇನಲ್ಲ, ಆದರೆ ಯೋಜನೆಗಳು ಸಕಾಲದಲ್ಲಿ ಮುಗಿಯದಿದ್ದರೆ ಅದರಿಂದ ದೇಶದ ಜನತೆಗೆ ಅಪಾರ ಹಾನಿ ಉಂಟಾಗುತ್ತದೆ. ಹೇಗೆ?

ಯೋಜನೆಯ ಅನುಪಾತ ಪೂರ್ಣವಾಗುವುದರಲ್ಲಿ ವಿಳಂಬವಾದಂತೆಲ್ಲ ಯೋಜನೆಯ ವೆಚ್ಚ ಹೆಚ್ಚಾಗುತ್ತದೆ. ಪೂರ್ಣವಾಗಿದ್ದಲ್ಲಿ ಬರಬಹುದಾದ ಲಾಭಗಳು ಬರುವುದಿಲ್ಲ. ಇದಲ್ಲದೆ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುವುದಿಲ್ಲ. ಇದು ದೇಶದ ಒಟ್ಟಾರೆ ಪ್ರಗತಿಯನ್ನೇ ಕುಂಠಿತಗೊಳಿಸುತ್ತದೆ. ಆದ್ದರಿಂದಲೇ ಯೋಜನೆಗಳು ಸಕಾಲದಲ್ಲಿ ಸರಿಯಾಗಿ ಮುಗಿಯಬೇಕು. ಇದನ್ನು ಸಾಧಿಸುವಲ್ಲಿ ಸರ್ಕಾರಗಳು ತಮ್ಮ ಸಾಮರ್ಥ್ಯದ ಪರೀಕ್ಷೆ ಮಾಡಿಕೊಳ್ಳಬೇಕು. ಸಮರ್ಥ ಸರ್ಕಾರ ಈ ಸಾಧನೆ ಮಾಡುತ್ತದೆ.

ಈಗ ಹಿಂದೆ ಬಿದ್ದಿರುವ ಯೋಜನೆಗಳ ವೆಚ್ಚ ಶೇ. 24ರಷ್ಟು ಹೆಚ್ಚಾಗುತ್ತದಂತೆ. ಈ ಎಲ್ಲಾ ಯೋಜನೆಗಳ ವೆಚ್ಚ ಎಷ್ಟು ಗೊತ್ತೆ! 136380 ಕೋಟಿ ರೂಪಾಯಿಗಳು!!

ಈ ಮೊತ್ತಕ್ಕೆ ವೆಚ್ಚದಲ್ಲಿ ಆಗುವ ಏರಿಕೆಯನ್ನು ಸೇರಿಸಿದರೆ ಮತ್ತೆ ಈ ಮೊತ್ತದ ಕಾಲುಭಾಗದಷ್ಟು ಹೆಚ್ಚುತ್ತದೆ. ಇದನ್ನೂ ದೇಶದ ಜನತೆ ತೆರಬೇಕಾಗುತ್ತದೆ.

ಸಮಾನ ನಾಗರೀಕ ಸಂಹಿತೆ ಗುಲ್ಬರ್ಗಾದಲ್ಲಿ ವಿಚಾರ ಸಂಕಿರಣ

ಈ ದೇಶದಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯವಿಲ್ಲ. ದಿನಚರಿಯಲ್ಲಿ ಮಹಿಳೆಯನ್ನು ಬಂಧಿಸಿ ಈ ಸಮಾಜ ಶೋಷಿಸುತ್ತಿದೆ. ಮಹಿಳೆಯರ ಮೇಲಿನ ದೌರ್ಜನ್ಯ ಬಲಾತ್ಕಾರ ಅವ್ಯಾಹತವಾಗಿ ಮುಂದುವರಿದಿದೆ. ಆದಕ್ಕಾಗಿ ಮಹಿಳೆಯರು ಸಂಘಟಿತರಾಗಿ ಸಂಘರ್ಷದ ಹಾದಿ ತುಳಿಯುವುದು ಅನಿವಾರ್ಯವೆಂದು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ರಾಷ್ಟ್ರ ಸಮಿತಿ ಪ್ರಧಾನ ಕಾರ್ಯದರ್ಶಿಗಳಾದ ಬೃಂದಾ ಕಾರಟ್ ತಿಳಿಸಿದರು.

ಅವರು ಸೆಪ್ಟೆಂಬರ್ ೨೯ರಂದು ಗುಲ್ಬರ್ಗಾದಲ್ಲಿ ಜನವಾದಿ ಮಹಿಳಾ ಸಂಘಟನೆ ಏರ್ಪಡಿಸಿದ್ದ ಸಮಾನ ನಾಗರೀಕ ಸಂಹಿತೆ ಕುರಿತು ವಿಚಾರ ಸಂಕಿರಣವನ್ನುದ್ದೇಶಿಸಿ ಮಾತನಾಡುತ್ತಿದ್ದರು. ಸಮಾಜದಲ್ಲಿ ಮಹಿಳೆಯರನ್ನು ಸಮಾನವಾಗಿ ಕಾಣುತ್ತಿಲ್ಲ, ಸಮಾನ ಮಹಿಳಾ ನೀತಿ ಇಲ್ಲ, ಕೋಮುವಾದಿ ಶಕ್ತಿಗಳು-ಮೂಲಭೂತವಾದಿಗಳು ಮಹಿಳೆಯರ ಸಮಾನತೆ, ಹಕ್ಕುಗಳ ಬಗ್ಗೆ ತಿರಸ್ಕಾರದ ಭಾವನೆ ಹೊಂದಿದ್ದಾರೆ. ಏಕರೂಪ ನಾಗರೀಕ ಸಂಹಿತೆ ಹೆಸರಿನಲ್ಲಿ ಕೋಮುವಾದಿಗಳು ಜಾತೀಯ ರಾಜಕೀಯ ಪ್ರಕ್ರಿಯೆಯಲ್ಲಿ ತೊಡಗಿದ್ದು ನಮ್ಮ ಸಮಸ್ಯೆಗಳಿಗೆ ಹೋರಾಟ ಮಾಡುವುದು ಅಗತ್ಯವಾಗಿದೆಯೆಂದು ತಿಳಿಸಿದರು.

ವಿಚಾರ ಸಂಕಿರಣದ ಉದ್ದೇಶವನ್ನು ತಿಳಿಸುತ್ತಾ ಪ್ರಾಸ್ತಾವಿಕ ಭಾಷಣದಲ್ಲಿ ಜನವಾದಿ ಮಹಿಳಾ ಸಂಘಟನೆಯ ರಾಜ್ಯಾಧ್ಯಕ್ಷೆ ನೀಲಾ ಕೆ. ಮಾತನಾಡುತ್ತಾ ಮಹಿಳೆಯರ ಮೇಲಾಗುವ ನಿರಂತರ ದೌರ್ಜನ್ಯ ಬಲಾತ್ಕಾರ ತಡೆಗಟ್ಟಲು ಸತತ ಹೋರಾಟವೊಂದೇ ದಾರಿ ಎಂದು ತಿಳಿಸಿದರು. ಮಹಿಳೆಯರ ಸಮಾನ ಹಕ್ಕುಗಳಿಗಾಗಿ ಸಂಘಟಿತರಾಗಿ ಹೋರಾಟ ಮಾಡಲು ಕರೆ ಕೊಟ್ಟರು.

ಈ ಸಮಾವೇಶದಲ್ಲಿ 300ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದು ಅದರಲ್ಲಿ ನೂರಕ್ಕೂ ಹೆಚ್ಚು ಮುಸ್ಲಿಂ ಮಹಿಳೆಯರು ಭಾಗವಹಿಸಿದ್ದು ವಿಶೇಷವಾಗಿತ್ತು. ಶ್ರೀಮತಿ ಗುಂಡಮ್ಮ ಅವರ ಸ್ವಾಗತದೊಂದಿಗೆ ಪ್ರಾರಂಭವಾದ ಸಮಾವೇಶಕ್ಕೆ ಚಿಂಚನೂರ ತಾಲೂಕು ಪಂಚಾಯತಿ ಸದಸ್ಯೆಯಾದ ಕಾಂ. ಲಕ್ಷ್ಮೀಬಾಯಿ ಅಧ್ಯಕ್ಷತೆ ವಹಿಸಿದ್ದರು. ಜನವಾದಿ ಮಹಿಳಾ ಸಂಘಟನೆಯ ಭಾರತೀಬಾಯಿ ವಂದನಾರ್ಪಣೆ ಮಾಡಿದರು, ಕಾಂ.ರೇಣುಕಾ ಕಾರ್ಯಕ್ರಮ ನಿರೂಪಿಸಿದರು.





ಬೀಡಿ ಕಾರ್ಮಿಕರ ಸಮಾವೇಶ

ಬೆಳ್ತಂಗಡಿ: ಇತ್ತೀಚೆಗೆ ತಾಲೂಕಿನ ನಾವೂರು ಗ್ರಾಮದಲ್ಲಿ ಬೀಡಿ ಕೆಲಸಗಾರರ ಸಮಾವೇಶವು ಅತೀ ಯಶಸ್ವಿಯಾಗಿ ಜರುಗಿತು. ಸುಮಾರು ಒಂದು ಸಾವಿರಕ್ಕೂ ಹೆಚ್ಚು ಬೀಡಿ ಕಾರ್ಮಿಕರು ಸಮಾವೇಶದಲ್ಲಿ ಪಾಲ್ಗೊಂಡರು.

ಸಮಾರಂಭದ ಅಧ್ಯಕ್ಷತೆಯನ್ನು ನಾವೂರಿನ ಅಬೂಬಕ್ಕರ್ ವಹಿಸಿದ್ದರು. ಸಮಾವೇಶದ ಉದ್ಘಾಟನಾ ಭಾಷಣವನ್ನು ತಾಲೂಕು ರೈತ ಸಂಘದ ಕಾಂ. ಹರಿದಾಸ್ ಮಾಡಿದರು. ಮುಖ್ಯ ಅತಿಥಿಗಳಾಗಿ ಬೀಡಿ ಕಾರ್ಮಿಕರ ಸಂಘದ ಕಾಂ. ಬಾಲಕೃಷ್ಣ ಶೆಟ್ಟಿ, ಕಾಂ.ಸಂಜೀವ್ ಬಂಗೇರ, ಕಾಂ.ಸುಕುಮಾರ್, ಕಾಂ. ರಮಣಿ ಅವರುಗಳು ಹಾಜರಿದ್ದರು. ಬೀಡಿ ಕೆಲಸಗಾರರ ಸಂಘಟನೆಯ ಅವಶ್ಯಕತೆಯನ್ನು ವಿವರಿಸಿದರು. ಬೆಳ್ತಂಗಡಿ ಬೀಡಿ ಕೆಲಸಗಾರರ ಸಂಘದ ಅಧ್ಯಕ್ಷರಾದ ನ್ಯಾಯವಾದಿ ಕಾಂ. ಬಿ.ಎಂ.ಭಟ್, ಸಿಪಿಐ(ಎಂ) ತಾಲೂಕು ಕಾರ್ಯದರ್ಶಿ ನ್ಯಾಯವಾದಿ ಕಾಂ.ಶಿವಕುಮಾರ್, ತಾಲೂಕು ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಕಾಂ.ಮಂಜುನಾಥ, ಕಾಂ.ಸಂಜೀವ ಲೈಲ ಮೊದಲಾದವರು ಉಪಸ್ಥಿತರಿದ್ದರು. ಕೊನೆಯಲ್ಲಿ ಅಧ್ಯಕ್ಷರಾಗಿ ಎನ್. ಅಬೂಬಕ್ಕರ್, ಕಾರ್ಯದರ್ಶಿಯಾಗಿ ರಮೇಶ್, ಸಹಕಾರ್ಯದರ್ಶಿಯಾಗಿ ಹಮೀದ್ ಮತ್ತು ಕುಮಾರಿ ಮೋನಮ್ಮ ಮತ್ತು ಒಟ್ಟು ೪೦ ಮಂದಿಯ ಸದಸ್ಯರನ್ನೊಳಗೊಂಡ ಸಮಿತಿ ಆರಿಸಲಾಯಿತು.

ಅಂಗನವಾಡಿ ನೌಕರರ ಸಮಾವೇಶ

ಗಂಗಾವತಿ: ಸಾವಿರಾರು ಸಂಖ್ಯೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಲವಾರು ವರ್ಷಗಳ ಕಾಲ ಕೆಲಸ ಮಾಡುತ್ತಿದ್ದರೂ ಸರಕಾರ ಇವರ ಸಮಸ್ಯೆಗಳಿಗೆ ಸ್ಪಂದಿಸದೇ ಇರುವುದು ಶೋಚನೀಯ ಎಂದು ಶರಣ್ಣ ನಾಗಲಾಪೂರ ಸೆಪ್ಟೆಂಬರ್ 24ರಂದು ಗಂಗಾವತಿಯಲ್ಲಿ ನಡೆದ ಅಂಗನವಾಡಿ ತಾಲೂಕು ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ಈ ಸಮಾವೇಶದಲ್ಲಿ ಮುಖ್ಯ ಅತಿಥಿಯಾಗಿ ಅಂಗನವಾಡಿ ನೌಕರರ ರಾಜ್ಯ ಸಮನ್ವಯ ಸಮಿತಿ ಸಂಚಾಲಕಿ ಎಸ್.ವರಲಕ್ಷ್ಮಿಯವರು ಮಾತನಾಡುತ್ತಾ ಹಿಂದೆ ಅಂಗನವಾಡಿ ಸಂಘಟನೆಯ ನಾಯಕಿಯಾಗಿದ್ದವರು ಇಂದು ಅದೇ ಇಲಾಖೆಯ ಮಂತ್ರಿಗಳಾಗಿ ಮಾಡಿರುವ ಘನ ಕಾರ್ಯವೆಂದರೆ ಅಂಗನವಾಡಿ ಕೇಂದ್ರಗಳನ್ನು ವಾಪಸ ಗೊಳಿಸುವುದು. ಇದು ಖಂಡನೀಯ ಎಂದು ತಿಳಿಸುತ್ತಾ ಸಂಘಟಿತರಾಗುವ ಅವಶ್ಯಕತೆಯನ್ನು ತಿಳಿಸಿದರು. ಈ ಸಮಾವೇಶದಲ್ಲಿ ಮಂಟನಗೌಡ ಗೌರವ ಅಧ್ಯಕ್ಷರಾಗಿಯೂ, ದ್ಯಾಮಾ ಜಂಟಿ ಕಾರ್ಯದರ್ಶಿಯಾಗಿ ಮತ್ತು 17 ಜನರಿರುವ ತಾಲೂಕು ಸಮಿತಿಯನ್ನು ಆರಿಸಲಾಯಿತು.

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮ್ಮೇಳನ

ಶಿರಗುಪ್ಪ: ಅಕ್ಟೋಬರ್ 30, 31ರಂದು ಬಳ್ಳಾರಿ ಜಿಲ್ಲಾ ಪ್ರಾಂತ ರೈತ ಸಂಘದ ಸಮ್ಮೇಳನ ಶಿರಗುಪ್ಪಾದಲ್ಲಿ ನಡೆಯಿತು.

ಧ್ವಜಾರೋಹಣವನ್ನು ಕಾಂ.ಪಿ.ಆರ್. ವೆಂಕಟೇಶ್ ರವರು ನೆರವೇರಿಸಿದರು. ಸಮ್ಮೇಳನದ ಪ್ರಾಮುಖ್ಯತೆಯನ್ನು ಕಾಂ.ಯು.ಬಸವರಾಜ್ ವಿವರಿಸಿದರು. ನಂತರ ಜಿಲ್ಲೆಯ ಪ್ರಮುಖ ಬೇಡಿಕೆಯಾದ ನೀರಾವರಿ ಸಮಸ್ಯೆಯನ್ನು ಕುರಿತು ಬೃಹತ್ ಮೆರವಣಿಗೆಯನ್ನು ನಡೆಸಲಾಯಿತು. ಬಹಿರಂಗ ಸಮಾವೇಶದಲ್ಲಿ ಪ್ರತಿ ತಾಲೂಕಿನ ನೀರಾವರಿ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು. ಈ ಸಮಸ್ಯೆಗಳ ಕುರಿತು ಹಾಗೂ ದೇಶದ, ರಾಜ್ಯದ ರೈತರು ಎದುರಿಸುತ್ತಿರುವ ಸಂಕಟದ ಸ್ಥಿತಿಗಳ ಪ್ರಧಾನ ಕಾರ್ಯದರ್ಶಿಯಾದ ಕಾಂ.ಸಿ.ಎಸ್. ಬಾಳೆಯವರು ವಿವರಿಸಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ.ಈ.ಆರ್.ಎಲ್ಲಪ್ಪನವರು ವಹಿಸಿದ್ದರು.

ಅಧ್ಯಕ್ಷರಾಗಿ ಜೆ.ಎಂ.ವೀರಸಂಗಯ್ಯ, ಕಾರ್ಯದರ್ಶಿಯಾಗಿ ಯು.ಬಸವರಾಜ್, ಸಹಕಾರ್ಯದರ್ಶಿಯಾಗಿ ಪಿ.ಆರ್. ವೆಂಕಟೇಶ್, ಉಪಾಧ್ಯಕ್ಷರುಗಳಾಗಿ, ವಿ.ಎಸ್. ಶಿವಶಂಕರ್, ಈ.ಆರ್.ಎಲ್ಲಪ್ಪ, ಮಲಿಯಪ್ಪನವರು ನೂತನ ಜಿಲ್ಲಾ ಸಮಿತಿಗೆ ಆಯ್ಕೆಯಾದರು.

ತಾಲೂಕು ಸಮ್ಮೇಳನ

ಬಸವನಬಾಗೇವಾಡಿ: ಅಕ್ಟೋಬರ್ 9ರಂದು ಇದೇ ಗ್ರಾಮದ ತಾಲೂಕು ಮಟ್ಟದ ರೈತರ 6ನೇ ಸಮ್ಮೇಳನವನ್ನು ಕಾಂ.ಸಾಯಿಬಣ್ಣಾ ಹಂದಿಗನೂರ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಕಾಂ. ಭೀಮಸಿ ಕಲಾದಗಿ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿ ರಾಜಕೀಯೇತರವಾದ ನೀರಾವರಿ ಚಳುವಳಿ ರೂಪಿಸುವ ಅನಿವಾರ್ಯತೆಯನ್ನು ಒತ್ತಿ ಹೇಳಿ ಅದರ ನೇತೃತ್ವವನ್ನು ಕರ್ನಾಟಕ ಪ್ರಾಂತ ರೈತ ಸಂಘ ವಹಿಸಲು ಸಿದ್ಧವಿದೆ ಎಂದರು.

ಈ ಸಂದರ್ಭದಲ್ಲಿ ಹೊಸ ಕೃಷಿ ನೀತಿ ಮತ್ತು ಭೂ ಸುಧಾರಣೆ ಕಾಯ್ದೆ ತಿದ್ದುಪಡಿ ಕರಡು ಪದಿ ಪ್ರತಿಕೃತಿಯನ್ನು ದಹಿಸಿ ಪ್ರತಿಭಟಿಸಲಾಯಿತು. ನೂತನ ತಾಲೂಕು ಸಮಿತಿಯನ್ನು ಆರಿಸಲಾಯಿತು. ಅಧ್ಯಕ್ಷರಾಗಿ ರಾಮಚಂದ್ರ ರೂಡಗಿ, ಉಪಾಧ್ಯಕ್ಷರುಗಳಾಗಿ ಸಾಯಿಬಣ್ಣಾ, ನಬಿಸಾಬ, ಮಹ್ಮದ್‌ಸಾಬ ಮತ್ತು ಚಂದಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಡಿ.ಎಂ. ವಾಲಿಕಾರ, ಸಹ ಕಾರ್ಯದರ್ಶಿಗಳಾಗಿ ಶರಣಪ್ಪ ಹಳ್ಳಿ, ಯಲ್ಲಪ್ಪ ಇಟಗಿ, ಲಕ್ಷ್ಮಣ, ಖಜಾಂಚಿಯಾಗಿ ಬಸವಯ್ಯ ಹಿರೇಮಠ ಆಯ್ಕೆಯಾದರು. ೨೦ ಸದಸ್ಯರ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ಇಂಡಿ: ಕೇಂದ್ರ ಸರಕಾರದ ಹೊಸ ಆರ್ಥಿಕ ನೀತಿಯಿಂದ ರೈತರಿಗೆ ಅಗತ್ಯವಾದ, ಔಷಧಿ, ರಸಗೊಬ್ಬರ, ಬೀಜದ ಬೆಲೆಗಳು ಗಗನಕ್ಕೇರಿವೆ, ರೈತರು ಸಂಘಟಿತರಾಗಿ ಇದರ ವಿರುದ್ಧ ಹೋರಾಡುವಂತೆ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಕಾಂ. ಭೀಮಸಿ ಕಲಾದಗಿ ಕರೆ ನೀಡಿದರು. ಅವರು ಅಕ್ಟೋಬರ್ 10ರಂದು ಎಪಿಎಂಸಿ ಯಾರ್ಡ್‌ನಲ್ಲಿ ನಡೆದ ರೈತ ಸಂಘದ 6ನೇ ತಾಲೂಕು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಖ್ಯ ಅತಿಥಿಗಳಾಗಿ ಕಾಂ.ಅಣ್ಣಾರಾಯ ಈಳಿಗೇರ, ಕಾಂ.ಸುರೇಶ ಅರಳಿ, ಕಾಂ. ಮಹಾದೇವ ನೀಲವಗಿ ಆಗಮಿಸಿ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರು. ಕಾಂ.ಸೋಮಣ್ಣಾ ಮೇತ್ರಿ ಅಧ್ಯಕ್ಷತೆ ವಹಿಸಿದ್ದರು. ನಂತರ ಕಮೀಶನರ್ ಕಛೇರಿ ಎದುರು ನಡೆದ ಮತ ಪ್ರದರ್ಶನದಲ್ಲಿ ನೂತನ ಕೃಷಿ ನೀತಿಯ ಕರಡನ್ನು ಸುಡಲಾಯಿತು. ನೂತನ ಸಮಿತಿಗೆ ಕಾಂ. ಸೋಮಣ್ಣಾ ಮೇತ್ರಿ, ಅಧ್ಯಕ್ಷರಾಗಿ, ಕಾಂ. ಪರಮಾತ್ಮ ಬಂದಪಟ್ಟಿ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಕೃಷಿ ಕೂಲಿಕಾರರ ಸಮಾವೇಶ

ಉಡುಪಿ: ತಾಲೂಕಿನ ಕೃಷಿ ಕೂಲಿಕಾರರ ಸಮಾವೇಶವು ಸೆ. 30ರಂದು ನಗರದ ಸತ್ಯಮೂರ್ತಿ ಸಭಾ ಭವನದಲ್ಲಿ ಜರುಗಿತು. ಡೇವಿಡ್ ಕರ್ಕತರವರು ಅಧ್ಯಕ್ಷತೆ ವಹಿಸಿದ್ದರು. ಸಮಾವೇಶವನ್ನು ಉದ್ಘಾಟಿಸಿದ ದ.ಕ. ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಆರ್. ಶ್ರೀಯಾನ್ ಮಾತನಾಡುತ್ತಾ ಕೇಂದ್ರ ಸರಕಾರವು ಬಹುರಾಷ್ಟ್ರೀಯ ಸಂಸ್ಥೆಗಳನ್ನು ಭಾರತಕ್ಕೆ ಆಹ್ವಾನಿಸುತ್ತಿದೆ, ರಾಜ್ಯ ಸರಕಾರವು ಭೂಸುಧಾರಣೆಗೆ ತಿದ್ದುಪಡಿ ತಂದು ಕೃಷಿ ಭೂಮಿಯನ್ನು ಸುಲಭವಾಗಿ ಮಾರಾಟ ಮಾಡಲು ಮತ್ತು ಬಂಡವಾಳಶಾಹಿಗಳು ವಿದೇಶೀ ಸಂಸ್ಥೆಗಳು ಪಡೆಯಲು ಅನುಕೂಲ ಮಾಡಿಕೊಡುತ್ತಿವೆ. ಇನ್ನು ಕೆಲವೇ ವರ್ಷಗಳಲ್ಲಿ ನಮ್ಮ ದೇಶದಲ್ಲಿ ಕೃಷಿ ಚಟುವಟಿಕೆಗಳು ಸ್ಥಗಿತಗೊಂಡು ಆಹಾರ ಧಾನ್ಯಗಳಿಗಾಗಿ ಪರದೇಶಗಳನ್ನೇ ಅವಲಂಬಿಸುವ ಪರಿಸ್ಥಿತಿ ಬರಲಿದೆ. ಆದಕ್ಕಾಗಿ ರೈತ, ಕೃಷಿ ಕೂಲಿಕಾರರು ಜಾಗೃತರಾಗಬೇಕು ಎಂದರು. ಅಧ್ಯಕ್ಷತೆಯನ್ನು ವಹಿಸಿದ್ದ ಡೇವಿಡ್ ಕರ್ಕಡರು ಮಾತನಾಡುತ್ತಾ ಹಸಿರು ಕಾರ್ಡ್, ಮನೆ ನಿವೇಶನಗಳಿಗಾಗಿ ಹೋರಾಡಿದ ಕೃಷಿ ಕೂಲಿಕಾರರು ಇನ್ನು ಮುಂದೆ ಕೃಷಿಯ ಉಳಿವಿಗಾಗಿ ಹೋರಾಡಬೇಕಾದ ಪರಿಸ್ಥಿತಿ ಬಂದಿದೆ ಎಂದರು.

ಕೃಷಿ ಕೂಲಿಕಾರರ ಸಂಘದ ಹೊಸ ಕಾರ್ಯಕಾರಿ ಸಮಿತಿಗೆ ಅಧ್ಯಕ್ಷರಾಗಿ ಗುರುರಾಜ್ ಕೆಸೆಟ್ಟಿಗಾರ, ಉಪಾಧ್ಯಕ್ಷರಾಗಿ ಎನ್. ಸಾಧು ಅಮೀನ್, ಕಾರ್ಯದರ್ಶಿಯಾಗಿ ಕೆ.ದೋಗು ಸುವರ್ಣ, ಜತೆ ಕಾರ್ಯದರ್ಶಿಯಾಗಿ ಉಮೇಶ ಕುಂದರ್, ಕೋಶಾಧಿಕಾರಿಯಾಗಿ ರಮೇಶ್ "ಮೆಂಡನ್ ಆಯ್ಕೆಯಾದರು.

ಸಿಐಟಿಯುಗೆ ಜಯ

ಇತ್ತೀಚೆಗೆ ಎಂಪಿಎಂ ಕಾರ್ಮಿಕ ಸಂಘದ ಚುನಾವಣೆಯಲ್ಲಿ ಸಿಐಟಿಯು ರಾಜ್ಯಾಧ್ಯಕ್ಷರಾದ ಕಾಂ.ಎಸ್.ಸೂರ್ಯನಾರಾಯಣರಾವ್ ರವರ ತಂಡದ ಐಕ್ಯತಾರಂಗದ ಅಭ್ಯರ್ಥಿಗಳು ಜಯಗಳಿಸಿದ್ದಾರೆ. ಅಧ್ಯಕ್ಷರಾಗಿ ಕೃಷ್ಣಮೂರ್ತಿ, ಉಪಾಧ್ಯಕ್ಷರಾಗಿ ಬಿ.ಜಿ. ಸದಾಶಿವಲಿಂಗೇಗೌಡ, ಕಾರ್ಯದರ್ಶಿಯಾಗಿ ಟಿ.ಪ್ರಕಾಶ್, ಸಹಕಾರ್ಯದರ್ಶಿಯಾಗಿ ಚಂದ್ರಶೇಖರ್, ಖಜಾಂಚಿಯಾಗಿ ಟಿ.ಬಸವರಾಜಯ್ಯ ಜಯಗಳಿಸಿದ್ದಾರೆ. ಇವರುಗಳನ್ನು ಆಯ್ಕೆ ಮಾಡಿ ಗೆಲ್ಲಿಸಿದ ಎಂಪಿಎಂ ಕಾರ್ಮಿಕರಿಗೆ ಸಿಐಟಿಯು ಸಂಘಟನಾ ಸಮಿತಿ ಹೃತ್ಪೂರ್ವಕ ಅಭಿನಂದನೆಯನ್ನು ಸಲ್ಲಿಸಿದೆ.

ಸರಕಾರದ ಕ್ರಮಕ್ಕೆ ಎ.ಆರ್.ಡಿ.ಯು. ಅಭಿನಂದನೆ

ಸಾರ್ವಜನಿಕ ಸೇವೆ ಸಲ್ಲಿಸುತ್ತಿರುವ ಆಟೋ ರಿಕ್ಷಾ ಚಾಲಕರಿಗೆ ಅಪಘಾತದಿಂದ ಸಾವು, ನೋವು ಉಂಟಾದಾಗ ಚಾಲಕರ ಕುಟುಂಬದ ಸದಸ್ಯರು ಜೀವನಕ್ಕೆ ಮಾರ್ಗವಿಲ್ಲದೆ ಕಷ್ಟಕ್ಕೊಳಗಾಗುತ್ತಿದ್ದುದನ್ನು ಗಮನಿಸಿ ಸರಕಾರದ ವತಿಯಿಂದ ಆಟೋ ಚಾಲಕರಿಗೆ ಅಪಘಾತ ಪರಿಹಾರ ನಿಧಿ ಯೋಜನೆಯನ್ನು ಜಾರಿಗೆ ತರಬೇಕೆಂದು ಆಟೋರಿಕ್ಷಾ ಚಾಲಕರ ಸಂಘವು ಹಲವಾರು ವರ್ಷಗಳಿಂದ ಸರಕಾರದ ಮೇಲೆ ಒತ್ತಾಯ ತರಲಾಗುತ್ತಿತ್ತು. ಅದೇ ರೀತಿ ಕಳೆದ 5-6 ತಿಂಗಳಿನಿಂದ ರಾಜ್ಯ ಸರಕಾರಕ್ಕೆ ಮನವಿ ಪತ್ರ ಸಲ್ಲಿಸಿ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ನಮ್ಮ ಸಂಘದಿಂದ ಒತ್ತಾಯಪಡಿಸಲಾಗಿತ್ತು. ಆಟೋರಿಕ್ಷಾ ಚಾಲಕ ಅಪಘಾತದಿಂದ ಮರಣ ಹೊಂದಿದರೆ ಅವರ ಕುಟುಂಬದವರಿಗೆ 50,000 ರೂ. ಪರಿಹಾರ ನೀಡುವುದಾಗಿ ಪ್ರಕಟಿಸಿದ್ದಾರೆ. ಸಂಘದ ನ್ಯಾಯವಾದ ಬೇಡಿಕೆಗೆ ಮನ್ನಣೆ ನೀಡಿ ಅಪಘಾತ ಪರಿಹಾರ ನಿಧಿ ಯೋಜನೆಯನ್ನು ಜಾರಿಗೆ ತಂದಿರುವುದಕ್ಕೇ ಮಾನ್ಯ ಮಂತ್ರಿಗಳಿಗೆ ಹಾಗೂ ಸಚಿವ ಸಂಪುಟಕ್ಕೆ ಸಮಸ್ತ ಆಟೋರಿಕ್ಷಾ ಚಾಲಕರ ಪರವಾಗಿ ಅಭಿನಂದನೆಯನ್ನು ಸಲ್ಲಿಸಿದೆ.

ಡಾ.ನರೇಂದ್ರನಾಯಕರ ಮೇಲಿನ ಹಲ್ಲೆಗೆ ಖಂಡನೆ

ಧಾರವಾಡ: ಸೆಪ್ಟೆಂಬರ್ 29ರಂದು ವಿಗ್ರಹಗಳು ಹಾಲು ಕುಡಿಯುತ್ತಿವೆ ಎಂದು ಗುಲ್ಲೆಬ್ಬಿಸಿ ಮುಗ್ಧ ಜನರನ್ನು ಮೋಡಿಗೊಳಿಸಿದ ಹಿನ್ನೆಲೆಯಲ್ಲಿ ಈ ವಿದ್ಯಮಾನದಲ್ಲಿ ಯಾವ ದೇವರ ಪವಾಡವೂ ಇಲ್ಲವೆಂದು ಅದರ ವೈಜ್ಞಾನಿಕ ವಿಶ್ಲೇಷಣೆಯನ್ನು ಜನಸಾಮಾನ್ಯರಿಗೆ ವಿವರಿಸುತ್ತಿದ್ದ ಮಂಗಳೂರಿನ ಕಸ್ತೂರಬಾ ವೈದ್ಯಕೀಯ ಕಾಲೇಜಿನ ಸುಪ್ರಸಿದ್ಧ ಪ್ರಾಧ್ಯಾಪಕರೂ, ರಾಜ್ಯ ವಿಚಾರವಾದಿಗಳ ವೇದಿಕೆಯ ಅಧ್ಯಕ್ಷರೂ ಆಗಿರುವ ನರೇಂದ್ರ ನಾಯಕರ ತಲೆಗೆ ಹಿಂದೂ ತರುಣ ಸೇನೆಯ ಕಿಡಿಗೇಡಿಗಳು ಕಲ್ಲುಗಳನ್ನು ತೂರಿ ಗಾಯಗೊಳಿಸಿರುವುದನ್ನು ಧಾರವಾಡ ವಿವಿಧ ಸಾಮೂಹಿಕ ಸಂಘಟನೆಗಳು ಖಂಡಿಸಿವೆ. ಸ್ಥಳೀಯ ಭಾರತ ಜ್ಞಾನ ವಿಜ್ಞಾನ ಸಮಿತಿ, ಸಮುದಾಯ, ಬಂಡಾಯ ಸಾಹಿತ್ಯ, ಇಪ್ಟಾ, ವಿಮಾ ನೌಕರರ ಸಂಘ ಮತ್ತಿತರ ಸಾಮೂಹಿಕ ಸಂಘಟನೆಗಳ ಪ್ರತಿನಿಧಿಗಳು ಇಲ್ಲಿಯ ಬಯಲು ರಂಗ ಮಂದಿರದಲ್ಲಿ ನಡೆದ ಸಭೆಯಲ್ಲಿ ಹಲ್ಲೆಯನ್ನು ಪ್ರತಿಭಟಿಸಿ ಒಂದು ನಿರ್ಣಯವನ್ನು ಅಂಗೀಕರಿಸಿತು. ಜನರಲ್ಲಿ ಮೂಢನಂಬಿಕೆಗಳನ್ನು ಹೋಗಲಾಡಿಸಿ ವೈಜ್ಞಾನಿಕ ಮನೋಭಾವ ಹಾಗೂ ಸಂಶೋಧನಾ ಪ್ರವೃತ್ತಿಯನ್ನು ಮೈಗೂಡಿಸಿಕೊಳ್ಳಲು ನಿರಂತರವಾಗಿ ಶ್ರಮಿಸುತ್ತಿರುವ ಡಾ.ನರೇಂದ್ರನಾಯಕರಿಗೆ ಸಭೆಯು ತನ್ನ ಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿತು.

ಇಸ್ರೇಲಿ ಪ್ರಧಾನಿ ರಬಿನ್ ಹತ್ಯೆ

ಇಸ್ರೇಲಿ ಪ್ರಧಾನ ಮಂತ್ರಿ ಯಿತ್ಝಕ್ ರಬಿನ್‌ರನ್ನು ನವೆಂಬರ್ 4ರ ರಾತ್ರಿ 27 ವರ್ಷದ ಇಸ್ರೇಲಿ ವಿದ್ಯಾರ್ಥಿಯೊಬ್ಬ ಗುಂಡಿಕ್ಕಿ ಕೊಂದ. ಪ್ಯಾಲೆಸ್ಟೀನ್ ಜತೆ ಒಪ್ಪಂದದ ಹಿನ್ನೆಲೆಯಲ್ಲಿ ಇಸ್ರೇಲಿನ ರಾಜಧಾನಿಯಲ್ಲಿ ಒಂದು 'ಶಾಂತಿ ಸಭೆ'ಯನ್ನು ಉದ್ದೇಶಿಸಿ ಮಾತನಾಡಿ ತನ್ನ ಕಾರಿಗೆ ಮರಳುತ್ತಿದ್ದಾಗ ಯಿಗಲ್ ಅಮೀರ್ ಎಂಬಾತ ಎದೆ, ಹೊಟ್ಟೆ ಹಾಗೂ ಬೆನ್ನಿಗೆ ಗುಂಡು ಹಾರಿಸಿದ ಎನ್ನಲಾಗಿದೆ. ತಕ್ಷ ರಬಿನ್ ರನ್ನು ಆಸ್ಪತ್ರೆಗೆ ಸಾಗಿಸಿದರೂ ಅವರನ್ನು ಉಳಿಸಲಾಗಲಿಲ್ಲ.

ಹಂತಕನೆಂದು ಈಗ ಬಂಧಿಸಲ್ಪಟ್ಟಿರುವ ಅಮೀರ್ ಬಲಪಂಥೀಯ ಒಲವಿನವನು, ಇಸ್ರೇಲಿನ ಬಹುಪಾಲು ಬಲಪಂಥೀಯರಂತೆ ಪ್ಯಾಲೆಸ್ಟೀನ್‌ನೊಡನೆ ಯಾವ ರೀತಿಯ ಒಪ್ಪಂದವೂ ಸಲ್ಲ ಎಂದು ಭಾವಿಸುವವನು.

ವಾಸ್ತವವಾಗಿ ಎರಡು ವರ್ಷಗಳಹಿಂದೆ ರಬಿನ್ ಹಾಗೂ ಅರಾಫತ್ ನಡುವೆ ಆದ ಒಪ್ಪಂದವನ್ನು ಪ್ಯಾಲೆಸ್ಟೀನ್‌ನಲ್ಲಿಯೂ, ಪ್ಯಾಲೆಸ್ಟೀನ್ ವಿಮೋಚನಾ ಸಂಘಟನೆ ಪಿ.ಎಲ್.ಓ.ದಲ್ಲಿಯೂ ಬಹಳ ಮಂದಿ ವಿರೋಧಿಸುತ್ತಿದ್ದಾರೆ. ಇತ್ತೀಚೆಗೆ ಸೆಪ್ಟೆಂಬರ್ ಇನ್ನೊಂದು ಒಪ್ಪಂದಕ್ಕೆ ಅರಾಫತ್ ಕೂಡಾ ಅಮೇರಿಕನ್ನರು ಕೈತಿರುವಿದ್ದರಿಂದ ಸಹಿ ಹಾಕಬೇಕಾಗಿ ಬಂತು ಎಂದು ಹೇಳಲಾಗಿದೆ. ಆದರೆ ಪ್ಯಾಲೆಸ್ಟೀನಿಯನ್ನರು ಈ ಒಪ್ಪಂದ ಪ್ಯಾಲೆಸ್ಟೀನ್ ಒಂದು ದೇಶದ ಸ್ಥಾನಮಾನ ಪಡೆಯುವ ಮಾತು ಕನಸಾಗೇ ಉಳಿಯುವಂತೆ ಮಾಡಿದೆ ಎಂಬ ಕಾರಣಕ್ಕೆ ಇದನ್ನು ವಿರೋಧಿಸುತ್ತಿದ್ದಾರೆ. ಎರಡನೇ ಒಪ್ಪಂದದ ನಂತರವೂ ಪ್ಯಾಲೆಸ್ಟೀನಿಯನ್ನರು ಬಹುಸಂಖ್ಯೆಯಲ್ಲಿರುವ ಪ್ರದೇಶದಲ್ಲೂ ಇಸ್ರೇಲಿ ಹತೋಟಿ ಬಹಳವೇನೂ ಕಮ್ಮಿ ಆಗಿಲ್ಲ, ಆದರೆ ಅತ್ತ ಇಸ್ರೇಲಿ ಬಲಪಂಥೀಯರು ಇಷ್ಟನ್ನು ಕೂಡಾ ಕೊಡಲೇ ಬಾರದಿತ್ತು ಎಂಬ ಕಾರಣಕ್ಕಾಗಿ ಒಪ್ಪಂದವನ್ನು ವಿರೋಧಿಸುತ್ತಿದ್ದಾರೆ. ಈ ವಿರೋಧ ಸಾಕಷ್ಟು ವ್ಯಾಪಕವಾಗಿದೆ ಎಂದೂ ಹೇಳಲಾಗಿದೆ. ಮುಂದಿನ ವರ್ಷದ ಚುನಾವಣೆಗಳಲ್ಲಿ ಬಲಪಂಥೀಯ ಲಿಕುಡ್ ಪಕ್ಷ ಅಧಿಕಾರಕ್ಕೆ ಬರುವ ಸಂಭವವಿದ್ದು ಈ ಸೀಮಿತ ಒಪ್ಪಂದದ ಬಗ್ಗೆ ಪ್ಯಾಲೆಸ್ಟೀನಿಯನ್ನರಿಗೆ ಇನ್ನೂ ಸಂಶಯ ಈ ಹತ್ಯೆಯಿಂದ ಇನ್ನಷ್ಟುಹೆಚ್ಚಿದೆ.

ಪ್ರತ್ಯೇಕತೆಯ ವಿರುದ್ಧ ಕ್ವಿಬೆಕನ್ನರ ಮತ ದೀರ್ಘಕಾಲದ ಸಮಸ್ಯೆಗೆ ಶಾಶ್ವತ ಪರಿಹಾರ ಇನ್ನೂ ದೂರ

ಕೆನಡಾದ ಒಂದು ರಾಜ್ಯದ ಕ್ವಿಬೆಕ್‌ನಲ್ಲಿ ಅಕ್ಟೋಬರ್ 30ರಂದು ಜನಮತ ಗಣನೆ ನಡೆಯಿತು. ಕ್ವಿಬೆಕ್ ಕೆನಡಾದಿಂದ ಪ್ರತ್ಯೇಕವಾಗಬೇಕೆ ಎಂಬ ಬಗ್ಗೆ ಜನಮತ ಗಣನೆ, 'ಬೇಡ' ಎಂದು ಶೇ. 50.6 ಮಂದಿ ಹೇಳಿದ ರೆ ಪ್ರತ್ಯೇಕವಾಗಬೇಕು ಎಂದು 48.4 ಶೇ. ಮಂದಿ ಮತ ನೀಡಿದ್ದಾರೆ. ಕೇವಲ 50 ಸಾ ವಿರ ಮತಗಳು. 'ಬೇಗನೇ' ಇನ್ನೊಂದು ಜನ ಮತಗಣನೆ ನಡೆಯಲಿದೆ. ಅದರಲ್ಲಿ ನಾವು ಗೆಲ್ಲುತ್ತೇವೆ' ಎಂದು ಪ್ರತ್ಯೇಕತಾವಾದಿಗಳು ಹೇಳಿಕೊಳ್ಳುತ್ತಿದ್ದಾರಂತೆ.

ಕೆನಡಾದ ಕಮ್ಯುನಿಸ್ಟ್ ಪಕ್ಷ ಕೇವಲ 'ಬೇಡ' ವೆಂದರಷ್ಟೇ ಸಾಲದು, "ಬೇಕು" ಎಂಬುದನ್ನು ತಿರಸ್ಕರಿಸಿದರಷ್ಟೇ ಸಾಲದು ಒಂದು ಹೊಸ ಸಂವಿಧಾನ ಸಭೆಯನ್ನು ಕರೆದು ಕೆನಡಾದ ಇತರ ಪ್ರದೇಶಗಳೊಂದಿಗೆ ನಿಜವಾದ ಸಮಾನತೆಯಿರುವ ಅಲ್ಲಿನ ಆದಿವಾಸಿಗಳ ಹಕ್ಕುಗಳ ಭರವಸೆ ನೀಡುವ ಹೊಸ ಸಂವಿಧಾನವನ್ನು ತಯಾರಿಸಲು ಸಂವಿಧಾನ ಸಭೆಯನ್ನು ಕರೆಯಬೇಕು ಎಂಬ ಬಗ್ಗೆ ಕಾರ್ಮಿಕ ಸಂಘಗಳು ಹಾಗೂ ಪ್ರಜಾಪ್ರಭುತ್ವವಾದಿ ಸಂಘ-ಸಂಸ್ಥೆಗಳನ್ನು ತೊಡಗಿಸಿಕೊಂಡು ದೇಶಾದ್ಯಂತ ಪ್ರಚಾರ ನಡೆಸಿತ್ತು.

ಕೆನಡಾದ ಇತರ ಪ್ರದೇಶಗಳಲ್ಲಿ ಇಂಗ್ಲಿಷ್ ಮಾತನಾಡುತ್ತಿದ್ದರೆ, ಕ್ವಿಬೆಕ್‌ನಲ್ಲಿ ಫ್ರೆಂಚ್ ಭಾಷಿಕರ ಸಂಖ್ಯೆ ಶೇ. 80ರಷ್ಟು. 1734ರಲ್ಲಿ ಫ್ರೆಂಚ್ ಅನ್ವೇಷಕರನೊಬ್ಬ ಈ ಪ್ರದೇಶವನ್ನು ಕಂಡು ಹಿಡಿದಿದ್ದ. ಆದರೆ ನಂತರ 1759ರಲ್ಲಿ 1763ರಲ್ಲಿ ಫ್ರಾನ್ಸ್ ಮತ್ತು ಬ್ರಿಟನ್ ನಡುವೆ ನಡೆದ ಸಂಧಿಯ ಪ್ರಕಾರ ಫ್ರೆಂಚರ ವಶವಿದ್ದ ಉತ್ತರ ಅಮೇರಿಕಾದ ಪ್ರದೇಶಗಳೆಲ್ಲಾ ಬ್ರಿಟಿಷರ ಪಾಲಾಯಿತು. 1867ರಲ್ಲಿ ಕ್ವಿಬೆಕ್ ಕೂಡಾ ಸೇರಿದಂತೆ ಕೆನಡಾ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯಿತು. ಈ ಹೊಸ ಒಕ್ಕೂಟದಲ್ಲಿ ಕ್ವಿಬೆಕ್‌ನ ಫ್ರೆಂಚ್ ಭಾಷಿಕರು ಅಲ್ಪಸಂಖ್ಯಾತರಾಗಿದ್ದರು. ಶಿಕ್ಷಣ, ಭಾಷೆಯ ವಿಷಯದಲ್ಲಿ ಅವರೊಡನೆ ತಾರತಮ್ಯದಿಂದ ವರ್ತಿಸಲಾಯಿತು. ಇವರಿಂದ ಅಲ್ಲಿ ಪ್ರತ್ಯೇಕತಾವಾದಿ ಶಕ್ತಿಗಳು ಬೆಳೆಯುವಂತಾಯಿತು. ಅದರ ಪರಿಣಾಮವೇ ಈ ಜನಮತಗಣನೆ.

ಶ್ರೀಲಂಕಾ: ಜನಾಂಗೀಯ ಸಮಸ್ಯೆ ಮತ್ತೆ ಉಲ್ಬಣ?

ತಮಿಳು ಭಾಷಿಕ ಪ್ರದೇಶಗಳಿಗೆ ಹೆಚ್ಚಿನ ಸ್ವಾಯತ್ತತೆಗೆ ಅವಕಾಶವಿರುವ ಒಂದು ಒಕ್ಕೂಟವಾಗಿ ಶ್ರೀಲಂಕಾವನ್ನು ರೂಪಿಸುವ ಅಧ್ಯಕ್ಷೆ ಚಂದ್ರಿಕಾ ಕುಮಾರ ತುಂಗಾರವರ ಪ್ರಸ್ತಾವ ಶ್ರೀಲಂಕಾದಲ್ಲಿ ಬಹಳ ಕಾಲದಿಂದ ಹಿಂಸಾಚಾರಕ್ಕೆ ಕಾರಣವಾದ ಜನಾಂಗೀಯ ಸಮಸ್ಯೆಗೆ ಕೊನೆಗೂ ಪರಿಹಾರ ಕಂಡು ಹಿಡಿಯಲು ನೆರವಾಗಬಹುದೆಂಬ ನಿರೀಕ್ಷೆ ಸುಳ್ಳಾಗುತ್ತಿರುವಂತೆ ಕಾಣುತ್ತಿದೆ. ಕೆಲವು ದಿನಗಳ ಹಿಂದೆ ರಾಜಧಾನಿ ಕೊಲಂಬೋದಲ್ಲಿ ಎರಡು ತೈಲ ಸ್ಥಾವರಗಳಿಗೆ ಬೆಂಕಿ, ಪೂರ್ವ ಭಾಗದಲ್ಲಿ 60ಕ್ಕೂ ಹೆಚ್ಚು ಸಿಂಹಳೀಯರ ಕೊಲೆ ಇವೆಲ್ಲಾ ಎಲ್.ಟಿ.ಟಿ.ಇ. ಕೃತ್ಯಗಳೆಂದು ಹೇಳಲಾಗುತ್ತಿದ್ದು ಶ್ರೀಲಂಕಾ ಸರಕಾರ ಈಗ ಮಿಲಿಟರಿ ಪರಿಹಾರಕ್ಕೆ ಇಳಿದಂತೆ ಕಾಣುತ್ತಿದೆ. ಶ್ರೀಲಂಕಾದ ವಾಯುಪಡೆಗಳು ಜಾಫ್ನಾ ಪ್ರದೇಶದ ಮೇಲೆ ಬಾಂಬು ಧಾಳಿ ನಡೆಸುತ್ತಿದ್ದರೆ, ಭೂಸೇನೆ ಜಾಫ್ನಾದತ್ತ ಸಾಗುವ ದಾರಿಯಲ್ಲಿ ಹಲವು ಎಲ್.ಟಿ.ಟಿ.. ನೆಲೆಗಳನ್ನು ವಶಪಡಿಸಿಕೊಳ್ಳುತ್ತಿದ್ದಾರೆ ಎಂಬ ಸುದ್ದಿ ಬಂದಿದೆ. ಜನ ತಮ್ಮ ಮನೆ-ಮಾರು ಬಿಟ್ಟೋಡುತ್ತಿದ್ದಾರೆ. ಸಾಂಕ್ರಾಮಿಕಗಳು ಹರಡುವ ಭಯವೂ ಇದೆ ಎಂದು ಹೇಳಲಾಗುತ್ತಿದೆ.

ವಿಶ್ವಸಂಸ್ಥೆಯ ಸುವರ್ಣೋತ್ಸವ: ಪ್ರಜಾಪ್ರಭುತ್ವೀಕರಣದ, ಹಣಕಾಸಿನ ಸಮಸ್ಯೆ, ಪರಿಹಾರದ ಲಕ್ಷಣಗಳಿಲ್ಲ

ವಿಶ್ವ ಸಂಸ್ಥೆಯ ಅಕ್ಟೋಬರ್ 24ರಂದು ತನ್ನ ಸ್ಥಾಪನೆಯ ಸುವರ್ಣ ಮಹೋತ್ಸವವನ್ನು ನ್ಯೂಯಾರ್ಕ್‌ನಲ್ಲಿ ವಿಜೃಂಭಣೆಯಿಂದ ಆಚರಿಸಿತು. 185 ದೇಶಗಳ ಮುಖ್ಯಸ್ಥರು ಇದರಲ್ಲಿ ಭಾಗವಹಿಸಿದ್ದರು. ಅಮೇರಿಕಾದಂತಹ ದೇಶಗಳು ವಿಶ್ವಸಂಸ್ಥೆಯಲ್ಲಿ ತಮಗೆ ಬೇಕಾದಂತೆ ನಡೆಸುತ್ತಿರುವ ಬಗ್ಗೆ ಟೀಕೆಗಳು ಬಂದವು. ಭದ್ರತಾ ಸಮಿತಿಯನ್ನು ವಿಸ್ತರಿಸಿ ವಿಶ್ವಸಂಸ್ಥೆಯಲ್ಲಿ ಹೆಚ್ಚಿನ ಪ್ರಜಾಪ್ರಭುತ್ವ ತರಬೇಕು ಎಂಬ ಒತ್ತಾಯವೂ ಬಂದು ಹಣಕಾಸು ಪರಿಸ್ಥಿತಿ ಸುಧಾರಿಸಬೇಕೆಂಬ ಮನವಿಯೂ ಬಂತು. ಈಗ ಈ ಜಾಗತಿಕ ಸಂಸ್ಥೆಗೆ 300 ಶತಕೋಟಿ ಡಾಲರುಗಳ (ಸುಮಾರು 10 ಸಾವಿರ ಕೋಟಿ ರೂಪಾಯಿಗಳ) ಸಾಲವಿದೆ. ಅಮೇರಿಕಾ ತಾನು ಕೊಡಬೇಕಾಗಿರುವ 100 ಕೋಟಿ ಡಾಲರುಗಳನ್ನು ಕೊಟ್ಟಿಲ್ಲ. ಅದರ ಪಾಶ್ಚಿಮಾತ್ಯ ಮಿತ್ರರುಗಳೂ ಕೊಟ್ಟಿಲ್ಲ. ಈ ಬಗ್ಗೆ ಈ ದೇಶಗಳಿಂದ ಏನೂ ಸಕಾರಾತ್ಮಕ ಪ್ರತಿಕ್ರಿಯೆ ಬರಲಿಲ್ಲ.

ಅದೇ ರೀತಿ ಲ್ಯಾಟಿನ್ ಅಮೇರಿಕಾ, ಆಫ್ರಿಕಾ ದೇಶಗಳಿಗೆ ವಿಶ್ವಸಂಸ್ಥೆಯಲ್ಲಿ ಶಾಶ್ವತ ಸ್ವರೂಪದ ಪ್ರಾತಿನಿಧ್ಯವೇ ಇಲ್ಲ, ವಿಶ್ವಸಂಸ್ಥೆಯ ಅಧಿಕಾರ ವ್ಯವಸ್ಥೆ ಯುರೋಪು ಮತ್ತಿತರ ಪಾಶ್ಚಿಮಾತ್ಯ ದೇಶಗಳ ಪಕ್ಷಪಾತಿಯಾಗಿದೆ, ಇದು ಬದಲಾಗಬೇಕು ಎಂದು ಅಭಿವೃದ್ಧಿಶೀಲ ದೇಶಗಳು ಬಯಸಿದರೂ ಅದರ ಬಗ್ಗೆಯೂ ಏನಾದರೂ ಬೆಳವಣಿಗೆ ಕಂಡು ಬರುವ ನಿರೀಕ್ಷೆಯಿಲ್ಲ ಎಂದು ಹೇಳಲಾಗುತ್ತಿದೆ.

ಒಕಿನವಾದಲ್ಲಿ ಅಮೇರಿಕಾ-ವಿರೋಧಿ ರ‍್ಯಾಲಿ

ಅಕ್ಟೋಬರ್ 21ರಂದು ಜಪಾನಿನ ಒಕಿನಾವಾ ದ್ವೀಪದಲ್ಲಿ ಒಂದು ಬೃಹತ್ ರ‍್ಯಾಲಿ ನಡೆಯಿತು. ಆ ದ್ವೀಪದಲ್ಲಿರುವ ಅಮೇರಿಕನ್ ನೆಲೆಯ ಸೈನಿಕರು ಒಬ್ಬ ಜಪಾನೀ ಬಾಲಕಿಯ ಮೇಲೆ ನಡೆಸಿದ ಅತ್ಯಾಚಾರರವನ್ನು ವಿರೋಧಿಸಿ ಹಾಗೂ ಅಮೇರಿಕದೊಡನೆ ಮಾಡಿಕೊಂಡಿರುವ ಸೈನಿಕ ಒಪ್ಪಂದವನ್ನು ರದ್ದುಮಾಡಬೇಕೆಂದು ಒತ್ತಾಯಿಸಿ ಸುಮಾರು 85,000 ಜಪಾನೀಯರು ಬೃಹತ್ ಮತಪ್ರದರ್ಶನ ನಡೆಸಿದರು. ಒಂದು ಸಾರ್ವಭೌಮ ದೇಶದ ಸರಕಾರವಾಗಿ ದೃಢಕ್ರಮ ಕೈಗೊಳ್ಳದ ಜಪಾನೀ ಸರಕಾರದ ವಿರುದ್ಧವೂ ಮತಪ್ರದರ್ಶಕರು ಘೋಷಣೆಗಳನ್ನು ಕೂಗಿದರು.ಅದೇ ದಿನ ರಾಜಧಾನಿ ಟೋಕಿಯೋದಲ್ಲಿಯೂ 'ರಾಷ್ಟ್ರೀಯ ಸಂಯುಕ್ತ ಕಾರ್ಯಚರಣೆ"ಯ ಆಶ್ರಯದಲ್ಲಿ ಸುಮಾರು ಹತ್ತು ಸಾವಿರ ಮಂದಿ ರ‍್ಯಾಲಿ ನಡೆಸಿ 'ಒಕಿನಾವಾದ ಜನತೆಯ ಚಾರಿತ್ರಿಕ ಹೋರಾಟ'ಕ್ಕೆ ಸೌಹಾರ್ದ ಸೂಚಿಸಿದರು. ಒಸಾಕಾ, ಕ್ಯೋಟೋ, ಫುಕುವಾಕಾದಲ್ಲೂ ದೊಡ್ಡ ಮತಪ್ರದರ್ಶನಗಳು ನಡೆದು ಜಪಾನ್-ಅಮೇರಿಕಾ ಭದ್ರತಾ ಸಂಧಿಯನ್ನು ರದ್ದು ಮಾಡಬೇಕು, ಅಮೇರಿಕನ್ ಮಿಲಿಟರಿ ನೆಲೆಗಳನ್ನು ರದ್ದು ಮಾಡಬೇಕೆಂಬ ಬೇಡಿಕೆ ಮೊಳಗಿತು.

(ಐ.ಎನ್.ಎಸ್.)



ಜರ್ಮನಿಯಲ್ಲಿ ಹಿಂದಿನ ಕಮ್ಯುನಿಸ್ಟರ ಗಮನಾರ್ಹ ಮುನ್ನಡೆ

ಇತ್ತೀಚೆಗೆ ಜರ್ಮನಿಯ ರಾಜಧಾನಿ ಬರ್ಲಿನ್ ಸ್ಥಳೀಯ ಮಂಡಳಿಗಳ ಚುನಾವಣೆಗಳಲ್ಲಿ ಪಿ.ಡಿ.ಎಸ್. ಅಂದರೆ ಪ್ರಜಾಸತ್ತಾತ್ಮಕ ಸಮಾಜವಾದದ ಪಕ್ಷ ಗಮನಾರ್ಹ ಮುನ್ನಡೆ ಸಾಧಿಸಿದೆ. 14.6ಶೇ. ಮತಪಡೆದ ಮೂರನೇ ಪ್ರಮುಖ ಶಕ್ತಿಯಾಗಿ ಮೂಡಿ ಬಂದಿದೆ. ಇದು 1990ರ ಚುನಾವಣೆಗಳಲ್ಲಿ ಪಡೆದಕ್ಕಿಂತ ಶೇ. 5.4 ಹೆಚ್ಚು. ಪೂರ್ವ ಬರ್ಲಿನ್ ನಲ್ಲಂತೂ ಈ ಪಕ್ಷವೇ ಅತ್ಯಂತ ಬಲಿಷ್ಠ ಪಕ್ಷ. 36ರಲ್ಲಿ 34 ವಾರ್ಡುಗಳನ್ನು ಈ ಪಕ್ಷ ಗೆದ್ದಿದೆ. ಪಶ್ಚಿಮ ಬರ್ಲಿನ್‌ನಲ್ಲಿಯೂ 1990ಕ್ಕೆ ಹೋಲಿಸಿದರೆ ಮತಗಳು ದ್ವಿಗುಣಗೊಂಡರು ಇನ್ನೂ ಹೆಚ್ಚಿನ ನಿರೀಕ್ಷೆಯಿತ್ತು. ಅಲ್ಲಿ ಇನ್ನೂ ಬಹಳ ಕೆಲಸ ಮಾಡಬೇಕಾಗಿದೆ ಎಂದು ಪಿ.ಡಿ.ಎಸ್.ನ ಹೇಳಿಕೆಯೊಂದು ತಿಳಿಸಿದೆ.

ಅತ್ಯಂತ ವಿಷಪೂರ್ಣ ಕಮ್ಯುನಿಸ್ಟ್-ವಿರೋಧಿ ಅಪಪ್ರಚಾರವನ್ನು ಎದುರಿಸಿ ಸಾಧಿಸಿದ ಈ ಮುನ್ನಡೆ ಗಮನಾರ್ಹ. ಆಳುವ ಕೂಟದ ಬಲಪಂಥೀಯ ಶಕ್ತಿಗಳು 5 ಲಕ್ಷ ಮತ ಕಳಕೊಂಡವು. ಈಗ ಜರ್ಮನ್ ಸಂಸತ್ತಿನ 207 ಸ್ಥಾನಗಳಲ್ಲಿ ಪಿ.ಡಿ.ಎಸ್. 34 ಸ್ಥಾನಗಳನ್ನು ಪಡೆದಿದೆ. ಇದರಲ್ಲಿ 18 ಮಂದಿ ಮಹಿಳೆಯರು.

(ಐ.ಎನ್.ಎಸ್.)

ಲೋಕಸಂಚಾರ

ಸಂಕ್ಷಿಪ್ತ ಸುದ್ದಿಗಳು

ರಶ್ಯಾ: 5 ಲಕ್ಷ ಶಿಕ್ಷಕರ ಮುಷ್ಕರ

ಸೆಪ್ಟೆಂಬರ್ 26ರಂದು ರಷ್ಯಾದ 5,69,000 ಶಿಕ್ಷಕರು ದೇಶಾದ್ಯಂತ ಒಂದು ದಿನದ ಮುಷ್ಕರ ನಡೆಸಿ ಎಚ್ಚರಿಕೆ ನೀಡಿದ್ದಾರೆ. ತಮ್ಮ ಸಂಬಳ ನೀಡಿಕೆಯಲ್ಲಿ ವಿಳಂಬ ಹಾಗೂ ಶಿಕ್ಷಣಕ್ಕೆ ಸರಕಾರ ಸಾಕಷ್ಟು ಬೆಂಬಲ ನೀಡದಿರುವುದನ್ನು ವಿರೋಧಿಸಿ ಈ ಮುಷ್ಕರ ನಡೆಯಿತು. ರಷ್ಯಾದಲ್ಲಿ ಶಿಕ್ಷಕರ ಒಟ್ಟು ಸಂಖ್ಯೆ ಸುಮಾರು 25 ಲಕ್ಷ

ಜಪಾನೀ ಬಂಡವಾಳಶಾಹಿಗಳ ಮೇಲೆ ಸಿಐಎ ಬೇಹುಗಾರಿಕೆ!

ವ್ಯಾಪಾರ ಮತ್ತಿತರ ಆರ್ಥಿಕ ಚಟುವಟಿಕೆಗಳು ಮುಕ್ತವಾಗಿರಬೇಕು, ಸರಕಾರ ಅದರಲ್ಲಿ ತಲೆ ಹಾಕಬಾರದು ಎಂದು ನಮಗೆ ಸದಾ ಉಪದೇಶ ನೀಡುವ ಅಮೇರಿಕಾದ ಸರಕಾರದ ಕುಪ್ರಸಿದ್ಧ ಬೇಹುಗಾರಿಕೆ ಸಂಸ್ಥೆ ಸಿಐಎ ಈಗ ವಿಶ್ವಾದ್ಯಂತ ಆರ್ಥಿಕ ಬೇಹುಗಾರಿಕೆ ನಡೆಸುತ್ತಿದೆ ಎಂದು ಬಯಲಾಗಿದೆ. ಕಳೆದ ವರ್ಷ ಅಮೇರಿಕಾ-ಜಪಾನ್ ವ್ಯಾಪಾರ ಮಾತುಕತೆ ಸಂದರ್ಭದಲ್ಲಿ ಜಪಾನೀ ಬಂಡವಾಳಶಾಹಿಗಳ ಮೇಲೆ ಬೇಹುಗಾರಿಕೆ ನಡೆಸಿ ಅಮೇರಿಕನ್ ಬಂಡವಾಳಶಾಹಿಗಳಿಗೆ ಈ ಸಿಐಎ ನೆರವಾಗಿದೆಯಂತೆ. ಭಲೇ ಮುಕ್ತ ವ್ಯಾಪಾರ!

ನ್ಯಾಟೋ ಮಹಾಕಾರ್ಯದರ್ಶಿ ಹಗರಣದಿಂದಾಗಿ ರಾಜೀನಾಮೆ

ಯುರೋಪಿನ ಬಂಡವಾಳಶಾಹಿ ದೇಶಗಳ ಸೈನಿಕ ಕೂಟ ನಾಟೋದ ಮಹಾಕಾರ್ಯದರ್ಶಿ ವಿಲ್ಲಿಕ್ಲೇಸ್ ತನ್ನ ದೇಶ ಬೆಲ್ಜಿಯಂನ ಭ್ರಷ್ಟಾಚಾರದ ಹಗರಣವೊಂದರಲ್ಲಿ ಸಿಕ್ಕಿಕೊಂಡು ರಾಜೀನಾಮೆ ನೀಡಬೇಕಾಗಿ ಬಂದಿದೆ.

ಸದ್ದಾಂಗೆ ಬೃಹತ್ "ಬೇಕು" ಮತ

ಸದ್ದಾಂ ಹುಸೇನ್ ಅಧ್ಯಕ್ಷರಾಗಿ ಮುಂದುವರೆಯಬೇಕೆ, ಬೇಡವೇ ಎಂಬ ಜನಮತಗಣನೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಇರಾಕೀ ಜನ ಅಧ್ಯಕ್ಷ ಸದ್ದಾಂ ಹುಸೇನ್‌ಗೆ ಬೆಂಬಲ ಸೂಚಿಸಿದ್ದಾರೆ ಎಂದು ವರದಿಯಾಗಿದೆ. ಈ ಜನಮತಗಣನೆಯನ್ನು ವೀಕ್ಷಿಸಲು ಬೇರೆ ದೇಶಗಳ ಸುದ್ದಿ ಮಾಧ್ಯಮಗಳನ್ನು ಹಾಗೂ ಸಂಸದೀಯರನ್ನು ಆಹ್ವಾನಿಸಲಾಗಿತ್ತು. ಈ ಮೂಲಕ ಸದ್ದಾಂರನ್ನು ಪದಚ್ಯುತಗೊಳಿಸುವ ಅಮೇರಿಕದ ಪ್ರಯತ್ನಗಳಿಗೆ ಸದ್ದಾಂ ಪ್ರತ್ಯುತ್ತರ ನೀಡಿದ್ದಾರೆ. ಇರಾಕಿಗಳ ಸಂಕಷ್ಟಗಳನ್ನು ಹೆಚ್ಚಿಸಿ ಆತನನ್ನು ಜನಗಳ ನಡುವೆ ಅಪ್ರಿಯನನ್ನಾಗಿಸಿ ಅಧಿಕಾರದಿಂದ ಉರುಳಿಸುವ ತಂತ್ರ ಪ್ರಯೋಜನಕ್ಕೆ ಬಾರದು ಎಂಬುದನ್ನು ಇದು ತೋರಿಸುತ್ತದೆ ಎಂದು ಕೆಲವು ರಾಜಕಾರಣಿಗಳು ಹೇಳುತ್ತಾರೆ.

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್ ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27

ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು

ಫೋನ್ ನಂ. 2236462

ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ಒಂದು ಯಶಸ್ವಿ ಅಖಿಲ ಭಾರತ ಸಮಾವೇಶ

ನವೆಂಬರ್ 29ರಂದು ವಿದ್ಯಾರ್ಥಿಗಳು ಅಖಿಲ ಭಾರತ ಮುಷ್ಕರ



ನವೆಂಬರ್ 2 ರಂದು ಬೆಂಗಳೂರಿನಲ್ಲಿ ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ಒಂದು ಅಖಿಲ ಭಾರತ ಶೈಕ್ಷಣಿಕ ಸಮಾವೇಶ ಯಶಸ್ವಿಯಾಗಿ ನಡೆಯಿತು. ದೇಶದ ಪ್ರಮುಖ ವಿದ್ಯಾರ್ಥಿ ಸಂಘಟನೆ ಎಸ್.ಎಫ್.ಐ.ನ ಬೆಳ್ಳಿಹಬ್ಬದ ಕಾರ್ಯಕ್ರಮದ ಅಂಗವಾಗಿ ಎಸ್‌ಎಫ್‌ಐನ ಕೇಂದ್ರ ಕಾರ್ಯಕಾರಿ ಸಮಿತಿ ಇದನ್ನು ಏರ್ಪಡಿಸಿತ್ತು.

ಕರ್ನಾಟಕ ಮತ್ತಿತರ ನಾಲ್ಕು ದಕ್ಷಿಣದ ರಾಜ್ಯಗಳಿಂದ ಸುಮಾರು 1000 ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು. ಅಲ್ಲದೆ ವಿವಿಧ ಶಿಕ್ಷಕರ ಸಂಘಟನೆಗಳನ್ನು, ಭಾರತ ಜ್ಞಾನ ವಿಜ್ಞಾನ ಸಮಿತಿಯನ್ನು ಪ್ರತಿನಿಧಿಸಿದ ಸುಮಾರು 100 ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದರು.

ಸಮಾವೇಶವನ್ನು ಉದ್ಘಾಟಿಸುತ್ತಾ ಪಶ್ಚಿಮ ಬಂಗಾಳದ ಶಿಕ್ಷಣ ಮಂತ್ರಿ ಕಾಂತಿ ಬಿಸ್ವಾಸ್ ದೇಶದ ಶೈಕ್ಷಣಿಕ ಸಮುದಾಯ ಮತ್ತು ಭಾರತ ಸರಕಾರ ಶಿಕ್ಷಣವನ್ನು ಸಾರ್ವತ್ರಿಕಗೊಳಿಸಲು ಮುಂದಾಗಬೇಕು ಎಂದು ಮನವಿ ಮಾಡಿದರು. ಹೊಸ ಆರ್ಥಿಕ ವ್ಯವಸ್ಥೆ ಹೇರಿರುವ ಮಿತಿಗಳಿಂದಾಗಿ ದೇಶದ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಉಳಿದಿರುವ ಒಂದೇ ದಾರಿಯೆಂದರೆ ಶಿಕ್ಷಣದ ಮೂಲಕ ಮಾನವ ಬಂಡವಾಳವನ್ನು ಹೂಡುವುದು. ಭಾರತದ ಜನಸಂಖ್ಯೆ ವಿಶ್ವದ 16 ಶೇದಷ್ಟು, ಆದರೆ ಉಚ್ಛ ಶಿಕ್ಷಣದಲ್ಲಿರುವ ಭಾರತೀಯರು ವಿಶ್ವದಲ್ಲಿ ಶೇ.10 ಮಾತ್ರ ಎಂದು ಅಂಕಿ-ಅಂಶ ನೀಡಿದ ಬಿಸ್ವಾಸ್ ಅವರು ಶಿಕ್ಷಣದ ರಂಗದಲ್ಲಿ ವಿಪರೀತ ವಿಷಮತೆಗಳಿವೆ ಎಂದರು.

ಭಾರತದಲ್ಲಿರುವ ಒಟ್ಟು 200 ವಿಶ್ವವಿದ್ಯಾಲಯಗಳಲ್ಲಿ ಯುಜಿಸಿಯ ಗ್ರಾಂಟ್‌ನ ಶೇ. 70ಕ್ಕೂ ಹೆಚ್ಚನ್ನು ಕೇವಲ 9 ಕೇಂದ್ರ ವಿಶ್ವವಿದ್ಯಾಲಯಗಳು ಹಾಗೂ 10 ವಿಶ್ವವಿದ್ಯಾಲಯದ ದರ್ಜೆ ಪಡೆದ ಶಿಕ್ಷಣ ಸಂಸ್ಥೆಗಳೇ ಬಾಚಿಕೊಳ್ಳುತ್ತಿವೆ. ಶಿಕ್ಷಣಕ್ಕೆ ಕೇಂದ್ರದ ಬಜೆಟ್‌ನಲ್ಲಿ ಕೇವಲ 1.5ಶೇ. ಹಣ ಕೊಡಲಾಗುತ್ತದೆ. ಭಾರತ ಸರಕಾರ 1993ರಲ್ಲೇ ದೇಶದ ಒಟ್ಟು ಉತ್ಪನ್ನದ ಶೇ. 6 ಶೇ.ವನ್ನು ಶಿಕ್ಷಣಕ್ಕೆ ಕೊಡುವುದಾಗಿ ಭರವಸೆ ನೀಡಿದ್ದರೂ ಈಗಲೂ ನೀಡುತ್ತಿರುವುದು ಶೇ. 3.5 ಮಾತ್ರ. ಶಿಕ್ಷಣವನ್ನು ಸಾರ್ವತ್ರಿಕಗೊಳಿಸಬೇಕೆಂಬ ರಾಷ್ಟ್ರೀಯ ಗುರಿಯಿಂದ ದೂರ ಸರಿಯುತ್ತಿರುವ ರಾವ್ ಸರಕಾರ ಈ ಶೋಚನೀಯ ಸಂದರ್ಭದಲ್ಲೂ ಶಿಕ್ಷಣ ನೀಡುವ ಹೊಣೆಯನ್ನು ಲಾಭದಾಸೆಯ ಖಾಸಗಿಯವರಿಗೆ ಒಪ್ಪಿಸುತ್ತಿದೆ. ಈ ರೀತಿಯ ತ್ವರಿತ ಖಾಸಗೀಕರಣದಿಂದಾಗಿ ಶಿಕ್ಷಣದ ವ್ಯಾಪಾರೀಕರಣವಾಗುತ್ತಿದೆ ಎಂದು ಅವರು ವಿವರಿಸಿದರು.

ಸ್ವಯಂ ಹಣಕಾಸಿನ ವಿಶ್ವವಿದ್ಯಾಲಯಗಳೆಂಬುದು ಶಿಕ್ಷಣದ ವ್ಯಾಪಾರೀಕರಣದ ಒಂದು ಭಾಗ ಎಂದ ಅವರು ಕೇಂದ್ರ ಸರ್ಕಾರದ ಈ ಶಿಕ್ಷಣ-ವಿರೋಧಿ ನೀತಿಗಳ ವಿರುದ್ಧ ವಿದ್ಯಾರ್ಥಿ ಸಮುದಾಯ ಹಾಗೂ ಶಿಕ್ಷಕ ಸಮುದಾಯ ಒಟ್ಟಾಗಿ ಹೋರಾಡಬೇಕು ಎಂದು ಮನವಿ ಮಾಡಿದರು.

ಕರ್ನಾಟಕ ವಿಧಾನಸಭಾಧ್ಯಕ್ಷ ರಮೇಶ್ ಕುಮಾರ್ ಉದ್ಘಾಟನಾ ಅಧಿವೇಶನದ ಅಧ್ಯಕ್ಷ ಭಾಷಣ ಮಾಡುತ್ತಾ ರಾಜ್ಯದಲ್ಲಿ ಶಿಕ್ಷಣದ ಮೇಲೆ ಕೋಮುವಾದಿ ಶಕ್ತಿಗಳ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳ ಲಾಬಿಗಳ ಪ್ರಭಾವದತ್ತ ಗಮನಸೆಳೆಯುತ್ತ ಎಲ್ಲರಿಗೂ ಶಿಕ್ಷಣ ನೀಡಬೇಕಾದರೆ ಅದನ್ನು ಕೋಮುವಾದಿ ಹಾಗೂ ಲಾಭಕೋರ ಖಾಸಗಿ ಏಜೆನ್ಸಿಗಳಿಂದ ಉಳಿಸಬೇಕು ಎಂದರು.

ವಿಶ್ವ ವಿದ್ಯಾಲಯದ ಉಪಕುಲಪತಿಯಂತಹ ಸ್ಥಾನದ ಜವಾಬ್ದಾರಿ ಹೊರುವವರು ಕೇವಲ ಸಮರ್ಥ ಆಡಳಿತಗಾರರಾಗಿದ್ದರಷ್ಟೇ ಸಾಲದು ಸೃಜನಶೀಲ ಚಿಂತಕರಾಗಿರಬೇಕು. ಇಂದು ಚಂದ್ರಸ್ವಾಮಿ, ಸಾಯಿಬಾಬಾನ ಶಿಷ್ಯರು, ರಾಜಕೀಯ ಪ್ರಭಾವಿಗಳು ಇಂತಹ ಅಧಿಕಾರ ಸ್ಥಾನಗಳಿಗೇರುತ್ತಿದ್ದಾರೆ. ಇಂತಹವರಿಂದ ಕನಿಷ್ಠ ಸರಿಯಾದ ಆಡಳಿತವನ್ನಾದರೂ ನಾವು ಹೇಗೆ ನಿರೀಕ್ಷಿಸಲು ಸಾಧ್ಯ ಎಂದು ಅವರು ಪ್ರಶ್ನಿಸಿದರು.

ಇತ್ತೀಚೆಗೆ ಗಣಪ ಹಾಲು ಕುಡಿದ ಘಟನೆಯನ್ನು ಪ್ರಸ್ತಾಪಿಸಿ, ಇದು ಭಾರತದಲ್ಲಿ ನಾವು ಪಡೆಯುತ್ತಿರುವ ಶಿಕ್ಷಣದ ಗುಣಮಟ್ಟಕ್ಕೆ ಸಾಕ್ಷಿ ಎಂದರು. ಮೂಢ ನಂಬಿಕೆಯನ್ನು ಹರಡುತ್ತಿರುವ ಸ್ವಾರ್ಥಿಗಳ ವಾದವನ್ನೇ ಬಳಸಿದ ಅವರು ದೇಶದಾದ್ಯಂತ ಲಕ್ಷಾಂತರ ಮಕ್ಕಳು ಕುಡಿಯಲು ಹಾಲಿಲ್ಲದೆ ಒದ್ದಾಡುತ್ತಿರುವಾಗ ಈ ಪ್ರಮಾಣದಲ್ಲಿ ಹಾಲು ಕುಡಿದ ಗಣಪನಿಗೆ ಬುದ್ಧಿ ಇಲ್ಲವೇ ಎಂದು ಪ್ರಶ್ನಿಸಿದರು.

"ಕರ್ನಾಟಕ ಶಿಕ್ಷಣ ರಂಗ" ಎಂಬ ಎಸ್.ಎಫ್.ಐ. ಕರ್ನಾಟಕ ರಾಜ್ಯ ಸಮಿತಿ ಹೊರತಂದಿರುವ ಕಿರುಹೊತ್ತಿಗೆಯನ್ನು ಅವರು ಬಿಡುಗಡೆ ಮಾಡಿದರು.

ಎಸ್.ಎಫ್.ಐ.ನ ಅಖಿಲ ಭಾರತ ಅಧ್ಯಕ್ಷ ವೈ.ವೆಂಕಟೇಶ್ವರರಾವ್ ಎಸ್‌ಎಫ್‌ಐನ ಕೆಂಪು ತಾರೆಯಿರುವ ಬಿಳಿ ಬಾವುಟವನ್ನು ಹಾರಿಸುವುದರೊಂದಿಗೆ ಸಮಾವೇಶ ಆರಂಭವಾಯಿತು. ಸಮಾವೇಶದ ಸಂಘಟನಾ ಸಮಿತಿಯ ಕಾರ್ಯಾಧ್ಯಕ್ಷ ವಿ. ಗೋಪಾಲಗೌಡರು ಸ್ವಾಗತ ಭಾಷಣ ಮಾಡಿದರು. ಎಸ್.ಎಫ್.ಐ. ಕಾರ್ಯದರ್ಶಿ ಕೆ.ಪ್ರಕಾಶ್ ವಂದನಾರ್ಪಣೆ ಮಾಡಿದರು. ಎಸ್.ಎಫ್.ಐ.ನ ರಾಷ್ಟ್ರೀಯ ಕಾರ್ಯದರ್ಶಿ ಬ್ರತಿನ್‌ಸೇನ್ ಗುಪ್ತಾ ಸಮಾವೇಶದ ಪ್ರಧಾನ ಭಾಷಣ ಮಾಡುತ್ತಾ ಈ ಸಮಾವೇಶ ಭಾರತ ಸರಕಾರದ ಹೊಸ ಶಿಕ್ಷಣ ನೀತಿಯ ಭಾಗವಾಗಿರುವ ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ಹೋರಾಟದ ಭಾಗ ಎಂದರು.

ಎಸ್‌ಎಫ್‌ಐನ ಹಿಂದಿನ ಅಖಿಲ ಭಾರತ ಅಧ್ಯಕ್ಷ ಹಾಗೂ ಈಗ ಸಿಪಿಐ(ಎಂ)ನ ಪೊಲಿಟ್ ಬ್ಯೂರೋ ಸದಸ್ಯರಾಗಿರುವ ಸೀತಾರಾಂ ಯೆಚೂರಿ, ಸಿಪಿಐ(ಎಂ) ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ, ಎಂಎಲ್‌ಸಿಯವರಾದ ಸುದರ್ಶನ್ ಹಾಗೂ ಎಸ್‌ಎಫ್‌ಐ ರಾಜ್ಯ ಅಧ್ಯಕ್ಷ ಶಾಂತರಾಮ ನಾಯಕ್ ಉದ್ಘಾಟನಾ ಅಧಿವೇಶನದಲ್ಲಿ ವೇದಿಕೆಯ ಮೇಲಿದ್ದರು.

ನಂತರ ಸುರತ್ಕಲ್‌ನ ಕರ್ನಾಟಕ ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕ ಡಾ.ರಾಜೇಂದ್ರ ಉಡುಪ "ಭಾರತದಲ್ಲಿ ತಾಂತ್ರಿಕ ಶಿಕ್ಷಣ" ಎಂಬ ಪ್ರಬಂಧವನ್ನು ಹಾಗೂ ಕೊಚ್ಚಿನ್ ವಿಶ್ವವಿದ್ಯಾಲಯದ ಡಾ. ಕೆ.ಎನ್. ಗಣೇಶ "ಭಾರತದಲ್ಲಿ ಉನ್ನತ ಶಿಕ್ಷಣ" ಎಂಬ ಪ್ರಬಂಧವನ್ನು ಮಂಡಿಸಿದರು. ಈ ಪ್ರಬಂಧಗಳ ಮೇಲೆ ಚರ್ಚೆ ನಡೆಯಿತು. ಡಾ. ಜಿ.ರಾಮಕೃಷ್ಣ ಇದರ ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಗೋವಿಂದ ರಾವ್, ಬಿಜಿವಿಎಸ್ ರಾಜ್ಯ ಕಾರ್ಯದರ್ಶಿ ಹೆಚ್.ಎಸ್. ನಿರಂಜನಾರಾಧ್ಯ, ಡಾ. ನರೇಂದ್ರ ಪಾಣಿ, ಡಾ. ಎಸ್. ಚಟರ್ಜಿ, ಡಾ. ಎಸ್. ಚಂದ್ರಶೇಖರ್ ಚರ್ಚೆಯಲ್ಲಿ ಪಾಲ್ಗೊಂಡರು. ಸೀತಾರಾಂ ಯೆಚೂರಿ ಸಮಾವೇಶದ ಸಮಾರೋಪ ಭಾಷಣ ಮಾಡಿದರು.(ಪ್ರತ್ಯೇಕ ವರದಿ ನೋಡಿ) ಎಸ್.ಎಫ್.ಐ. ಅಧ್ಯಕ್ಷ ವೈ. ವೆಂಕಟೇಶ್ವರ ರಾವ್ ಈ ಸಮಾರೋಪ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. ಸಮಾವೇಶ ಕೇರಳದಲ್ಲಿ ಸ್ವಯಂ ಹಣಕಾಸಿನ ಕಾಲೇಜುಗಳ ವಿರುದ್ಧ ನಡೆಯುತ್ತಿರುವ ವಿದ್ಯಾರ್ಥಿಗಳ ಹೋರಾಟಕ್ಕೆ ಬೆಂಬಲ ಸೂಚಿಸಿರುವ ಹಾಗೂ ಪಾಕಿಸ್ತಾನಕ್ಕೆ ಅಮೇರಿಕಾ ಶಸ್ತ್ರಾಸ್ತ್ರ ಪೂರೈಸುವುದಕ್ಕೆ ವಿರೋಧ ಸೂಚಿಸುವ ನಿರ್ಣಯಗಳನ್ನು ಅಂಗೀಕರಿಸಿತು. ನವೆಂಬರ್ 29, 1995ರಂದು ಕೇಂದ್ರ ಸರಕಾರ ಹೊಸ ಆರ್ಥಿಕ, ಕೈಗಾರಿಕಾ ಹಾಗೂ ಶಿಕ್ಷಣ ನೀತಿಗಳ ವಿರುದ್ಧ ವಿದ್ಯಾರ್ಥಿಗಳು ಮುಷ್ಕರ ನಡೆಸುವ ನಿರ್ಣಯವನ್ನು ಕೈಗೊಳ್ಳಲಾಯಿತು. ○



ಶಿಕ್ಷಣದ ವ್ಯಾಪಾರೀಕರಣ ಸರಕಾರ ತನ್ನ ಸಾಮಾಜಿಕ ಹೊಣೆಗಾರಿಕೆಯಿಂದ ಜಾರಿಕೊಳ್ಳುವ ಯತ್ನದ ಫಲ

-ಸೀತಾರಾಂ ಯೆಚೂರಿ

ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ಹೋರಾಟದಲ್ಲಿ ಅಲ್ಲಿ-ಇಲ್ಲಿ ನಿರ್ದಿಷ್ಟ ಕಾಲೇಜುಗಳಲ್ಲಿ ಹೋರಾಟಗಳನ್ನು ನಡೆಸುವುದರಿಂದಷ್ಟೇ ಸಾಲದು, ಈ ಕಾಲದಲ್ಲೇ ಇದು ಏಕೆ ವ್ಯಾಪಕವಾಗುತ್ತಿದೆ ಎಂದು ಅದರ ರಾಷ್ಟ್ರೀಯ ಹಾಗೂ ಅಂತರ್‍ರಾಷ್ಟ್ರೀಯ ಸಂದರ್ಭವನ್ನು ಅರ್ಥ ಮಾಡಿಕೊಳ್ಳಬೇಕು. ಇಲ್ಲವಾದರೆ ನಾವು ಆಳುವ ವರ್ಗಗಳ ಹಾಗೂ ಸಾಮ್ರಾಜ್ಯಶಾಹಿಯ ಬಲೆಗೆ ಬೀಳುತ್ತವೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ ವಿದ್ಯಾರ್ಥಿಗಳಿಗೆ ಸಲಹೆ ಮಾಡಿದರು. ಅವರು ಬೆಂಗಳೂರಿನಲ್ಲಿ ಎಸ್.ಎಫ್.ಐ.ನ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ನವೆಂಬರ್ 2ರಂದು ನಡೆದ ಅಖಿಲ ಭಾರತ ಸಮಾವೇಶದ ಸಮಾರೋಪ ಭಾಷಣ ಮಾಡುತ್ತಿದ್ದರು.

ಶಿಕ್ಷಣ ಇಂದು ಹಿಂದೆಂದಿಗಿಂತಲೂ ಒಂದು ವಿಶೇಷಾಧಿಕಾರವಾಗಿಬಿಟ್ಟಿದೆ. ಅದನ್ನು ಹಕ್ಕೆಂದು ಪರಿಗಣಿಸಲಾಗುತ್ತಿಲ್ಲ, ಪ್ರಾಥಮಿಕ ಶಿಕ್ಷಣ/ಮಾಧ್ಯಮಿಕ ಶಿಕ್ಷಣಕ್ಕೂ, ಉಚ್ಛ ಶಿಕ್ಷಣಕ್ಕೂ ಹಣ ನೀಡಿಕೆ ಕಡಿಮೆಯಾಗದೆ ಎಂದಷ್ಟೇ ನೋಡಿದರೆ ಸಾಲದು, ಕಡಿತವಾಗುತ್ತಿದೆ. ಇವೆಲ್ಲ ಐಎಂಎಫ್ ಹೇರಿದ ನೀತಿಗಳ ಫಲವೆಂಬುದೂ ನಿಜ. ಆದರೆ ಇವೆಲ್ಲಾ ಈಗಲೇ ಏಕೆ ಸಂಭವಿಸುತ್ತಿವೆ ಎಂದೂ ಯೋಚಿಸಬೇಕಾಗುತ್ತದೆ. ಏಕೆ ಈಗ ಐಎಂಎಫ್/ವಿಶ್ವ ಬ್ಯಾಂಕ್ ತಮ್ಮ ಶರತ್ತುಗಳನ್ನು ಹೇರುವಲ್ಲಿ ಸಫಲವಾಗುತ್ತಿದೆ ಎಂದು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಗಂಭೀರ ಚಿಂತನೆಯಿಲ್ಲದೆ ಪರಿಣಾಮಕಾರಿ ಹೋರಾಟ ಸಾಧ್ಯವಾಗದು ಎಂದು ಕಾಂ. ಯೆಚೂರಿ ಎಚ್ಚರಿಸಿದರು.

ಶಿಕ್ಷಣದ ವ್ಯಾಪಾರೀಕರಣವಾಗುತ್ತಿರುವುದ ಕೇವಲ ಐಎಂಎಫ್ ಪ್ರೇರಿತ ಮಾರುಕಟ್ಟೆ ನೀತಿಗಳಿಂದಾಗಿಯಷ್ಟೇ ಅಲ್ಲ, ಅದಕ್ಕಿಂತ ಮುಖ್ಯವಾಗಿ ಸರಕಾರ ತನ್ನ ಸಾಮಾಜಿಕ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುತ್ತಿರುವ ನೀತಿಯಿಂದಾಗಿ. ಇದು ಐ.ಎಂ.ಎಫ್. ಶರತ್ತುಗಳ ಮುಖ್ಯಾಂಶ ಎಂಬುದು ಐಎಂಎಫ್ ವರ್ಗ ದೃಷ್ಟಿ ಎಂದು ಯೆಚೂರಿ ವಿವರಿಸಿದರು. ಐಎಂಎಫ್ ಈ ರೀತಿ ಭಾರತ ಸರಕಾರ ಶಿಕ್ಷಣದ ಮೇಲಿನ ಖರ್ಚನ್ನು ಕಡಿಮೆ ಮಾಡುವಂತೆ ಮಾಡಿ ಕೆಲವು ಸಂಸ್ಥೆಗಳಿಗೆ ನೇರವಾಗಿ ಐಎಂಎಫ್ ಸಹಾಯ ಮಾಡುವ ನೆಪದಲ್ಲಿ ಭಾರತದಲ್ಲಿ ಶಿಕ್ಷಣದ ಸ್ವರೂಪವನ್ನು ಬದಲಿಸುವ ಹುನ್ನಾರವೂ ಇದರಲ್ಲಿದೆ ಎಂದೂ ಕಾಂ. ಯೆಚೂರಿ ಎಚ್ಚರಿಸಿದರು. ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ಹೋರಾಟ ರೂಪಿಸುವಾಗ ಈ ಅಂಶಗಳನ್ನು ಮರೆಯಬಾರದು ಎಂದು ಅವರು ಸಲಹೆ ಮಾಡಿದರು. ಭಾರತ ಸರಕಾರ ಸ್ವಾತಂತ್ರ್ಯದ ನಾಲ್ಕೂವರೆ ದಶಕಗಳ ನಂತರ ಈಗ ಇಂತಹ ನೀತಿ ಏಕೆ ಅನುಸರಿಸುತ್ತಿದೆ ಎಂಬುದನ್ನು ವಿವರಿಸುತ್ತಾ ಸ್ವಾತಂತ್ರ್ಯೋತ್ತರ ಭಾರತದ ಆಳರಸರು ಹಿಡಿದ ಬೆಳವಣಿಗೆಯ ದಾರಿಯನ್ನು ಅವರು ವಿಶ್ಲೇಷಿಸಿದರು.

ಶಿಕ್ಷಣ ರಂಗದಲ್ಲಿ ಈಗ ಏನಿದೆಯೋ ಅದನ್ನು ಮೊದಲು ಉಳಿಸಿಕೊಂಡು ಅದನ್ನು ಮುಂದಕ್ಕೊಯ್ದು ಎಲ್ಲರಿಗೂ ಶಿಕ್ಷಣದ ಗುರಿಯತ್ತ ಸಾಗಬೇಕು. ಈ ಪ್ರಯತ್ನದಲ್ಲಿ ವಿದ್ಯಾರ್ಥಿಗಳ ಆಂದೋಲನಕ್ಕೆ ಹಲವಾರು ಸವಾಲುಗಳು ಬರುತ್ತಿವೆ. ಜಾತೀವಾದ, ಕೋಮುವಾದಿ, ವಿದ್ಯಾರ್ಥಿ ಆಂದೋಲನದ ಐಕ್ಯತೆಯನ್ನು ಮುರಿಯಲು ಪ್ರಯತ್ನಿಸುತ್ತವೆ. ಇವನ್ನು ಎದುರಿಸಬೇಕು. ಎಲ್ಲರಿಗೂ ಶಿಕ್ಷಣ, ಎಲ್ಲರಿಗೂ ಉದ್ಯೋಗ ಇಲ್ಲದಿರುವ ಸನ್ನಿವೇಶದಲ್ಲಿ ಎಸ್.ಎಫ್.ಐ. ಸಾಮೂಹಿಕ ದಮನದ ವಿರುದ್ಧವೂ ಹೋರಾಟ ನಡೆಸಿ ಆ ಹೋರಾಟಗಳನ್ನು ಪ್ರಜಾಪ್ರಭುತ್ವ ಹೋರಾಟದೊಂದಿಗೆ ಬೆಸೆಯಬೇಕು. ವಿಚಾರಗಳ ಸಮರದಲ್ಲಿ ಭಾಗವಹಿಸಬೇಕು. ಈ ಎಲ್ಲಾ ಹೋರಾಟಗಳಲ್ಲಿ ಸಾಂಸ್ಕೃತಿಕ ಆಕ್ರಮಣದ ವಿರುದ್ಧ ಹೋರಾಟಗಳಲ್ಲಿ ಎಸ್.ಎಫ್.ಐ. ಮುಂಚೂಣಿಯಲ್ಲಿರಬೇಕು ಎಂದು ಸೀತಾರಾಂ ಯೆಚೂರಿ ಸಲಹೆ ಮಾಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಹೊಸ ರಾಜ್ಯ ಸಮಿತಿ

ಬಿಜಾಪುರದಲ್ಲಿ ನವೆಂಬರ್ 6 ರಿಂದ 8ರವರೆಗೆ ನಡೆದ ಕರ್ನಾಟಕ ಪ್ರಾಂತ ರೈತ ಸಂಘದ 11ನೇ ರಾಜ್ಯ ಸಮ್ಮೇಳನ 25 ಸದಸ್ಯರಿರುವ ಹೊಸ ರಾಜ್ಯ ಸಮಿತಿಯನ್ನು ಆರಿಸಿತು. ಹೊಸ ಪದಾಧಿಕಾರಿಗಳು ವಿವರ ಹೀಗಿದೆ.

ಅಧ್ಯಕ್ಷರು:	ಮಾರುತಿ ಮಾನ್ಪಡೆ
ಉಪಾಧ್ಯಕ್ಷರು:	ಪಿ. ರಾಮಚಂದ್ರರಾವ್, ಭೀಮಸಿ ಕಲಾದಗಿ, ಸಿ.ಎಸ್. ಬಾಳೆ, ಕೆ.ಎಂ. ವೆಂಕಟೇಶ್
ಪ್ರಧಾನ ಕಾರ್ಯದರ್ಶಿ:	ಪಿ. ಜಗನ್ನಾಥ್
ಜಂಟಿ ಕಾರ್ಯದರ್ಶಿಗಳು:	ಯು. ಬಸವರಾಜ್, ರಾಮಚಂದ್ರ ಉಚ್ಚಿಲ್
ಖಜಾಂಚಿ:	ಅಬ್ರಹಂ ಕರ್ಕಡ

ಕಟಕ್‌ನಲ್ಲಿ ನಡೆಯುವ ಅಖಿಲ ಭಾರತ ಕಿಸಾನ್ ಸಭಾದ 28ನೇ ಸಮ್ಮೇಳನದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದಿಂದ 19 ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.